# ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ ಅಧಿನಿಯಮ, 1987

(1987 ರ ಅಧಿನಿಯಮ ಸಂಖ್ಯೆ 53)

**[3-9-2001ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 18ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 68ರಿಂದ 85ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ-1

### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು.

### ಅಧ್ಯಾಯ - II

### ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸ್ಥಾಪನೆ ಮತ್ತು ಅದರ ಬಂಡವಾಳ

3. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸ್ಥಾಪನೆ ಮತ್ತು ನಿಗಮನ.
4. ಬಂಡವಾಳ.

### ಅಧ್ಯಾಯ - III

### ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವ್ಯವಸ್ಥಾಪನೆ

5. ವ್ಯವಸ್ಥಾಪನೆ.
6. ನಿರ್ದೇಶಕ ಮಂಡಲಿ.
7. ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕರು ಮತ್ತು ಇತರ ನಿರ್ದೇಶಕರ ಪದಾವಧಿ, ಸೇವಾ ಷರತ್ತುಗಳು, ಇತ್ಯಾದಿ.
8. ಅನರ್ಹತೆಗಳು.
9. ನಿರ್ದೇಶಕರು ಪದವನ್ನು ತೆರವು ಮಾಡುವುದು ಮತ್ತು ಪದಕ್ಕೆ ರಾಜೀನಾಮೆ ಕೊಡುವುದು.
10. ಅಧ್ಯಕ್ಷನ ಅಥವಾ ವ್ಯವಸ್ಥಾಪಕ ನಿರ್ದೇಶಕನ ಪದದ ಆಕಸ್ಮಿಕ ತೆರವು.
11. ಮಂಡಲಿಯ ಸಭೆಗಳು.
12. ಕಾರ್ಯನಿರ್ವಾಹಕ ಸಮಿತಿ ಮತ್ತು ಇತರ ಸಮಿತಿಗಳು.
13. ಕೆಲವು ಸಂದರ್ಭಗಳಲ್ಲಿ ಮಂಡಲಿಯ ನಿರ್ದೇಶಕನು ಅಥವಾ ಅದರ ಸಮಿತಿಯ ಸದಸ್ಯನು ಸಭೆಗಳಲ್ಲಿ ಭಾಗವಹಿಸದಿರುವುದು.

### ಅಧ್ಯಾಯ - IV

### ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವ್ಯವಹಾರ

14. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವ್ಯವಹಾರ.
15. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಸಾಲ ಪಡೆಯುವುದು ಮತ್ತು ಠೇವಣಿಗಳನ್ನು ಅಂಗೀಕರಿಸುವುದು.
16. ವಿದೇಶೀ ಕರೆನ್ಸಿಯಲ್ಲಿ ಸಾಲಗಳು.

16ಎ. ಸಾಲಪಡೆಯುವವನಿಗೆ ನೆರವನ್ನು ಯಾವಾಗ ಕೊಡಬೇಕು ಅಥವಾ ಭದ್ರತೆಯಾಗಿ ಕೊಡಲೊಪ್ಪಿದ ಸ್ವತ್ತಿನಲ್ಲಿ ಋಣಭಾರ.

16ಬಿ. ನ್ಯಾಸದಲ್ಲಿ ಇರಬೇಕಾದ ಮೊಬಲಗು ಮತ್ತು ಭದ್ರತೆ.

17. ಹಕ್ಕುಗಳ ವರ್ಗಾವಣೆಗೆ ಅಧಿಕಾರ.

18. ಹಕ್ಕುಗಳನ್ನು ಆರ್ಜಿಸಲು ಅಧಿಕಾರ.

18ಎ. ನೋಂದಣಿಯಿಂದ ವಿನಾಯಿತಿ.

18ಬಿ. ಬಾಕಿಗಳನ್ನು ಭೂಕಂದಾಯದ ಬಾಕಿಗಳಂತೆ ವಸೂಲು ಮಾಡುವುದು.

19. ಹಣಕಾಸು ವ್ಯವಸ್ಥೆಗಾಗಿ ಷರತ್ತುಗಳನ್ನು ವಿಧಿಸಲು ಅಧಿಕಾರ.

20. ಒಪ್ಪಂದ ಮಾಡಿಕೊಂಡ ಅವಧಿಗೆ ಮುಂಚೆ ಮರು ಸಂದಾಯ ಮಾಡಲು ಕರೆ ನೀಡುವ ಅಧಿಕಾರ.

21. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ದಾಖಲೆಗಳನ್ನು ಪರಿಶೀಲಿಸುವ ಅವಕಾಶ ಹೊಂದಿರುವುದು.

22. ಸಾಲದ ಅಥವಾ ಮುಂಗಡದ ಸಿಂಧುತ್ವವನ್ನು ಪ್ರಶ್ನಿಸತಕ್ಕುದಲ್ಲ.

23. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ತನ್ನವೇ ಬಾಂಡುಗಳು ಅಥವಾ ಡಿಬೆಂಚರುಗಳ ಮೇಲೆ ಸಾಲಗಳು ಅಥವಾ ಮುಂಗಡಗಳನ್ನು ನೀಡದಿರುವುದು.

24. ಪರಿಶೀಲಿಸಲು ಅಧಿಕಾರ.

25. ಸಾಲದ ಮಾಹಿತಿಯನ್ನು ಸಂಗ್ರಹಿಸಲು ಅಧಿಕಾರ.

26. ಮಾಹಿತಿಯನ್ನು ಪ್ರಕಟಿಸಲು ಅಧಿಕಾರ.

27. ಸಲಹಾ ಸೇವೆಗಳು.

## ಅಧ್ಯಾಯ – V

### ಠೇವಣಿಗಳನ್ನು ಸ್ವೀಕರಿಸುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಉಪಬಂಧಗಳು

28. ಠೇವಣಿಯ ಪರಿಭಾಷೆ.

29. ಕೆಲವು ಸಂದರ್ಭಗಳಲ್ಲಿ ಈ ಅಧ್ಯಾಯವು ಅನ್ವಯಿಸದಿರುವುದು.

29ಎ. ನೋಂದಣಿಯ ಮತ್ತು ನಿವ್ವಳ ಒಡೆತನದ ನಿಧಿಯ ಅಗತ್ಯತೆ.

29ಬಿ. ಆಸ್ತಿಗಳ ಶೇಕಡಾ ಪ್ರಮಾಣವನ್ನು ಉಳಿಸಿಕೊಂಡು ಬರುವುದು.

29ಸಿ. ಮೀಸಲು ನಿಧಿ.

30. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಹಣದ ಠೇವಣಿಗಳನ್ನು ಕೋರುವ ವಿವರಣ ಪತ್ರದ ಅಥವಾ ಜಾಹಿರಾತಿನ ನೀಡಿಕೆಯನ್ನು ನಿಯಂತ್ರಿಸುವುದು ಅಥವಾ ನಿಷೇಧಿಸುವುದು.

30ಎ. ಕಾರ್ಯನೀತಿಯನ್ನು ನಿರ್ಧರಿಸಲು ಮತ್ತು ನಿರ್ದೇಶನಗಳನ್ನು ನೀಡಲು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರ

31. ಠೇವಣಿಗಳಿಗೆ ಸಂಬಂಧಿಸಿದಂತೆ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಂದ ಮಾಹಿತಿಯನ್ನು ಸಂಗ್ರಹಿಸಲು ಮತ್ತು ನಿರ್ದೇಶನಗಳನ್ನು ನೀಡಲು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರ.

32. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಆಗತ್ಯಪಡಿಸುವ ವಿವರಗಳು, ಇತ್ಯಾದಿಗಳನ್ನು ಒದಗಿಸುವುದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಕರ್ತವ್ಯವಾಗಿರುವುದು

33. ಲೆಕ್ಕಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು.

33ಎ. ತೇವಣಿ ಸ್ವೀಕಾರವನ್ನು ಮತ್ತು ಆಸ್ತಿಗಳ ಪರಭಾರೆಯನ್ನು ನಿಷೇಧಿಸಲು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರ.

33ಬಿ. ಪರಿಸಮಾಪನ ಅರ್ಜಿಯನ್ನು ದಾಖಲ್ಮಾಡಲು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರ.

34. ಪರಿಶೀಲನೆ.

35. ಅನಧಿಕೃತ ವ್ಯಕ್ತಿಗಳು ತೇವಣಿಗಳನ್ನು ಕೋರದಿರುವುದು.

35ಎ. ಮಾಹಿತಿಯನ್ನು ಬಹಿರಂಗಪಡಿಸುವುದು.

35ಬಿ. ಯಾವುದೇ ಗೃಹನಿರ್ಮಾಣ ಹಣಕಾಸು ಸಂಸ್ಥೆಗೆ ವಿನಾಯಿತಿ ಕೊಡುವುದಕ್ಕೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರ.

36. Vನೇ ಅಧ್ಯಾಯವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರುವುದು.

36ಎ. ತೇವಣಿಯನ್ನು ಮರುಸಂದಾಯ ಮಾಡುವಂತೆ ಆದೇಶಿಸುವುದಕ್ಕೆ ಅಧಿಕಾರ.

36ಬಿ. ತೇವಣಿದಾರರಿಂದ ನಾಮನಿರ್ದೇಶನ.

## ಅಧ್ಯಾಯ-Vಎ

## ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಇತರ ಉಪಬಂಧಗಳು

36ಸಿ. ಪರಿಭಾಷೆಗಳು

36ಡಿ. ವಸೂಲಿ ಅಧಿಕಾರಿಯ ನೇಮಕಾತಿ

36ಇ. ವಸೂಲಿ ಅಧಿಕಾರಿಗೆ ಅರ್ಜಿ ಸಲ್ಲಿಸುವುದು.

36ಎಫ್. 36ಇ ಪ್ರಕರಣದ ಮೇರೆಗೆ ಸಲ್ಲಿಸುವ ಅರ್ಜಿಗೆ ಸಂಬಂಧಪಟ್ಟ ಪ್ರಕ್ರಿಯೆ.

36ಜಿ. ವಸೂಲಿ ಅಧಿಕಾರಿಯ ಆದೇಶದ ಜಾರಿ.

36ಎಚ್. ಸ್ವತ್ತನ್ನು ವಹಿಸಿಕೊಳ್ಳುವಲ್ಲಿ ವಸೂಲಿ ಅಧಿಕಾರಿಗೆ ಮುಖ್ಯ ಮಹಾನಗರ ಮಾಜಿಸ್ಟ್ರೇಟ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರ ಸಹಾಯ.

36ಐ ಅಪೀಲು ನ್ಯಾಯಾಧಿಕರಣದ ಸ್ಥಾಪನೆ.

36ಜೆ. ಅಪೀಲು ನ್ಯಾಯಾಧಿಕರಣದ ರಚನೆ

36ಕೆ. ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯಾಗಿ ನೇಮಕವಾಗುವುದಕ್ಕೆ ಇರಬೇಕಾದ ಅರ್ಹತೆಗಳು.

36ಎಲ್. ಪದಾವಧಿ.

36ಎಂ. ಅಪೀಲು ನ್ಯಾಯಾಧಿಕರಣದ ಸಿಬ್ಬಂದಿ.

36ಎನ್. ಪ್ರಿಸೈಡಿಂಗ್ ಅಧಿಕಾರಿಗಳ ವೇತನಗಳು ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು.

36ಒ. ಖಾಲಿ ಸ್ಥಾನಗಳನ್ನು ತುಂಬುವುದು.

36ಪಿ. ರಾಜಿನಾಮೆ ಮತ್ತು ತೆಗೆದುಹಾಕುವುದು

36ಕ್ಯೂ. ಅಪೀಲು ನ್ಯಾಯಾಧಿಕರಣವನ್ನು ಸ್ಥಾಪಿಸುವ ಆದೇಶಗಳು ಅಂತಿಮವಾದುದಾಗಿರುವುದು ಮತ್ತು ಅದರ ವ್ಯವಹರಣೆಗಳು ಅಸಿಂಧುವಾಗದಿರುವುದು.

36ಆರ್. ಅಪೀಲು ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ

36ಎಸ್. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು

36ಟಿ. ಅಪೀಲನ್ನು ದಾಖಲು ಮಾಡುವಾಗ ಬಾಕಿಯಿರುವ ಮೊತ್ತವನ್ನು ಠೇವಣಿ ಇಡುವುದು.
36ಯು. ವಸೂಲಿ ಅಧಿಕಾರಿ ಮತ್ತು ಅಪೀಲು ನ್ಯಾಯಾಧಿಕರಣದ ಪ್ರಕ್ರಿಯೆ ಮತ್ತು ಅಧಿಕಾರಗಳು
36ವಿ. ಕಾಲ ಪರಿಮಿತಿ
36ಡಬ್ಲ್ಯೂ. ಪ್ರಿಸೈಡಿಂಗ್ ಅಧಿಕಾರಿಯು, ವಸೂಲಿ ಅಧಿಕಾರಿಯು, ಇತರ ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರುವುದು.
36ಎಕ್ಸ್. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ಸಂರಕ್ಷಣೆ.
36ವೈ. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.
36ಝೆಡ್. ಮಧ್ಯಕಾಲೀನ ಉಪಬಂಧಗಳು.

## ಅಧ್ಯಾಯ-VI

### ನಿಧಿಗಳು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

37. ಸಾಮಾನ್ಯ ನಿಧಿ ಮತ್ತು ಇತರ ನಿಧಿಗಳು.
38. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸಂತುಲನ ಪತ್ರ ಇತ್ಯಾದಿಗಳ ತಯಾರಿಕೆ.
39. ಹೆಚ್ಚುವರಿಯ ವಿಲೆ.
40. ಲೆಕ್ಕಪರಿಶೋಧನೆ.
41. ವಿವರಪಟ್ಟಿಕೆಗಳು.
42. ಗೃಹ ನಿರ್ಮಾಣ ಕುರಿತು ವಾರ್ಷಿಕ ವರದಿ.

## ಅಧ್ಯಾಯ - VII

### ಸಂಕೀರ್ಣ

43. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸಿಬ್ಬಂದಿ ವರ್ಗ.
43ಎ. ಅಧಿಕಾರಗಳ ಪ್ರತ್ಯಾಯೋಜನೆ.
44. ನಂಬಿಕೆ ಮತ್ತು ರಹಸ್ಯಕ್ಕೆ ಸಂಬಂಧಿಸಿದ ಹೊಣೆಗಾರಿಕೆ.
45. ನೇಮಕಾತಿಯಲ್ಲಿನ ನ್ಯೂನತೆಗಳು, ಕೃತ್ಯಗಳು, ಮುಂತಾದುವುಗಳನ್ನು ಅಸಿಂಧು ಗೊಳಿಸದಿರುವುದು.
45ಎ. ನಿರ್ದೇಶಕರ ನೇಮಕವಾದಾಗ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಲ್ಲಿರುವ ವ್ಯವಸ್ಥೆ ಚಾಲ್ತಿಯಲ್ಲಿರುವುದು.
46. ಈ ಅಧಿನಿಯಮದ ಮೇರೆಗೆ ಕೈಕೊಳ್ಳಲಾದ ಕ್ರಮಕ್ಕೆ ರಕ್ಷಣೆ.
47. ನಿರ್ದೇಶಕರಿಗೆ ನಷ್ಟ ಭರ್ತಿ.
47ಎ. ಠೇವಣಿಗಳು, ಬಾಂಡುಗಳು, ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ನಾಮನಿರ್ದೇಶನ.
48. ವರಮಾನ ತೆರಿಗೆಯಿಂದ ವಿನಾಯಿತಿ.
49. ದಂಡಗಳು.
50. ಕಂಪನಿಗಳಿಂದ ಅಪರಾಧಗಳು.
51. ಅಪರಾಧಗಳ ಸಂಜ್ಞಾನ.
52. ಜುಲ್ಮಾನೆಯ ವಿನಿಯೋಗ.
52ಎ. ಜುಲ್ಮಾನೆಯನ್ನು ವಿಧಿಸುವುದಕ್ಕೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರ.

53. ಬ್ಯಾಂಕರುಗಳ ಪುಸ್ತಕಗಳ ಸಾಕ್ಷ್ಯ ಅಧಿನಿಯಮ, 1891ರ 18 - ಇದು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

54. ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಸಮಾಪನೆ.

54ಎ. ನಿಯಮಗಳನ್ನು ರಚಿಸುವ ಅಧಿಕಾರ.

55. ವಿನಿಯಮಗಳನ್ನು ರಚಿಸಲು ಮಂಡಲಿಯ ಅಧಿಕಾರ.

56. ಕೆಲವು ಅಧಿನಿಯಮಿತಿಗಳ ತಿದ್ದುಪಡಿ.

57. ತೊಂದರೆಗಳನ್ನು ನಿವಾರಿಸಲು ಅಧಿಕಾರ.

**ಮೊದಲನೇ ಅನುಸೂಚಿ.**

**ಎರಡನೇ ಅನುಸೂಚಿ.**

**ಮೂರನೇ ಅನುಸೂಚಿ.**

# ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ ಅಧಿನಿಯಮ, 1987

(1987 ರ ಅಧಿನಿಯಮ ಸಂಖ್ಯೆ 53)

**[8ನೇ ಆಗಸ್ಟ್, 2001]**

ಸ್ಥಳೀಯ ಮತ್ತು ಪ್ರಾದೇಶಿಕ ಮಟ್ಟಗಳಲ್ಲಿ ಗೃಹನಿರ್ಮಾಣ ಹಣಕಾಸು ಸಂಸ್ಥೆಗಳನ್ನು ಪ್ರವರ್ತಿಸುವುದಕ್ಕೆ ಮತ್ತು ಅಂಥ ಸಂಸ್ಥೆಗಳಿಗೆ ಹಣಕಾಸು ಮತ್ತು ಇತರ ಬೆಂಬಲ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಮುಖ್ಯ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಎಂದು ಕರೆಯಲಾಗುವ ಒಂದು ಬ್ಯಾಂಕನ್ನು ಸ್ಥಾಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

## ಅಧ್ಯಾಯ-I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ ಅಧಿನಿಯಮ,

1987 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆಬರತಕ್ಕುದು, ಮತ್ತು ಈ ಅಧಿನಿಯಮದ ವಿವಿಧ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿ ಯಾವುದೇ ಉಪಬಂಧದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬರುವುದಕ್ಕೆ ಸಂಬಂಧಿಸಿ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕುದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,-

(ಎ) "ಮಂಡಲಿ" ಎಂದರೆ 6ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ನಿರ್ದೇಶಕ ಮಂಡಲಿ;

(ಬಿ) "ಅಧ್ಯಕ್ಷ" ಎಂದರೆ, 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ಮಂಡಲಿಯ ಅಧ್ಯಕ್ಷ;

(ಸಿ) "ನಿರ್ದೇಶಕ" ಎಂದರೆ, 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ನಿರ್ದೇಶಕ;

(ಡಿ) "ಗೃಹ ನಿರ್ಮಾಣ ಹಣಕಾಸು ಸಂಸ್ಥೆ" ಎಂಬುದರಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಗೃಹ ನಿರ್ಮಾಣಕ್ಕೆ ಹಣಕಾಸು ಒದಗಿಸುವ ವ್ಯವಹಾರವನ್ನು ಮುಖ್ಯವಾಗಿ ನಡೆಸುವ ಅಥವಾ ಅದನ್ನು ತನ್ನ ಮುಖ್ಯ ಉದ್ದೇಶಗಳ ಪೈಕಿ ಒಂದು ಉದ್ದೇಶವನ್ನಾಗಿ ಹೊಂದಿರುವ ನಿಗಮಿತವಾದ ಅಥವಾ ನಿಗಮಿತವಾಗಿಲ್ಲದ ಪ್ರತಿಯೊಂದು ಸಂಸ್ಥೆಯನ್ನು ಒಳಗೊಳ್ಳುತ್ತದೆ;

(ಇ) "ವ್ಯವಸ್ಥಾಪಕ ನಿರ್ದೇಶಕ" ಎಂದರೆ 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ವ್ಯವಸ್ಥಾಪಕ ನಿರ್ದೇಶಕ;

(ಎಫ್) "ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಗೃಹ ನಿರ್ಮಾಣಬ್ಯಾಂಕು;

(ಜಿ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ;

(ಹೆಚ್) "ನಿಯಮಿಸಲಾದುದು" ಎಂದರೆ, ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಐ) “ರಿಸರ್ವ್ ಬ್ಯಾಂಕು” ಎಂದರೆ, ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ 3ನೇ ಪ್ರಕರಣದ ಮೇರೆಗೆ ರಚಿತವಾದ ಭಾರತ ರಿಸರ್ವ್ ಬ್ಯಾಂಕು;

(ಜೆ) ಇಲ್ಲಿ ಬಳಸಿರುವ ಮತ್ತು ಪರಿಭಾಷಿಸಿಲ್ಲದ ಆದರೆ, ಭಾರತ ರಿಸರ್ವ್ ಬ್ಯಾಂಕು ಅಧಿನಿಯಮ, 1934 (1934ರ 2)ರಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕುದು;

(ಕೆ) ಇಲ್ಲಿ ಬಳಸಿರುವ ಮತ್ತು ಈ ಅಧಿನಿಯಮದಲ್ಲಾಗಲಿ ಅಥವಾ ಭಾರತ ರಿಸರ್ವ್ ಬ್ಯಾಂಕು ಅಧಿನಿಯಮ,1934 (1934ರ 2) ರಲ್ಲಾಗಲಿ ಪರಿಭಾಷಿಸಿಲ್ಲದ, ಆದರೆ, ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949ರ 10)ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಬ್ಯಾಕಿಂಗ್ ನಿಯಂತ್ರಣ ಅಧಿನಿಯಮ, 1949(1949ರ 10)ರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದು.

## ಅಧ್ಯಾಯ - II

## ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸ್ಥಾಪನೆ ಮತ್ತು ಅದರ ಬಂಡವಾಳ

3. **ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಸ್ಥಾಪನೆ ಮತ್ತು ನಿಗಮನ.**- (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉದ್ದೇಶಕ್ಕಾಗಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ ಎಂದು ಕರೆಯಲಾಗುವ ಒಂದು ಬ್ಯಾಂಕನ್ನು ಸ್ಥಾಪಿಸತಕ್ಕುದು.

(2) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಮೇಲೆ ಹೇಳಿದ ಹೆಸರುಳ್ಳ ಮತ್ತು ಶಾಶ್ವತ ಉತ್ತರಾಧಿಕಾರವನ್ನು ಹೊಂದಿರುವ ಹಾಗೂ ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಅಧಿಕಾರವನ್ನು ಹೊಂದಿದ್ದು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಆ ಹೆಸರಿನಿಂದ ಅದು ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(3) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಮುಖ್ಯ ಕಚೇರಿಯು ಮುಂಬಯಿಯಲ್ಲಿ ಅಥವಾ ರಿಸರ್ವ್ ಬ್ಯಾಂಕು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳದಲ್ಲಿ ಇರತಕ್ಕುದು.

(4) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಭಾರತದೊಳಗೆ ಯಾವುದೇ ಸ್ಥಳದಲ್ಲಿ ಮತ್ತು ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆದು ಭಾರತದ ಹೊರಗೆ ಯಾವುದೇ ಸ್ಥಳದಲ್ಲಿ ಕಚೇರಿಗಳನ್ನು, ಶಾಖೆಗಳನ್ನು ಅಥವಾ ಏಜೆನ್ಸಿಗಳನ್ನು ಸ್ಥಾಪಿಸಬಹುದು.

4. **ಬಂಡವಾಳ.**- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕೃತ ಮತ್ತು ಸಂದಾಯಿತ ಬಂಡವಾಳವು ಮುನ್ನೂರೈವತ್ತು ಕೋಟಿ ರೂಪಾಯಿಗಳಾಗಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಅಧಿಸೂಚನೆಯ ಮೂಲಕ ಅಧಿಕೃತ ಬಂಡವಾಳವನ್ನು ಎರಡುಸಾವಿರ ಕೋಟಿ ರೂಪಾಯಿಗಳವರೆಗೆ ಹೆಚ್ಚಿಸಬಹುದು.

(2) ಮಂಡಲಿಯು, ತಾನು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ, ಹೆಚ್ಚಿಸಲಾದ ಅಧಿಕೃತ ಬಂಡವಾಳವನ್ನು ರಿಸರ್ವ್ ಬ್ಯಾಂಕಿಗೆ, ಕೇಂದ್ರ ಸರ್ಕಾರಕ್ಕೆ, ಅನುಸೂಚಿತ ಬ್ಯಾಂಕುಗಳಿಗೆ, ಸಾರ್ವಜನಿಕ ಹಣಕಾಸು ಸಂಸ್ಥೆಗಳಿಗೆ, ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂಥ ಇತರ ಸಂಸ್ಥೆಗಳಿಗೆ ಹೊರಡಿಸಬಹುದು:

ಪರಂತು, ಹೊರಡಿಸಲಾದ ಬಂಡವಾಳದಲ್ಲಿ ರಿಸರ್ವ್ ಬ್ಯಾಂಕು, ಕೇಂದ್ರ ಸರ್ಕಾರವು, ಸಾರ್ವಜನಿಕ ವಲಯದ ಬ್ಯಾಂಕುಗಳು, ಸಾರ್ವಜನಿಕ ಹಣಕಾಸು ಸಂಸ್ಥೆಗಳು ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಇತರ ಸಂಸ್ಥೆಗಳು ಯಾವುದೇ ಸಮಯದಲ್ಲಿ ಒಟ್ಟಾರೆಯಾಗಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಹೊರಡಿಸಿದ ಬಂಡವಾಳದ

ಶೇಕಡಾ ಐವತ್ತೊಂದಕ್ಕಿಂತ ಕಡಿಮೆ ಇರುವ ರೀತಿಯಲ್ಲಿ ಹೊಂದಿರುವ ಹಾಗೆ ಯಾವುದೇ ಹೆಚ್ಚಳ ಮಾಡತಕ್ಕದ್ದಲ್ಲ.

## ಅಧ್ಯಾಯ - III

## ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವ್ಯವಸ್ಥಾಪನೆ

**5. ವ್ಯವಸ್ಥಾಪನೆ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವ್ಯವಹಾರಗಳ ಮತ್ತು ಕಾರ್ಯಕಲಾಪಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯು ನಿರ್ದೇಶಕ ಮಂಡಲಿಯಲ್ಲಿ ನಿಹಿತವಾಗಿರತಕ್ಕುದು, ಮತ್ತು ಆ ಮಂಡಲಿಯು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಚಲಾಯಿಸಬಹುದಾದಂಥ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಮಾಡಬಹುದಾದಂತಹ ಎಲ್ಲಾ ಕೃತ್ಯಗಳನ್ನು ಮತ್ತು ಕಾರ್ಯಗಳನ್ನು ಮಾಡತಕ್ಕುದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮಂಡಲಿಯು ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ, ಸಾರ್ವಜನಿಕ ಹಿತಾಸಕ್ತಿಗೆ ಯುಕ್ತ ಗಮನಕೊಟ್ಟು ವ್ಯವಹಾರ ತತ್ವಗಳನ್ನು ಅನುಸರಿಸಿ ಕಾರ್ಯನಿರ್ವಹಿಸತಕ್ಕುದು.

(3) (1)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು,-

(ಎ) ಅಧ್ಯಕ್ಷನು, ಪೂರ್ಣಕಾಲಿಕ ನಿರ್ದೇಶಕನಾಗಿದ್ದರೆ ಅಥವಾ ಅಧ್ಯಕ್ಷನಾಗಿ ಮತ್ತು ವ್ಯವಸ್ಥಾಪಕ ನಿರ್ದೇಶಕನಾಗಿ ಎರಡೂ ಪದಗಳನ್ನು ಹೊಂದಿದ್ದರೆ ಅವನು; ಅಥವಾ

(ಬಿ) ಅಧ್ಯಕ್ಷನು ಪೂರ್ಣಕಾಲಿಕ ನಿರ್ದೇಶಕನಾಗಿಲ್ಲದಿದ್ದರೆ, ಅಥವಾ ಅಧ್ಯಕ್ಷನು ಪೂರ್ಣಕಾಲಿಕ ನಿರ್ದೇಶಕನಾಗಿದ್ದು ಗೈರುಹಾಜರಾಗಿದ್ದರೆ, ವ್ಯವಸ್ಥಾಪಕ ನಿರ್ದೇಶಕನು

-ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವ್ಯವಹಾರಗಳು ಮತ್ತು ಕಾರ್ಯಕಲಾಪಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯ ಅಧಿಕಾರಗಳನ್ನು ಸಹ ಹೊಂದಿರತಕ್ಕುದು ಮತ್ತು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಿಂದ ಚಲಾಯಿಸಬಹುದಾದ ಎಲ್ಲ ಅಧಿಕಾರಗಳನ್ನು ಸಹ ಚಲಾಯಿಸಬಹುದು ಅಥವಾ ಮಾಡಬಹುದಾದ ಎಲ್ಲಾ ಕೃತ್ಯಗಳನ್ನು ಮತ್ತು ಕಾರ್ಯಗಳನ್ನು ಮಾಡಬಹುದು ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಯುಕ್ತ ಗಮನಕೊಟ್ಟು ವ್ಯವಹಾರ ತತ್ವಗಳನ್ನು ಅನುಸರಿಸಿ ಕಾರ್ಯ ನಿರ್ವಹಿಸತಕ್ಕುದು.

(4) ವ್ಯವಸ್ಥಾಪಕ ನಿರ್ದೇಶಕನು ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅಧ್ಯಕ್ಷನು ಕೊಡಬಹುದಾದಂಥ ನಿರ್ದೇಶನಗಳನ್ನು ಅನುಸರಿಸತಕ್ಕುದು.

(5) ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡ ಧೋರಣೆಯ ವಿಷಯಗಳಲ್ಲಿ ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಅಥವಾ ರಿಸರ್ವ್ ಬ್ಯಾಂಕು ಲಿಖಿತದಲ್ಲಿ ಕೊಡಬಹುದಾದಂಥ ನಿರ್ದೇಶನಗಳಿಂದ ಮಾರ್ಗದರ್ಶನ ಪಡೆಯತಕ್ಕುದು.

**6. ನಿರ್ದೇಶಕ ಮಂಡಳಿ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ನಿರ್ದೇಶಕ ಮಂಡಳಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕುದು, ಎಂದರೆ:-

(ಎ) ಒಬ್ಬ ಅಧ್ಯಕ್ಷ ಮತ್ತು ಒಬ್ಬ ವ್ಯವಸ್ಥಾಪಕ ನಿರ್ದೇಶಕ:

ಪರಂತು, ಒಬ್ಬನೇ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಮತ್ತು ವ್ಯವಸ್ಥಾಪಕ ನಿರ್ದೇಶಕನನ್ನಾಗಿ ನೇಮಕ ಮಾಡಬಹುದು;

(ಬಿ) ಗೃಹ ನಿರ್ಮಾಣ, ವಾಸ್ತುಶಿಲ್ಪ, ಇಂಜಿನಿಯರಿಂಗ್, ಸಮಾಜಶಾಸ್ತ್ರ, ಹಣಕಾಸು, ಕಾನೂನು, ವ್ಯವಸ್ಥಾಪನೆ ಮತ್ತು ಸಾಂಸ್ಥಿಕ ಯೋಜನೆಯ ಕ್ಷೇತ್ರದಲ್ಲಿ ಅಥವಾ ಯಾವ ಕ್ಷೇತ್ರದ ವಿಶೇಷ ಜ್ಞಾನವು

ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಉಪಯುಕ್ತವೆಂದು ಪರಿಗಣಿಸಲಾಗುವುದೋ ಆ ಯಾವುದೇ ಇತರ ಕ್ಷೇತ್ರದಲ್ಲಿ ತಜ್ಞರಾಗಿರುವವರ ಪೈಕಿಯಿಂದ ಇಬ್ಬರು ನಿರ್ದೇಶಕರು;

(ಸಿ) ಗೃಹ ನಿರ್ಮಾಣಕ್ಕಾಗಿ ನಿಧಿಗಳನ್ನು ಒದಗಿಸುವಲ್ಲಿ ನಿರತವಾದ ಅಥವಾ ಗೃಹನಿರ್ಮಾಣ ಅಭಿವೃದ್ಧಿಯಲ್ಲಿ ತೊಡಗಿರುವ ಸಂಸ್ಥೆಗಳಲ್ಲಿ ಕೆಲಸ ಮಾಡಿದ ಅನುಭವವಿರುವ ಅಥವಾ ಹಣಕಾಸು ಸಂಸ್ಥೆಗಳು ಅಥವಾ ಅನುಸೂಚಿತ ಬ್ಯಾಂಕುಗಳಲ್ಲಿ ಕೆಲಸಮಾಡಿದ ಅನುಭವವಿರುವ ವ್ಯಕ್ತಿಗಳಾಗಿರತಕ್ಕ ಇಬ್ಬರು ನಿರ್ದೇಶಕರು;

(ಸಿಎ) ರಿಸರ್ವ್ ಬ್ಯಾಂಕನ್ನು, ಕೇಂದ್ರ ಸರ್ಕಾರವನ್ನು ಮತ್ತು ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಇತರ ಸಂಸ್ಥೆಗಳನ್ನು ಹೊರತುಪಡಿಸಿ, ಷೇರುದಾರರು ನಿಯಮಿಸಬಹುದಾದಂಥ ರೀತಿಯಲ್ಲಿ ಚುನಾಯಿಸಿದ ಇಬ್ಬರು ನಿರ್ದೇಶಕರು;

(ಡಿ) ರಿಸರ್ವ್ ಬ್ಯಾಂಕಿನ ನಿರ್ದೇಶಕರ ಪೈಕಿಯಿಂದ ಇಬ್ಬರು ನಿರ್ದೇಶಕರು;

(ಇ) ಕೇಂದ್ರ ಸರ್ಕಾರದ ಅಧಿಕಾರಿಗಳ ಪೈಕಿಯಿಂದ ಇಬ್ಬರು ನಿರ್ದೇಶಕರು;

(ಎಫ್) ರಾಜ್ಯ ಸರ್ಕಾರದ ಅಧಿಕಾರಿಗಳ ಪೈಕಿಯಿಂದ ಮೂವರು ನಿರ್ದೇಶಕರು.

(2) (ಸಿಎ) ಮತ್ತು (ಡಿ) ಖಂಡದಲ್ಲಿ ಉಲ್ಲೇಖಿಸಿದ ನಿರ್ದೇಶಕನನ್ನು ಹೊರತುಪಡಿಸಿ, ಅಧ್ಯಕ್ಷನನ್ನು, ವ್ಯವಸ್ಥಾಪಕ ನಿರ್ದೇಶಕನನ್ನು ಮತ್ತು ಇತರ ನಿರ್ದೇಶಕರನ್ನು ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ನೇಮಕ ಮಾಡತಕ್ಕುದು ಮತ್ತು (ಡಿ) ಖಂಡದಲ್ಲಿ ಉಲ್ಲೇಖಿಸಲಾದ ನಿರ್ದೇಶಕರನ್ನು ರಿಸರ್ವ್‌ಬ್ಯಾಂಕು ನಾಮನಿರ್ದೇಶನ ಮಾಡತಕ್ಕುದು.

**7. ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕರು ಮತ್ತು ಇತರ ನಿರ್ದೇಶಕರ ಪದಾವಧಿ, ಸೇವಾ ಷರತ್ತುಗಳು ಇತ್ಯಾದಿ.**- (1) ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು ಐದು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಪದಧಾರಣ ಮಾಡತಕ್ಕುದು ಮತ್ತು ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ನಿರ್ದಿಷ್ಟಪಡಿಸಬಹುದಾದಂಥ ಸಂಬಳ ಮತ್ತು ಭತ್ಯಗಳನ್ನು ಪಡೆಯತಕ್ಕುದು ಮತ್ತು ಅಂಥ ಸೇವಾ ನಿಬಂಧನೆಗಳು ಮತ್ತು ಷರತ್ತುಗಳಿಂದ ನಿಯಂತ್ರಿಸಲ್ಪಡತಕ್ಕುದು ಮತ್ತು ಅವರು ಪುನರ್ ನೇಮಕಾತಿಗೆ ಅರ್ಹರಾಗಿರತಕ್ಕುದು:

ಪರಂತು, ಅಧ್ಯಕ್ಷನು ಅಥವಾ ಸಂದರ್ಭಾನುಸಾರ ವ್ಯವಸ್ಥಾಪಕ ನಿರ್ದೇಶಕನು, ತನ್ನ ಪದಾವಧಿಯು ಸಮಾಪ್ತವಾಗಿದ್ದರೂ ತನ್ನ ಉತ್ತರಾಧಿಕಾರಿಯು ಅವನ ಅಧಿಕಾರ ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡಿರುವುದನ್ನು ಮುಂದುವರಿಸತಕ್ಕುದು.

(2) 6ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ), (ಸಿ) ಮತ್ತು (ಸಿಎ) ಖಂಡಗಳಲ್ಲಿ ಉಲ್ಲೇಖಿಸಲಾದ ನಿರ್ದೇಶಕರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕುದು:

ಪರಂತು, ಅಂಥ ಯಾವನೇ ನಿರ್ದೇಶಕನು, ತನ್ನ ಪದಾವಧಿಯು ಸಮಾಪ್ತವಾಗಿದ್ದರೂ, ತನ್ನ ಉತ್ತರಾಧಿಕಾರಿಯು ಅವನ ಅಧಿಕಾರ ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡಿರುವುದನ್ನು ಮುಂದುವರಿಸತಕ್ಕುದು.

(3) ಕೇಂದ್ರ ಸರ್ಕಾರವು, ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ಅಧ್ಯಕ್ಷ ಅಥವಾ ವ್ಯವಸ್ಥಾಪಕ ನಿರ್ದೇಶಕ ಅಥವಾ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವನೇ ಇತರ ನಿರ್ದೇಶಕನನ್ನು, ಅವನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ತೆಗೆದುಹಾಕುವ ಪ್ರಸ್ತಾವದ ವಿರುದ್ಧ ಕಾರಣ ತೋರಿಸಲು ಸೂಕ್ತ ಅವಕಾಶವನ್ನು ಅವನಿಗೆ ಕೊಟ್ಟ ತರುವಾಯ ತೆಗೆದುಹಾಕಬಹುದು.

(4) (1) ಮತ್ತು (3)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು, ರಿಸರ್ವ್ ಬ್ಯಾಂಕ್‌ನೊಂದಿಗೆ ಸಮಾಲೋಚಿಸಿ, (1)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ, ಅವನಿಗೆ ಮೂರು ತಿಂಗಳಿಗೆ ಕಡಿಮೆಯಿಲ್ಲದ ಲಿಖಿತ ನೋಟೀಸನ್ನು ಅಥವಾ ಅದಕ್ಕೆ ಬದಲಾಗಿ ಮೂರು ತಿಂಗಳ ಸಂಬಳ ಮತ್ತು ಭತ್ಯಗಳನ್ನು ಕೊಟ್ಟು, ಅಧ್ಯಕ್ಷನ ಅಥವಾ ಸಂದರ್ಭಾನುಸಾರ, ವ್ಯವಸ್ಥಾಪಕ ನಿರ್ದೇಶಕನ

ಪದಾವಧಿಯನ್ನು ಕೊನೆಗೊಳಿಸುವ ಹಕ್ಕನ್ನು ಹೊಂದಿರತಕ್ಕುದು, ಮತ್ತು ಅಧ್ಯಕ್ಷನ ಅಥವಾ ಸಂದರ್ಭಾನುಸಾರ ವ್ಯವಸ್ಥಾಪಕ ನಿರ್ದೇಶಕನು ಸಹ (1)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಕೇಂದ್ರ ಸರ್ಕಾರಕ್ಕೆ ಮೂರು ತಿಂಗಳಿಗೆ ಕಡಿಮೆ ಇಲ್ಲದ ಲಿಖಿತ ನೋಟೀಸನ್ನು ಅಥವಾ ಅದಕ್ಕೆ ಬದಲಾಗಿ ಮೂರು ತಿಂಗಳ ಸಂಬಳ ಮತ್ತು ಭತ್ಯೆಗಳನ್ನು ಬಿಟ್ಟುಕೊಟ್ಟು ತನ್ನ ಪದವನ್ನು ಬಿಟ್ಟುಕೊಡುವ ಹಕ್ಕನ್ನು ಹೊಂದಿರತಕ್ಕುದು.

(5) ನಿರ್ದೇಶಕರಿಗೆ ಮಂಡಲಿಯ ಸಭೆಗಳಿಗೆ ಅಥವಾ ಅದರ ಯಾವುದೇ ಸಮಿತಿಯ ಸಭೆಗಳಿಗೆ ಹಾಜರಾದ ಬಗ್ಗೆ ಮತ್ತು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಯಾವುದೇ ಇತರ ಕೆಲಸವನ್ನು ನಿರ್ವಹಿಸಿದ ಬಗ್ಗೆ ನಿಯಮಿಸಬಹುದಾದಂಥ ಫೀಜುಗಳು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕುದು:

ಪರಂತು, ಸರ್ಕಾರದ ಅಧಿಕಾರಿಯಾಗಿರುವ ಅಥವಾ ರಿಸರ್ವ್ ಬ್ಯಾಂಕಿನ ನಿರ್ದೇಶಕನಾಗಿರುವ ಯಾವನೇ ನಿರ್ದೇಶಕನಿಗೆ ಅಂಥ ಯಾವುದೇ ಫೀಜು ಸಂದಾಯವಾಗತಕ್ಕುದಲ್ಲ.

**8. ಅನರ್ಹತೆಗಳು.**- ಯಾವನೇ ವ್ಯಕ್ತಿಯು,-

(ಎ) ಅಸ್ವಸ್ಥಚಿತ್ತನಾಗಿದ್ದರೆ ಅಥವಾ ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ; ಅಥವಾ

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನೊಳಗೊಂಡ ಯಾವುದೇ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದರೆ ಅಥವಾ ಆಗಿದ್ದರೆ; ಅಥವಾ

(ಸಿ) ದಿವಾಳಿಯಾಗಿದ್ದಾನೆಂದು ನ್ಯಾಯನಿರ್ಣೀತನಾಗಿದ್ದರೆ ಅಥವಾ ಯಾವುದೇ ಸಮಯದಲ್ಲಿ ಹಾಗೆಂದು ನ್ಯಾಯ ನಿರ್ಣೀತನಾಗಿದ್ದರೆ, ತನ್ನ ಋಣಗಳ ಸಂದಾಯವನ್ನು ನಿಲ್ಲಿಸಿದ್ದರೆ ಅಥವಾ ತನ್ನ ಲೇಣೆದಾರರ ಜೊತೆ ರಾಜಿಮಾಡಿಕೊಂಡಿದ್ದರೆ; ಅಥವಾ

(ಡಿ) ಯಾವುದೇ ಕಾರಣಕ್ಕಾಗಿ,-

(i) ಸರ್ಕಾರದ, ಅಥವಾ

(ii) ರಿಸರ್ವ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಅಥವಾ ಯಾವುದೇ ಇತರ ಬ್ಯಾಂಕಿನ, ಅಥವಾ

(iii) ಯಾವುದೇ ಸಾರ್ವಜನಿಕ ಹಣಕಾಸು ಸಂಸ್ಥೆಯ ಅಥವಾ ರಾಜ್ಯ ಹಣಕಾಸು ನಿಗಮದ, ಅಥವಾ

(iv) ಸರ್ಕಾರದ ಒಡೆತನದಲ್ಲಿರುವ ಅಥವಾ ಸರ್ಕಾರದಿಂದ ನಿಯಂತ್ರಿತವಾದ ಯಾವುದೇ ಇತರ ನಿಗಮದ

- ಸೇವೆಯಿಂದ ತೆಗೆದುಹಾಕಲ್ಪಟ್ಟಿದ್ದರೆ ಅಥವಾ ವಜಾ ಮಾಡಲ್ಪಟ್ಟಿದ್ದರೆ ಅವನು ಮಂಡಲಿಯ ನಿರ್ದೇಶಕನಾಗತಕ್ಕುದಲ್ಲ.

**9. ನಿರ್ದೇಶಕರು ಪದವನ್ನು ತೆರವು ಮಾಡುವುದು ಮತ್ತು ಪದಕ್ಕೆ ರಾಜೀನಾಮೆ ಕೊಡುವುದು.-**

**(1) ನಿರ್ದೇಶಕನು -**

(ಎ) 8ನೇ ಪ್ರಕರಣದಲ್ಲಿ ನಮೂದಿಸಿರುವ ಅನರ್ಹತೆಗಳ ಪೈಕಿ ಯಾವುದೇ ಅನರ್ಹತೆಗೆ ಒಳಪಟ್ಟರೆ ; ಅಥವಾ

(ಬಿ) ಮಂಡಲಿಯ ಮೂರು ಅಥವಾ ಅದಕ್ಕೂ ಹೆಚ್ಚಿನ ಅನುಕ್ರಮ ಸಭೆಗಳಿಗೆ ಮಂಡಲಿಯ ಅನುಮತಿ ಇಲ್ಲದೆ ಗೈರುಹಾಜರಾದರೆ

-ಅವನ ಸ್ಥಾನವು ತೆರವಾಗತಕ್ಕುದು.

(2) ಯಾವನೇ ನಿರ್ದೇಶಕನು ತನ್ನ ರಾಜೀನಾಮೆಯ ಬಗ್ಗೆ ತನ್ನನ್ನು ನೇಮಕ ಮಾಡಿದ ಅಥವಾ ಸಂದರ್ಭಾನುಸಾರ ನಾಮನಿರ್ದೇಶನ ಮಾಡಿದ ಪ್ರಾಧಿಕಾರಕ್ಕೆ ಲಿಖಿತ ನೋಟೀಸನ್ನು ಕೊಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂಥ ಪ್ರಾಧಿಕಾರವು ಅವನ ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ, ಅಥವಾ ಅವನ ರಾಜೀನಾಮೆಯನ್ನು ಕೂಡಲೇ ಅಂಗೀಕರಿಸದಿದ್ದರೆ, ಅಂಥ ನೇಮಕಾತಿ ಪ್ರಾಧಿಕಾರವು ಅದನ್ನು ಸ್ವೀಕರಿಸಿದಂದಿನಿಂದ ಮೂರು ತಿಂಗಳು ಮುಗಿದ ತರುವಾಯ ಅವನು ತನ್ನ ಪದವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕದು.

**10. ಅಧ್ಯಕ್ಷ ಅಥವಾ ವ್ಯವಸ್ಥಾಪಕ ನಿರ್ದೇಶಕನ ಪದದ ಆಕಸ್ಮಿಕ ತೆರವು.–** ಅಧ್ಯಕ್ಷ ಅಥವಾ ಸಂದರ್ಭಾನುಸಾರ ವ್ಯವಸ್ಥಾಪಕ ನಿರ್ದೇಶಕನು ಅಶಕ್ತತೆಯಿಂದ ಅಥವಾ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅನ್ಯಥಾ ಅಸಮರ್ಥನಾದರೆ ಅಥವಾ ಅವನ ನೇಮಕಾತಿಯ ತೆರವು ಒಳಗೊಂಡಿಲ್ಲದ ಪರಿಸ್ಥಿತಿಗಳಲ್ಲಿ ರಜೆಯ ಮೇಲೆ ಅಥವಾ ಅನ್ಯಥಾ ಗೈರುಹಾಜರಾಗಿದ್ದರೆ, ಕೇಂದ್ರ ಸರ್ಕಾರವು ಅವನ ಗೈರು ಹಾಜರಿಯ ಅವಧಿಯಲ್ಲಿ ಅವನ ಸ್ಥಾನದಲ್ಲಿ ಕಾರ್ಯನಿರ್ವಹಿಸಲು ಇನ್ನೊಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದು.

**11. ಮಂಡಲಿಯ ಸಭೆಗಳು. –** (1) ಮಂಡಲಿಯು ನಿಯಮಿಸಬಹುದಾದಂಥ ಸಮಯಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದು ಮತ್ತು ತನ್ನ ಸಭೆಗಳಲ್ಲಿ ನಡೆಯುವ ಕಾರ್ಯಕಲಾಪಗಳ ಬಗ್ಗೆ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದು.

(2) ಅಧ್ಯಕ್ಷನು ಯಾವುದೇ ಕಾರಣಕ್ಕಾಗಿ ಮಂಡಲಿಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ ವ್ಯವಸ್ಥಾಪಕ ನಿರ್ದೇಶಕನು, ಅಥವಾ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಇವರಿಬ್ಬರಿಗೂ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಈ ಬಗ್ಗೆ ಅಧ್ಯಕ್ಷನು ನಾಮನಿರ್ದೇಶನ ಮಾಡಿದ ಯಾವನೇ ಇತರ ನಿರ್ದೇಶಕನು ಮತ್ತು ಅಂಥ ನಾಮ ನಿರ್ದೇಶನವು ಇಲ್ಲದಿದ್ದರೆ, ಹಾಜರಿದ್ದ ನಿರ್ದೇಶಕರು ತಮ್ಮೊಳಗಿಂದ ಆಯ್ಕೆ ಮಾಡಿದ ಯಾವನೇ ನಿರ್ದೇಶಕನು ಸಭೆಯ ಅಧ್ಯಕ್ಷತೆ ವಹಿಸತಕ್ಕದು.

(3) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವಂಥ ಎಲ್ಲಾ ಪ್ರಶ್ನೆಗಳನ್ನು ಹಾಜರಿದ್ದು ಮತ ನೀಡುವ ನಿರ್ದೇಶಕರ ಬಹುಮತದ ಮೂಲಕ ತೀರ್ಮಾನಿಸತಕ್ಕದು ಮತ್ತು ಮತಗಳು ಸಮವಾಗಿದ್ದ ಸಂದರ್ಭದಲ್ಲಿ ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿದ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದು.

**12. ಕಾರ್ಯನಿರ್ವಾಹಕ ಸಮಿತಿ ಮತ್ತು ಇತರ ಸಮಿತಿಗಳು.–** (1) ಮಂಡಲಿಯು, ನಿಯಮಿಸಬಹುದಾದಂಥ ಸಂಖ್ಯೆಯ ನಿರ್ದೇಶಕರನ್ನು ಒಳಗೊಂಡ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಬಹುದು.

(2) ಆ ಕಾರ್ಯನಿರ್ವಾಹಕ ಸಮಿತಿಯು, ನಿಯಮಿಸಬಹುದಾದಂಥ ಅಥವಾ ಮಂಡಲಿಯು ಅದಕ್ಕೆ ಪ್ರತ್ಯಾಯೋಜಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದು.

(3) ಮಂಡಲಿಯು, ತಾನು ತೀರ್ಮಾನಿಸಬಹುದಾದಂಥ ಉದ್ದೇಶಗಳಿಗಾಗಿ ಅದು ಸೂಕ್ತವೆಂದು ಭಾವಿಸುವಂಥ ಪೂರ್ಣವಾಗಿ ನಿರ್ದೇಶಕರನ್ನು ಅಥವಾ ಪೂರ್ಣವಾಗಿ ಇತರ ವ್ಯಕ್ತಿಗಳನ್ನು ಅಥವಾ ಭಾಗಶಃ ನಿರ್ದೇಶಕರನ್ನು ಅಥವಾ ಭಾಗಶಃ ಇತರ ವ್ಯಕ್ತಿಗಳನ್ನು ಒಳಗೊಂಡಿರುವಂಥ ಇತರ ಸಮಿತಿಗಳನ್ನು ರಚಿಸಬಹುದು ಮತ್ತು ಹಾಗೆ ರಚಿಸಲಾದ ಯಾವುದೇ ಸಮಿತಿಯು, ಮಂಡಲಿಯು ಅದಕ್ಕೆ ಪ್ರತ್ಯಾಯೋಜಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದು.

(4) ಈ ಪ್ರಕರಣದ ಮೇರೆಗೆ ರಚಿಸಲಾದ ಕಾರ್ಯನಿರ್ವಾಹಕ ಸಮಿತಿಯು ಅಥವಾ ಯಾವುದೇ ಇತರ ಸಮಿತಿಗಳು ನಿಯಮಿಸಬಹುದಾದಂಥ ಸ್ಥಳಗಳಲ್ಲಿ ಮತ್ತು ಅಂಥ ಸಮಯಗಳಲ್ಲಿ ಸಭೆ ಸೇರತಕ್ಕದು ಮತ್ತು ತನ್ನ ಸಭೆಗಳಲ್ಲಿ ನಡೆಯುವ ಕಾರ್ಯಕಲಾಪಗಳ ಬಗ್ಗೆ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದು.

**13. ಕೆಲವು ಸಂದರ್ಭಗಳಲ್ಲಿ ಮಂಡಲಿಯ ನಿರ್ದೇಶಕನು ಅಥವಾ ಅದರ ಸಮಿತಿಯ ಸದಸ್ಯನು ಸಭೆಗಳಲ್ಲಿ ಭಾಗವಹಿಸದಿರುವುದು.–** ಮಂಡಲಿಯ ಅಥವಾ ಅದರ ಸಮಿತಿಯ ಸಭೆಯಲ್ಲಿ ಪರಿಶೀಲನೆಗೆ ಬರುವ ಯಾವುದೇ ವಿಷಯದಲ್ಲಿ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಹಣಕಾಸು ಹಿತಾಸಕ್ತಿ

ಹೊಂದಿರುವ ಮಂಡಲಿಯ ಯಾವನೇ ನಿರ್ದೇಶಕನು ಅಥವಾ ಸಮಿತಿಯ ಯಾವನೇ ಸದಸ್ಯನು ಸಂಬಂಧಪಟ್ಟ ಪರಿಸ್ಥಿತಿಗಳು ತನ್ನ ಗಮನಕ್ಕೆ ಬಂದೊಡನೆ ಸಾಧ್ಯವಾದಷ್ಟು ಬೇಗನೆ ಅಂಥ ಸಭೆಯಲ್ಲಿ ಅವನ ಹಿತಾಸಕ್ತಿಯ ಸ್ವರೂಪವನ್ನು ಬಹಿರಂಗಪಡಿಸತಕ್ಕುದು, ಮತ್ತು ಹಾಗೆ ಬಹಿರಂಗಪಡಿಸಿರುವುದನ್ನು ಮಂಡಲಿ ಅಥವಾ ಸಂದರ್ಭಾನುಸಾರ ಸಮಿತಿಯ ನಡವಳಿಕೆ ಪುಸ್ತಕದಲ್ಲಿ ನಮೂದಿಸತಕ್ಕುದು ಮತ್ತು ಆ ನಿರ್ದೇಶಕನು ಅಥವಾ ಸದಸ್ಯನು ಆ ವಿಷಯಕ್ಕೆ ಸಂಬಂಧಿಸಿದಂತೆ ಮಂಡಲಿಯ ಅಥವಾ ಸಮಿತಿಯ ಯಾವುದೇ ಚರ್ಚೆಯಲ್ಲಿ ಅಥವಾ ನಿರ್ಣಯದಲ್ಲಿ ಯಾವುದೇ ಬಗೆಯಲ್ಲಿ ಭಾಗವಹಿಸತಕ್ಕುದಲ್ಲ.

## ಅಧ್ಯಾಯ-IV

## ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವ್ಯವಹಾರ

**14. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವ್ಯವಹಾರ.-** ಈ ಅಧಿನಿಯಮದ ಉಪ-ಬಂಧಗಳಿಗೊಳಪಟ್ಟು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಈ ಕೆಳಕಂಡ ಬಗೆಗಳ ಎಲ್ಲಾ ವ್ಯವಹಾರಗಳನ್ನು ಅಥವಾ ಅವುಗಳ ಪೈಕಿ ಯಾವುದೇ ವ್ಯವಹಾರವನ್ನು ನಡೆಸಬಹುದು, ಎಂದರೆ:-

(ಎ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳನ್ನು ಪ್ರವರ್ತಿಸುವುದು, ಸ್ಥಾಪಿಸುವುದು, ಬೆಂಬಲಿಸುವುದು, ಅಥವಾ ಅವುಗಳ ಪ್ರವರ್ತನೆ, ಸ್ಥಾಪನೆ ಮತ್ತು ಬೆಂಬಲಕ್ಕೆ ನೆರವು ನೀಡುವುದು;

(ಬಿ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ, ಅನುಸೂಚಿತ ಬ್ಯಾಂಕುಗಳಿಗೆ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಗೆ ಅಥವಾ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಯಾವುದೇ ಇತರ ಸಂಸ್ಥೆಗೆ ಅಥವಾ ಸಂಸ್ಥೆಗಳ ವರ್ಗಕ್ಕೆ ಗೃಹ ನಿರ್ಮಾಣ ಚಟುವಟಿಕೆಗಳಿಗಾಗಿ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವುದು ಅಥವಾ ಯಾವುದೇ ಇತರ ಬಗೆಯ ಹಣಕಾಸು ನೆರವನ್ನು ನೀಡುವುದು;

(ಬಿಎ) ಗೃಹ ನಿರ್ಮಾಣಕ್ಕಾಗಿ ಅಥವಾ ವಾಸಯೋಗ್ಯ ಪಟ್ಟಣದ ನಿವೇಶನ ಹಾಗೂ ಗೃಹ ನಿರ್ಮಾಣ ಅಭಿವೃದ್ಧಿಗಾಗಿ ಅಥವಾ ಕೊಳೆಗೇರಿ ನಿರ್ಮೂಲನಾ ಯೋಜನೆಗಳಿಗಾಗಿ ಸಾಲಗಳು ಮತ್ತು ಮುಂಗಡಗಳನ್ನು ನೀಡುವುದು;

(ಸಿ) ಸ್ಟಾಕುಗಳು, ಷೇರುಗಳು, ಬಾಂಡುಗಳು, ಡಿಬೆಂಚರುಗಳಿಗೆ ಮತ್ತು ಪ್ರತಿಯೊಂದು ಇತರ ವಿವರಣೆಯ ಭದ್ರತೆಗಳಿಗೆ ವಂತಿಗೆ ನೀಡುವುದು ಅಥವಾ ಅವುಗಳನ್ನು ಖರೀದಿಸುವುದು;

(ಡಿ) ಗೃಹನಿರ್ಮಾಣ ಹಣಕಾಸು ಸಂಸ್ಥೆಗಳ ಆರ್ಥಿಕ ಹೊಣೆಗಳಿಗೆ ಖಾತರಿ ನೀಡುವುದು ಮತ್ತು ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಸ್ಟಾಕ್‌ಗಳು, ಷೇರುಗಳು, ಬಾಂಡ್‌ಗಳು, ಡಿಬೆಂಚರುಗಳು ಮತ್ತು ಇತರ ಪ್ರತಿಯೊಂದು ವಿವರಣೆಯ ಭದ್ರತೆಗಳ ನೀಡಿಕೆಯ ಬಗ್ಗೆ ಒಪ್ಪಂದ ಮಾಡಿಕೊಳ್ಳುವುದು;

(ಇ) ವಿನಿಮಯ ಪತ್ರಗಳು, ಪ್ರಾಮಿಸರಿ ನೋಟುಗಳು, ಬಾಂಡ್‌ಗಳು, ಡಿಬೆಂಚರುಗಳು, ಹುಂಡಿಗಳು, ಕೂಪನ್‌ಗಳು ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಇತರ ಲಿಖಿತಗಳನ್ನು ಬರೆಯುವುದು, ಅಂಗೀಕರಿಸುವುದು, ಸೋಡಿ ನೀಡುವುದು ಅಥವಾ ಮರುಸೋಡಿ ನೀಡುವುದು, ಖರೀದಿಸುವುದು ಅಥವಾ ಮಾರುವುದು ಮತ್ತು ಅವುಗಳನ್ನು ವ್ಯವಹರಿಸುವುದು;

(ಇಎ) ಕೊಳ್ಳುವುದು, ಮಾರಾಟ ಮಾಡುವುದು ಅಥವಾ ಅನುಸೂಚಿತ ಬ್ಯಾಂಕುಗಳು ಅಥವಾ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಸ್ಥಿರ ಸ್ವತ್ತಿನ ಅಡಮಾನದ ಅಥವಾ ಹೊಣೆಯ ಆಧಾರದ ಮೇಲಿನ ಯಾವುದೇ ಸಾಲಗಳು ಅಥವಾ ಮುಂಗಡಗಳ ಬಗ್ಗೆ ಅನ್ಯಥಾ ವ್ಯವಹರಿಸುವುದು;

(ಇಬಿ) ಒಂದು ಅಥವಾ ಹೆಚ್ಚು ನ್ಯಾಸಗಳನ್ನು ಸೃಜಿಸುವುದು ಮತ್ತು ಅಂಥ ನ್ಯಾಸಗಳಿಗೆ ಪ್ರತಿಫಲಕ್ಕಾಗಿ ಭದ್ರತೆ ಪಡೆದು ಅಥವಾ ಪಡೆಯದೆ ಸಾಲಗಳು ಅಥವಾ ಮುಂಗಡಗಳನ್ನು ವರ್ಗಾವಣೆ ಮಾಡುವುದು;

(ಇಸಿ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಪಡೆದ ಸಾಲಗಳನ್ನು ಅಥವಾ ಮುಂಗಡಗಳನ್ನು ರದ್ದುಗೊಳಿಸುವುದು ಮತ್ತು ಹಾಗೆ ರದ್ದುಗೊಳಿಸಿದ ಅಂಥ ಸಾಲಗಳ ಅಥವಾ ಮುಂಗಡಗಳ ಆಧಾರದ ಮೇಲೆ ಭದ್ರತಾ ಪತ್ರಗಳನ್ನು, ಋಣಬಾಧ್ಯತೆಗಳ, ಪ್ರಯೋಜನಕಾರಿ ಹಿತಾಸಕ್ತಿಯ, ನ್ಯಾಸ ಪ್ರಮಾಣ ಪತ್ರಗಳ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಇತರ ಲಿಖಿತಗಳ ರೂಪದಲ್ಲಿ

ಹೊರಡಿಸುವುದು ಮತ್ತು ಮಾರಾಟ ಮಾಡುವುದು, ಮತ್ತು ಅಂಥ ಭದ್ರತಾ ಪತ್ರಗಳ ಧಾರಕರಿಗೆ ಸಂಬಂಧಿಸಿದಂತೆ ನ್ಯಾಸಧಾರಿಯಾಗಿ ಕಾರ್ಯನಿರ್ವಹಿಸುವುದು;

(ಇಡಿ) ಗೃಹ ನಿರ್ಮಾಣ ಹಣಕಾಸು ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಮ್ಯೂಚುಯಲ್ ಫಂಡ್‌ಗಳನ್ನು ಸ್ಥಾಪಿಸುವುದು;

(ಇಇ) ಗೃಹ ನಿರ್ಮಾಣ ಅಡಮಾನ ವಿಮೆ ಕಾರ್ಯವನ್ನು ಕೈಗೊಳ್ಳುವುದು ಅಥವಾ ಅದರಲ್ಲಿ ಪಾಲ್ಗೊಳ್ಳುವುದು;

(ಎಫ್) ಕಂಪನಿಗಳು, ಅಡಮಾನ ಬ್ಯಾಂಕುಗಳು, ಪೂರಕ ಬ್ಯಾಂಕುಗಳು, ಸಂಘಗಳು, ನ್ಯಾಸಗಳು ಅಥವಾ ಈ ಅಧಿನಿಯಮದ ಮೇರೆಗೆ ತನ್ನ ಎಲ್ಲ ಪ್ರಕಾರ್ಯಗಳನ್ನು ಅಥವಾ ಆ ಪೈಕಿ ಯಾವುದೇ ಪ್ರಕಾರ್ಯವನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವೆಂದು ತಾನು ಪರಿಗಣಿಸಬಹುದಾದಂಥ ವ್ಯಕ್ತಿಗಳ ಇತರ ಸಂಘಗಳಿಗೆ ಉತ್ತೇಜನ ನೀಡುವಲ್ಲಿ, ಅವುಗಳನ್ನು ರಚಿಸುವಲ್ಲಿ ಅಥವಾ ನಿರ್ವಹಿಸುವಲ್ಲಿ ಉತ್ತೇಜನ ನೀಡುವುದು, ರಚಿಸುವುದು, ನಿರ್ವಹಿಸುವುದು ಅಥವಾ ಅವುಗಳ ಜೊತೆಗೂಡುವುದು;

(ಜಿ) ಆಶ್ರಯ, ಗೃಹನಿರ್ಮಾಣ ಮತ್ತು ಮಾನವ ವಸಾಹತು ಇವುಗಳಿಗೆ ಸಂಬಂಧಿಸಿದ ಅಥವಾ ಸಂಬಂಧಪಟ್ಟ ನಿರ್ಮಾಣ ತಂತ್ರಗಳ ಸಂಶೋಧನೆ ಮತ್ತು ಸಮೀಕ್ಷೆಯನ್ನು ಕೈಗೊಳ್ಳುವುದು ಮತ್ತು ಇತರ ಅಧ್ಯಯನಗಳನ್ನು ಕೈಗೊಳ್ಳುವುದು;

(ಹೆಚ್) ಗೃಹ ನಿರ್ಮಾಣಕ್ಕಾಗಿ ಸಂಪನ್ಮೂಲಗಳ ಸಂಗ್ರಹಣೆ ಮತ್ತು ಸಾಲ ನೀಡಿಕೆಯ ಉದ್ದೇಶಕ್ಕಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚು ಯೋಜನೆಗಳನ್ನು ರೂಪಿಸುವುದು;

(ಹೆಚ್‌ಹೆಚ್) ಸ್ವಯಿಚ್ಛಾ ಠೇವಣಿಗಳ (ಉನ್ಮುಕ್ತಿಗಳು ಮತ್ತು ವಿನಾಯಿತಿಗಳು) ಅಧಿನಿಯಮ, 1991ರ 2ನೇ ಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾದಂಥ ಠೇವಣಿಗಳನ್ನು ಅಂಗೀಕರಿಸುವ ಮತ್ತು ಅಂಥ ಠೇವಣಿಗಳ ಮೊತ್ತದ ಶೇಕಡಾ ನಲವತ್ತರಷ್ಟನ್ನು 37ನೇ ಪ್ರಕರಣದ ಮೇರೆಗೆ ಸೃಜಿಸಲಾದ ವಿಶೇಷ ನಿಧಿಗೆ ಜಮೆಮಾಡುವ ಉದ್ದೇಶಕ್ಕಾಗಿ ಯೋಜನೆಯನ್ನು ರೂಪಿಸುವುದು;

(ಐ) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಯಾವುದೇ ಇತರ ಸಂಪನ್ಮೂಲದಿಂದ ಧನಸಹಾಯ ಒದಗಿಸಬಹುದಾದಂಥ ಸಮಾಜದ ಆರ್ಥಿಕ ದುರ್ಬಲ ವರ್ಗಗಳಿಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ಯೋಜನೆಗಳನ್ನು ರೂಪಿಸುವುದು ;

(ಜೆ) ಗೃಹ ನಿರ್ಮಾಣಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತರಬೇತಿ ಕಾರ್ಯಕ್ರಮಗಳು, ಸೆಮಿನಾರ್‌ಗಳು ಮತ್ತು ವಿಚಾರಗೋಷ್ಠಿಗಳನ್ನು ಸಂಘಟಿಸುವುದು;

(ಕೆ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಸುಭದ್ರ ಬೆಳವಣಿಗೆಯನ್ನು ಸುನಿಶ್ಚಿತಗೊಳಿಸಲು ಅವುಗಳಿಗೆ ಮಾರ್ಗದರ್ಶನಗಳನ್ನೊದಗಿಸುವುದು;

(ಎಲ್) ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ನೆರವು ಒದಗಿಸುವುದು;

(ಎಂ) ಅದರ ಸಮಗ್ರ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಭಾರತ ಜೀವವಿಮಾ ನಿಗಮ, ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ, ಭಾರತ ಸಾಮಾನ್ಯ ವಿಮಾ ನಿಗಮ ಮತ್ತು ಇತರ ಹಣಕಾಸು ಸಂಸ್ಥೆಗಳೊಂದಿಗೆ ಸಮನ್ವಯ ಹೊಂದಿರುವುದು;

(ಎನ್) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ವಹಿಸಿದ ಕರ್ತವ್ಯಗಳ ನಿರ್ವಹಣೆಯಲ್ಲಿ ಎಲ್ಲಾ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸುವುದು;

(ಒ) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ರಿಸರ್ವ್ ಬ್ಯಾಂಕಿನ ಅಥವಾ ರಿಸರ್ವ್ ಬ್ಯಾಂಕು ಅಧಿಕೃತಗೊಳಿಸಬಹುದಾದ ಯಾವುದೇ ಪ್ರಾಧಿಕಾರದ ಏಜೆಂಟನಾಗಿ ಕಾರ್ಯನಿರ್ವಹಿಸುವುದು;

(ಪಿ) ರಿಸರ್ವ್ ಬ್ಯಾಂಕ್‌ನ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಬಹುದಾದ ಯಾವುದೇ ಇತರ ಬಗೆಯ ವ್ಯವಹಾರ;

(ಕ್ಯೂ) ಸಾಮಾನ್ಯವಾಗಿ, ಈ ಅಧಿನಿಯಮದ ಮೇರೆಗಿನ ಅದರ ಅಧಿಕಾರಗಳ ಚಲಾವಣೆಗೆ ಅಥವಾ ಅದರ ಕರ್ತವ್ಯಗಳ ನಿರ್ವಹಣೆಗೆ ಪ್ರಾಸಂಗಿಕವಾದ ಅಥವಾ ಆನುಷಂಗಿಕವಾದಂಥ ಎಲ್ಲಾ ವಿಷಯಗಳು ಮತ್ತು ಕಾರ್ಯಗಳನ್ನು ಮಾಡುವುದು.

**15. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಸಾಲ ಪಡೆಯುವುದು ಮತ್ತು ಠೇವಣಿಗಳನ್ನು ಅಂಗೀಕರಿಸುವುದು.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಈ ಅಧಿನಿಯಮದ ಮೇರೆಗಿನ ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ-

(ಎ) ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಿಬಂಧನೆಗಳ ಮೇಲೆ, ಕೇಂದ್ರ ಸರ್ಕಾರದ ಖಾತರಿ ಸಹಿತ ಅಥವಾ ಇಲ್ಲದೆ ಬಾಂಡುಗಳನ್ನು ಮತ್ತು ಡಿಬೆಂಚರುಗಳನ್ನು ಹೊರಡಿಸಬಹುದು ಮತ್ತು ಮಾರಾಟ ಮಾಡಬಹುದು;

(ಬಿ) ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಕೇಂದ್ರ ಸರ್ಕಾರದಿಂದ, ಅನುಸೂಚಿತ ಬ್ಯಾಂಕುಗಳಿಂದ, ಹಣಕಾಸು ಸಂಸ್ಥೆಗಳಿಂದ, ಮ್ಯೂಚುಯಲ್ ಫಂಡ್‌ಗಳಿಂದ ಮತ್ತು ಆ ಸರ್ಕಾರವು ಅನುಮೋದಿಸಿದ ಯಾವುದೇ ಇತರ ಪ್ರಾಧಿಕಾರ ಅಥವಾ ಸಂಘಟನೆ ಅಥವಾ ಸಂಸ್ಥೆಯಿಂದ ಹಣ ಸಾಲ ಪಡೆಯಬಹುದು;

(ಸಿ) ಅಂಥ ಅವಧಿಯು ಮುಕ್ತಾಯವಾದ ತರುವಾಯ ಮರು ಸಂದಾಯ ಮಾಡಬಹುದಾದ ಠೇವಣಿಗಳನ್ನು, ರಿಸರ್ವ್ ಬ್ಯಾಂಕು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅನುಮೋದಿಸಬಹುದಾದಂಥ ನಿಬಂಧನೆಗಳ ಮೇಲೆ ಸ್ವೀಕರಿಸಬಹುದು:

ಪರಂತು, ಈ ಖಂಡದಲ್ಲಿರುವುದು ಯಾವುದೂ, 14ನೇ ಪ್ರಕರಣದ (ಹೆಚ್‌ಹೆಚ್) ಖಂಡದ ಅನುಸಾರ ಬ್ಯಾಂಕ್ ರೂಪಿಸಿದ ಯೋಜನೆಯ ಮೇರೆಗೆ ಅಂಗೀಕರಿಸಲಾದ ಠೇವಣಿಗಳಿಗೆ ಅನ್ವಯಿಸತಕ್ಕುದಲ್ಲ;

(ಡಿ) ರಿಸರ್ವ್ ಬ್ಯಾಂಕಿನಿಂದ-

(i) ಸಾಲಗಳು ಮತ್ತು ಮುಂಗಡಗಳ ಮೂಲಕ ಮತ್ತು ಸಾಮಾನ್ಯವಾಗಿ, ರಿಸರ್ವ್ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅಥವಾ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಹಣಕಾಸು ನೆರವನ್ನು ಪಡೆಯುವ ಮೂಲಕ;

(ii) ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ 2) 46 ಡಿ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಗೃಹನಿರ್ಮಾಣ ಸಾಲ ನೀಡಿಕೆ (ದೀರ್ಘಾವಧಿ ಕಾರ್ಯಾಚರಣೆ) ನಿಧಿಯಿಂದ, ಆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳ ಪೈಕಿ ಯಾವುದೇ ಉದ್ದೇಶಕ್ಕಾಗಿ

-ಹಣ ಸಾಲ ಪಡೆಯಬಹುದು ;

(ಇ) ಸಲ್ಲಿಸಿದ ಸೇವೆಗಳಿಗಾಗಿ ಪರಿಶ್ರಮ ಧನ, ದಳ್ಳಾಳಿ, ಒಪ್ಪಿಕೊಂಡ ಚಾರ್ಜುಗಳು, ಸಮಾಲೋಚನೆ ಚಾರ್ಜುಗಳು, ಸೇವಾ ವೆಚ್ಚಗಳು, ಸ್ವಾಮ್ಯ ಶುಲ್ಕ, ಪ್ರೀಮಿಯಂಗಳು, ಲೈಸೆನ್ಸು ಫೀಜುಗಳಂಥ ಪ್ರತಿಫಲಗಳು ಮತ್ತು ಯಾವುದೇ ವಿವರಣೆಯ ಯಾವುದೇ ಇತರ ಪ್ರತಿಫಲವನ್ನು ಸ್ವೀಕರಿಸಬಹುದು;

(ಎಫ್) ಸರ್ಕಾರದಿಂದ ಅಥವಾ ಯಾವುದೇ ಇತರ ಮೂಲಗಳಿಂದ ದಾನಗಳು, ಅನುದಾನಗಳು, ವಂತಿಗೆಗಳು ಅಥವಾ ಉಪಕಾರ ಧನಗಳನ್ನು ಸ್ವೀಕರಿಸಬಹುದು;

(2) ಕೇಂದ್ರ ಸರ್ಕಾರವು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ತನಗೆ ಮಾಡಿಕೊಂಡ ಕೋರಿಕೆಯ ಮೇಲೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಹೊರಡಿಸುವ ಬಾಂಡುಗಳು ಮತ್ತು ಡಿಬೆಂಚರುಗಳು ಅಸಲಿನ ಮರು ಸಂದಾಯಕ್ಕೆ ಮತ್ತು ಆ ಸರ್ಕಾರವು ನಿಗದಿಪಡಿಸಬಹುದಾದಂಥ ದರದಲ್ಲಿ ಬಡ್ಡಿಯ ಸಂದಾಯಕ್ಕೆ ಸಂಬಂಧಿಸಿದಂತೆ ಖಾತರಿ ನೀಡಬಹುದು.

**16. ವಿದೇಶೀ ಕರೆನ್ಸಿಯಲ್ಲಿ ಸಾಲಗಳು.**- (1) ವಿದೇಶೀ ವಿನಿಮಯ ಅಧಿನಿಯಮ, 1973ರಲ್ಲಿ (1973ರ 46) ಅಥವಾ ವಿದೇಶೀ ವಿನಿಮಯಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಈ

ಅಧಿನಿಯಮದ ಮೇರೆಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವ ಉದ್ದೇಶಕ್ಕಾಗಿ, ರಿಸರ್ವ್ ಬ್ಯಾಂಕ್‌ನೊಂದಿಗೆ ಸಮಾಲೋಚಿಸಿ ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳ ಮೇಲೆ ಭಾರತದಲ್ಲಿ ಅಥವಾ ಬೇರೆಡೆ ಇರುವ ಯಾವುದೇ ಬ್ಯಾಂಕಿನಿಂದ ಅಥವಾ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯಬಹುದು.

(2) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ತೆಗೆದುಕೊಂಡ ಯಾವುದೇ ಸಾಲ ಅಥವಾ ಅದರ ಭಾಗಕ್ಕೆ ಸಂಬಂಧಿಸಿದಂತೆ ಅಸಲಿನ ಮರುಸಂದಾಯ ಮತ್ತು ಬಡ್ಡಿ ಮತ್ತು ಇತರ ಆನುಷಂಗಿಕ ವೆಚ್ಚಗಳ ಸಂದಾಯದ ಬಗ್ಗೆ ಅವಶ್ಯವಿರುವಲ್ಲಿ ಖಾತರಿ ನೀಡಬಹುದು.

**16ಎ. ಸಾಲ ಪಡೆಯುವವನಿಗೆ ನೆರವನ್ನು ಯಾವಾಗ ಕೊಡಬೇಕು ಅಥವಾ ಭದ್ರತೆಯಾಗಿ ಕೊಡಲೊಪ್ಪಿದ ಸ್ವತ್ತಿನಲ್ಲಿ ಋಣಭಾರ.**- (1) ಯಾರೇ ವ್ಯಕ್ತಿಯು ಅಥವಾ ಸಂಸ್ಥೆಯು ತನಗೆ ಸೇರಿರುವ ಅಥವಾ ಆ ಸಂಸ್ಥೆಗೆ ಸೇರಿರುವ ಯಾವುದೇ ಸ್ಥಿರ ಸ್ವತ್ತಿನ ಭದ್ರತೆಯ ಮೇಲೆ ಅಥವಾ ಹಣಕಾಸು ನೆರವಿಗಾಗಿ ಯಾವ ಇತರ ವ್ಯಕ್ತಿಯ ಸ್ವತ್ತನ್ನು ಪಾರ್ಶ್ವಿಕ ಭದ್ರತೆಯಾಗಿ ಕೊಡಲೊಪ್ಪಿರುವನೋ ಆ ಇತರ ವ್ಯಕ್ತಿಯ ಸ್ವತ್ತಿನ ಭದ್ರತೆಯ ಮೇಲೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಿಂದ ಯಾವುದೇ ಹಣಕಾಸು ನೆರವನ್ನು ಕೋರಿರುವಾಗ, ಅಂಥ ವ್ಯಕ್ತಿಯು ಅಥವಾ ಸಂಸ್ಥೆಯು ಅಥವಾ ಸಂದರ್ಭಾನುಸಾರ ಅಂಥ ಇತರ ವ್ಯಕ್ತಿಯು, ಈ ಅಧಿನಿಯಮದ ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಯಲ್ಲಿರುವಂತೆ, ಅಂಥ ನೆರವನ್ನು ಪಡೆಯುವ ಸಲುವಾಗಿ ಭದ್ರತೆಯಾಗಿ, ಅಥವಾ ಸಂದರ್ಭಾನುಸಾರ ಪಾರ್ಶ್ವಿಕ ಭದ್ರತೆಯಾಗಿ ಕೊಡಲೊಪ್ಪಿದ ಸ್ಥಿರ ಸ್ವತ್ತಿನ ವಿವರಗಳನ್ನು ತಿಳಿಸಿ ಮತ್ತು ನೆರವನ್ನು ಮಂಜೂರು ಮಾಡಿದರೆ ಆ ನೆರವಿಗೆ ಸಂಬಂಧಪಟ್ಟ ಬಾಕಿಗಳು ಅಂಥ ಸ್ಥಿರ ಸ್ವತ್ತಿನ ಮೇಲೆ ಋಣಭಾರವಾಗಿರತಕ್ಕದ್ದೆಂದು ಒಪ್ಪಿಕೊಂಡು ಒಂದು ಲಿಖಿತ ಘೋಷಣೆಯನ್ನು ಬರೆದುಕೊಡಬಹುದು ಮತ್ತು ಅಂಥ ಘೋಷಣೆಯನ್ನು ಸ್ವೀಕರಿಸಿದ ಮೇಲೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಸದರಿ ವ್ಯಕ್ತಿಗೆ ಅಥವಾ ಸಂಸ್ಥೆಗೆ ಯಾವುದೇ ಹಣಕಾಸು ನೆರವನ್ನು ಮಂಜೂರು ಮಾಡಿದರೆ, ಅಂಥ ನೆರವಿಗೆ ಸಂಬಂಧಪಟ್ಟ ಬಾಕಿಗಳೂ ಕೂಡ, ಹಾಗೆ ನಿರ್ದಿಷ್ಟಪಡಿಸಿದ ಸ್ಥಿರಸ್ವತ್ತಿಗೆ ಸಂಬಂಧಪಟ್ಟಂತೆ, ಯಾರೇ ಇತರ ಸಾಲಿಗನಿಗೆ ಹಿಂದೆ ಯಾವುದೇ ಋಣಭಾರ ಇದ್ದರೆ ಅಥವಾ ಅವನಿಗೆ ಅಡಮಾನ ಆಗಿದ್ದರೆ ಅವನ ಹಕ್ಕುಗಳಿಗೆ ಬಾಧಕವಾಗದಂತೆ, ಈ ಪ್ರಕರಣದ ಉಪಬಂಧಗಳ ಮೇರೆಗೆ, ಸದರಿ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತಿನ ಮೇಲೆ ಋಣಭಾರವಾಗಿರತಕ್ಕದ್ದು.

(2) ಒಬ್ಬ ವ್ಯಕ್ತಿಯು ಅಥವಾ ಒಂದು ಸಂಸ್ಥೆಯು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ಹಣಕಾಸು ನೆರವಿಗೆ ಭದ್ರತೆಯಾಗಿ ಯಾವುದೇ ಇನ್ನೊಂದು ಸ್ಥಿರ ಸ್ವತ್ತನ್ನು ಕೊಡಲೊಪ್ಪಿದಲ್ಲಿ, ಅಂಥ ವ್ಯಕ್ತಿಯು ಅಥವಾ ಸಂಸ್ಥೆಯು, ಈ ಅಧಿನಿಯಮದ ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಯಲ್ಲಿರುವಂತೆ, ಸಾಧ್ಯವಾದಷ್ಟು ಮಟ್ಟಿಗೆ, ಒಂದು ಹೊಸ ಘೋಷಣೆಯನ್ನು ಬರೆದುಕೊಡತಕ್ಕದ್ದು, ಆ ತರುವಾಯ ಅಂಥ ನೆರವಿಗೆ ಸಂಬಂಧಪಟ್ಟ ಬಾಕಿಗಳೂ ಕೂಡ, ಈ ಪ್ರಕರಣದ ಉಪಬಂಧಗಳ ಮೇರೆಗೆ, ಅಂಥ ಹೊಸ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿರುವ ಸ್ವತ್ತಿನ ಮೇಲೂ ಋಣಭಾರವಾಗಿರತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಘೋಷಣೆಯನ್ನು, ಸದರಿ ವ್ಯಕ್ತಿಯು ಅಥವಾ ಸಂಸ್ಥೆಯು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಿಂದ ಮುಂಚಿತವಾಗಿ ಅನುಮೋದನೆ ಪಡೆದು ವ್ಯತ್ಯಸ್ಥಗೊಳಿಸಬಹುದು ಅಥವಾ ರದ್ದುಮಾಡಬಹುದು.

(4) (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಘೋಷಣೆಯನ್ನು ನೋಂದಣಿ ಅಧಿನಿಯಮ, 1908 (1908ರ 16)ರ ಉಪಬಂಧಗಳ ಮೇರೆಗೆ ಒಂದು ಒಪ್ಪಂದವೆಂದು ನೋಂದಾಯಿಸಬಹುದಾದ ದಸ್ತಾವೇಜೆಂದು ಭಾವಿಸತಕ್ಕದ್ದು ಮತ್ತು ಅಂಥ ಯಾವುದೇ ದಸ್ತಾವೇಜು ಹಾಗೆ ನೋಂದಾಯಿತವಾಗದ ಹೊರತು ಪರಿಣಾಮಕಾರಿಯಾಗಿರತಕ್ಕದ್ದಲ್ಲ.

**16ಬಿ. ನ್ಯಾಸದಲ್ಲಿ ಇರಬೇಕಾದ ಮೊಬಲಗು ಮತ್ತು ಭದ್ರತೆ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಣಕಾಸು ಒದಗಿಸಿದ ಅಥವಾ ಮರು ಹಣಕಾಸು ಒದಗಿಸಿದ ಸಾಲಗಳ ಮತ್ತು ಮುಂಗಡಗಳ ಮರು ಸಂದಾಯ ಆದಾಗ ಅಥವಾ

ವಸೂಲಾದಾಗ, ಸಾಲ ಪಡೆದಿದ್ದಂಥ ಸಂಸ್ಥೆಯು ಸ್ವೀಕರಿಸಿದ ಯಾವುದೇ ಮೊತ್ತವನ್ನು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಮಂಜೂರು ಮಾಡಿದ ಹಣ ಸಾಲದ ಮಟ್ಟಿಗೆ ಮತ್ತು ಉಳಿದ ಬಾಕಿಯನ್ನು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗಾಗಿ ನ್ಯಾಸವಾಗಿ ಸಾಲ ಪಡೆದಿದ್ದಂಥ ಸಂಸ್ಥೆಯು ಸ್ವೀಕರಿಸಿರುವುದಾಗಿ ಭಾವಿಸತಕ್ಕದ್ದು, ಮತ್ತು ತದನುಸಾರವಾಗಿ, ಅಂಥ ಸಂಸ್ಥೆಯು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸಂದಾಯ ಮಾಡತಕ್ಕದ್ದು.

(2) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಸಾಲ ಪಡೆಯುವ ಸಂಸ್ಥೆಗೆ ಯಾವುದೇ ಹಣ ಸಾಲವನ್ನು ಮಂಜೂರು ಮಾಡಿರುವಲ್ಲಿ, ಮಂಜೂರು ಮಾಡಲಾಗಿರುವ ಅಂಥ ಹಣಸಾಲಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹಾರದ ನಿಮಿತ್ತ, ಅಂಥ ಸಾಲ ಪಡೆದಿದ್ದಂಥ ಸಂಸ್ಥೆಯು ಧಾರಣಮಾಡಿರುವ, ಅಥವಾ ಧಾರಣ ಮಾಡಬಹುದಾಗಿರುವ ಎಲ್ಲ ಭದ್ರತೆಗಳನ್ನು ಅಂಥ ಸಂಸ್ಥೆಯು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗಾಗಿ ನ್ಯಾಸವಾಗಿ ಧಾರಣಮಾಡಿರತಕ್ಕದ್ದು.

**17. ಹಕ್ಕುಗಳ ವರ್ಗಾವಣೆಗೆ ಅಧಿಕಾರ.**- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಕೊಟ್ಟ ಯಾವುದೇ ಸಾಲ ಅಥವಾ ಮುಂಗಡ ಅಥವಾ ಅದು ವಸೂಲು ಮಾಡಬಹುದಾದ ಯಾವುದೇ ಮೊಬಲಗಿಗೆ ಸಂಬಂಧಿಸಿದಂತೆ ಅದು ಹೊಂದಿರುವ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು (ಅದಕ್ಕೆ ಪ್ರಾಸಂಗಿಕವಾದ ಇತರ ಹಕ್ಕುಗಳೂ ಸೇರಿ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಯಾವುದೇ ಲಿಖಿತವನ್ನು ಬರೆದುಕೊಡುವ ಮೂಲಕ ಅಥವಾ ನೀಡುವ ಮೂಲಕ ಅಥವಾ ಹಿಂಬರಹದ ಮೂಲಕ ಯಾವುದೇ ಲಿಖಿತವನ್ನು ವರ್ಗಾವಣೆ ಮಾಡುವ ಮೂಲಕ ಅಥವಾ ಅಂಥ ಸಾಲ ಅಥವಾ ಮುಂಗಡಕ್ಕೆ ಸಂಬಂಧಿಸಿದಂಥ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ಯಾವ ಇತರ ಕಾನೂನುಸಮ್ಮತ ರೀತಿಯಲ್ಲಿ ವರ್ಗಾಯಿಸಬಹುದೋ ಆ ಯಾವುದೇ ಇತರ ರೀತಿಯಲ್ಲಿ ಪೂರ್ಣವಾಗಿ ಅಥವಾ ಭಾಗಶಃ ವರ್ಗಾವಣೆ ಮಾಡಬಹುದು ಮತ್ತು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಅಂಥ ವರ್ಗಾವಣೆ ಏನೇ ಇದ್ದರೂ, ಭಾರತ ನ್ಯಾಸ ಅಧಿನಿಯಮ, 1882ರ (1882ರ 2) 3ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ವರ್ಗಾವಣೆ ಪಡೆದವನ ನ್ಯಾಸಧಾರಿಯಾಗಿ ವರ್ತಿಸಬಹುದು.

**18. ಹಕ್ಕುಗಳನ್ನು ಆರ್ಜಿಸಲು ಅಧಿಕಾರ.**- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಯಾವುದೇ ಸಂಸ್ಥೆಯು ನೀಡಿದ ಯಾವುದೇ ಸಾಲ ಅಥವಾ ಮುಂಗಡಕ್ಕೆ ಅಥವಾ ಅಂಥ ಸಂಸ್ಥೆಯು ವಸೂಲು ಮಾಡಬಹುದಾದ ಯಾವುದೇ ಮೊಬಲಗಿಗೆ ಸಂಬಂಧಿಸಿದಂತೆ ಅದರ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು (ಅದಕ್ಕೆ ಪ್ರಾಸಂಗಿಕವಾದ ಯಾವುದೇ ಇತರ ಹಕ್ಕುಗಳೂ ಸೇರಿ) ಯಾವುದೇ ಲಿಖಿತವನ್ನು ಬರೆದು ಕೊಡುವ ಅಥವಾ ನೀಡುವ ಮೂಲಕ ಅಥವಾ ಯಾವುದೇ ಲಿಖಿತವನ್ನು ವರ್ಗಾಯಿಸುವ ಮೂಲಕ ಅಥವಾ ಅಂಥ ಸಾಲ ಅಥವಾ ಮುಂಗಡಕ್ಕೆ ಸಂಬಂಧಿಸಿದ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ಕಾನೂನು ಸಮ್ಮತವಾಗಿ ವರ್ಗಾಯಿಸಬಹುದಾದ ಯಾವುದೇ ಇತರ ರೀತಿಯಲ್ಲಿ ಪೂರ್ಣವಾಗಿ ಅಥವಾ ಭಾಗಶಃ ವರ್ಗಾಯಿಸುವ ಅಥವಾ ಹಸ್ತಾಂತರಿಸುವ ಮೂಲಕ ಆರ್ಜಿಸಲು ಹಕ್ಕು ಹೊಂದಿರತಕ್ಕುದು.

**18ಎ. ನೋಂದಣಿಯಿಂದ ವಿನಾಯಿತಿ.**- ನೋಂದಣಿ ಅಧಿನಿಯಮ, 1908 (1908ರ 16)ರ 17ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ,-

(ಎ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳು ಮತ್ತು ಅನುಸೂಚಿತ ಬ್ಯಾಂಕುಗಳು ಮಂಜೂರು ಮಾಡಿದ ಸಾಲಗಳಿಗೆ ಭದ್ರತೆಯೊದಗಿಸುವುದಕ್ಕಾಗಿ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ನೀಡಿದ ಋಣ ಬಾಧ್ಯತೆ ಸ್ವರೂಪದ ಅಥವಾ ಪ್ರಯೋಜನಕಾರಿ ಹಿತಾಸಕ್ತಿಯುಳ್ಳ ನ್ಯಾಸ ಪ್ರಮಾಣ ಪತ್ರಗಳ ಸ್ವರೂಪದ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಬಹುದಾದ ಮತ್ತು ಅಂಥ ಸಾಲಗಳಿಗೆ ಮತ್ತು ಅವುಗಳ ಭದ್ರತೆಗಳಿಗೆ ಸಂಬಂಧಪಟ್ಟಂತೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಯಾವುದರಿಂದ ಹಕ್ಕುಗಳನ್ನು ಮತ್ತು ಹಿತಾಸಕ್ತಿಗಳನ್ನು ಆರ್ಜಿಸಿದೆಯೋ, ಒಂದು ನೋಂದಾಯಿತ ಪತ್ರದಿಂದ ಧಾರಕನಿಗೆ ಅವಿಭಾಜ್ಯ ಹಿತಾಸಕ್ತಿಗೆ ಹಕ್ಕು ಒದಗಿಸುವಷ್ಟರ ಮಟ್ಟಿಗೆ ಹೊರತು, ಸ್ಥಿರಸ್ವತ್ತಿಗೆ ಅಥವಾ ಸ್ಥಿರಸ್ವತ್ತಿನಲ್ಲಿ ಯಾವುದೇ ಹಕ್ಕು, ಹಕ್ಕು ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಸೃಷ್ಟಿಸದ, ಘೋಷಿಸದ, ಹಸ್ತಾಂತರಗೊಳಿಸದ, ಸೀಮಿತಗೊಳಿಸದ ಅಥವಾ ಅಂತ್ಯಗೊಳಿಸದ ಯಾವುದೇ ಲಿಖಿತವನ್ನು ಅಥವಾ ಇತರ ಲಿಖಿತಗಳನ್ನು; ಅಥವಾ

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಿದ ಅಂಥ ಲಿಖಿತಗಳ ವರ್ಗಾವಣೆಯನ್ನು

– ಕಡ್ಡಾಯವಾಗಿ ನೋಂದಣಿ ಮಾಡಿಸುವ ಅಗತ್ಯ ಇರತಕ್ಕದ್ದಲ್ಲ.

**18ಬಿ. ಬಾಕಿಗಳನ್ನು ಭೂಕಂದಾಯದ ಬಾಕಿಗಳಂತೆ ವಸೂಲು ಮಾಡುವುದು.**– ನ್ಯಾಸಧಾರಿಯಾಗಿ ಅಥವಾ ಇತರ ರೀತಿಯಲ್ಲಿ ಕಾರ್ಯಪ್ರವೃತ್ತವಾಗಿರುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಅಥವಾ ಅನುಸೂಚಿತ ಬ್ಯಾಂಕುಗಳ ಸಾಲಕ್ಕೆ ಭದ್ರತೆ ನೀಡಿರುವ ಸಂಬಂಧದಲ್ಲಿ ಒಪ್ಪಂದದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಯಾವುದೇ ಮೊತ್ತವು ಬಾಕಿ ಇರುವಲ್ಲಿ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ವಸೂಲಿಯ ಯಾವುದೇ ಇತರ ವಿಧಾನಕ್ಕೆ ಬಾಧಕವಾಗದಂತೆ, ತನಗೆ ಬರಬೇಕಾದ ಬಾಕಿ ಮೊಬಲಗಿನ ವಸೂಲಿಗಾಗಿ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ರಾಜ್ಯ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ಯಾವುದೇ ಮೊಬಲಗು ಬಾಕಿ ಇದೆ ಎಂದು ಮನದಟ್ಟಾದರೆ, ಅದು ಕಲೆಕ್ಟರನಿಗೆ ಆ ಮೊಬಲಗಿಗೆ ಸಂಬಂಧಪಟ್ಟಂತೆ ಒಂದು ಪ್ರಮಾಣ ಪತ್ರ ನೀಡಬಹುದು ಮತ್ತು ಕಲೆಕ್ಟರನು, ಆ ಮೊಬಲಗನ್ನು ಭೂಕಂದಾಯದ ಬಾಕಿಗಳನ್ನು ವಸೂಲು ಮಾಡುವ ರೀತಿಯಲ್ಲಿಯೇ ವಸೂಲು ಮಾಡಲು ಕ್ರಮವನ್ನು ಕೈಗೊಳ್ಳತಕ್ಕದ್ದು.

**19. ಹಣಕಾಸು ವ್ಯವಸ್ಥೆಗಾಗಿ ಷರತ್ತುಗಳನ್ನು ವಿಧಿಸಲು ಅಧಿಕಾರ.**– ಯಾವುದೇ ಸಾಲ ಪಡೆಯುವ ಸಂಸ್ಥೆಯೊಂದಿಗೆ ಈ ಅಧ್ಯಾಯದ ಮೇರೆಗೆ ಯಾವುದೇ ವ್ಯವಹಾರವನ್ನು ಮಾಡಿಕೊಳ್ಳುವಾಗ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಹಿತಾಸಕ್ತಿಗಳನ್ನು ರಕ್ಷಿಸಲು ತಾನು ಅವಶ್ಯ ಅಥವಾ ವಿಹಿತವೆಂದು ಭಾವಿಸಬಹುದಾದಂಥ ಷರತ್ತುಗಳನ್ನು ವಿಧಿಸಬಹುದು.

**20. ಒಪ್ಪಂದ ಮಾಡಿಕೊಂಡ ಅವಧಿಗೆ ಮುಂಚೆ ಮರುಸಂದಾಯ ಮಾಡಲು ಕರೆ ನೀಡುವ ಅಧಿಕಾರ.**– ಯಾವುದೇ ಒಪ್ಪಂದದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಲಿಖಿತ ನೋಟೀಸಿನ ಮೂಲಕ ಯಾವುದೇ ಸಂಸ್ಥೆಯನ್ನು–

(ಎ) ಸಾಲ ಅಥವಾ ಮುಂಗಡಕ್ಕಾಗಿ ಸಲ್ಲಿಸುವ ಅರ್ಜಿಯಲ್ಲಿ ಯಾವುದೇ ಮುಖ್ಯ ವಿಚಾರದಲ್ಲಿ ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವ ಮಾಹಿತಿಯನ್ನು ಕೊಡಲಾಗಿತ್ತೆಂದು ಮಂಡಲಿಗೆ ಕಂಡುಬಂದಲ್ಲಿ, ಅಥವಾ

(ಬಿ) ಸಾಲ ಅಥವಾ ಮುಂಗಡದ ವಿಷಯದಲ್ಲಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನೊಂದಿಗೆ ಮಾಡಿಕೊಂಡ ಒಪ್ಪಂದದ ನಿಬಂಧನೆಗಳಲ್ಲಿ ಯಾವುದೇ ನಿಬಂಧನೆಯನ್ನು ಸಾಲ ಪಡೆಯುವ ಸಂಸ್ಥೆಯು ಪಾಲಿಸಲು ತಪ್ಪಿದರೆ, ಅಥವಾ

(ಸಿ) ಸಾಲ ಪಡೆಯುವ ಸಂಸ್ಥೆಯು ತನ್ನ ಋಣಗಳನ್ನು ಸಂದಾಯ ಮಾಡಲು ಅಸಮರ್ಥವಾಗಿರುವುದಾಗಿ ಅಥವಾ ಆ ಸಂಬಂಧದಲ್ಲಿ ಸಮಾಪನೆಗಾಗಿ ವ್ಯವಹರಣೆಗಳನ್ನು ಪ್ರಾರಂಭಿಸಬಹುದೆಂದು ಯುಕ್ತವಾಗಿ ನಿರೀಕ್ಷಿಸಿದ್ದರೆ, ಅಥವಾ

(ಡಿ) ಯಾವುದೇ ಕಾರಣಕ್ಕಾಗಿ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಹಿತಾಸಕ್ತಿಗಳನ್ನು ರಕ್ಷಿಸಲು ಹಾಗೆ ಮಾಡುವುದು ಅವಶ್ಯವಾಗಿದ್ದರೆ

– ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಅದರ ಹೊಣೆಗಳನ್ನು ಆ ಕೂಡಲೇ ತೀರಿಸಲು ಅಗತ್ಯಪಡಿಸಬಹುದು.

**21. ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ದಾಖಲೆಗಳನ್ನು ಪರಿಶೀಲಿಸುವ ಅವಕಾಶ ಹೊಂದಿರುವುದು.**– (1) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನಿಂದ ಯಾವುದೇ ಸಾಲದ ಸೌಲಭ್ಯಗಳನ್ನು ಪಡೆಯಬಯಸುವ ಯಾವುದೇ ಸಂಸ್ಥೆಯ ಯಾವ ದಾಖಲೆಗಳನ್ನು ಮತ್ತು ಅಂಥ ಸಂಸ್ಥೆಯಿಂದ ಯಾವುದೇ ಸಾಲದ ಸೌಲಭ್ಯಗಳನ್ನು ಪಡೆಯಬಯಸುವ ಯಾವನೇ ವ್ಯಕ್ತಿಯ ಯಾವ ದಾಖಲೆಗಳನ್ನು ಪರಿಶೀಲಿಸುವುದು ಅಂಥ ಸಂಸ್ಥೆಗೆ ಹಣಕಾಸು ಒದಗಿಸುವುದಕ್ಕೆ ಅಥವಾ ಇತರ ನೆರವು ಒದಗಿಸುವುದಕ್ಕೆ ಅಥವಾ ಆ ಸಂಸ್ಥೆಯು ಅಂಥ ವ್ಯಕ್ತಿಗೆ ಕೊಟ್ಟ ಯಾವುದೇ ಸಾಲ ಅಥವಾ ಮುಂಗಡವನ್ನು ಪುನರ್ಧನಗೊಳಿಸುವುದಕ್ಕೆ ಸಂಬಂಧಿಸಿದಂತೆ ಅಗತ್ಯವೆಂದು ರಾಷ್ಟ್ರೀಯ ಗೃಹ

ನಿರ್ಮಾಣ ಬ್ಯಾಂಕಿಗೆ ಕಂಡುಬಂದರೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಅಂಥ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲು ಅವಕಾಶವೀಯತಕ್ಕದ್ದು.

(2) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಸಂಸ್ಥೆ ಅಥವಾ ವ್ಯಕ್ತಿಯನ್ನು ಆ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ದಾಖಲೆಗಳ ಪ್ರತಿಗಳನ್ನು ತನಗೆ ಒದಗಿಸುವಂತೆ ಅಗತ್ಯ ಪಡಿಸಬಹುದು ಮತ್ತು ಆ ಸಂಸ್ಥೆ ಅಥವಾ ಸಂದರ್ಭಾನುಸಾರ ಆ ವ್ಯಕ್ತಿಯು ಅಂಥ ಕೋರಿಕೆಯನ್ನು ಪಾಲಿಸಲು ಬದ್ಧನಾಗತಕ್ಕದ್ದು.

**22. ಸಾಲದ ಅಥವಾ ಮುಂಗಡದ ಸಿಂಧುತ್ವವನ್ನು ಪ್ರಶ್ನಿಸತಕ್ಕದ್ದಲ್ಲ.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಕೊಟ್ಟ ಯಾವುದೇ ಸಾಲ ಅಥವಾ ಮುಂಗಡದ ಸಿಂಧುತ್ವವನ್ನು ಸಾಲ ಪಡೆಯುವ ಸಂಸ್ಥೆಯ ರಚನೆಯನ್ನು ನಿಯಂತ್ರಿಸುವಂಥ ಇತರ ಕಾನೂನು ಅಥವಾ ಯಾವುದೇ ಠರಾವು, ಕರಾರು ಅಥವಾ ಯಾವುದೇ ಲಿಖಿತದ ಅಗತ್ಯತೆಗಳನ್ನು ಪಾಲಿಸಿಲ್ಲವೆಂಬ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಯಾವುದೇ ಕಂಪನಿ ಅಥವಾ ಸಹಕಾರ ಸಂಘದ ರಚನೆಗೆ ಸಂಬಂಧಿಸಿದ ಲಿಖಿತವು ಅಂಥ ಕಂಪನಿಗೆ ಅಥವಾ ಸಹಕಾರ ಸಂಘಕ್ಕೆ ಯಾವುದೇ ಸಾಲ ಅಥವಾ ಮುಂಗಡವನ್ನು ಪಡೆಯಲು ಅಧಿಕಾರ ನೀಡದಿರುವಲ್ಲಿ ಅಂಥ ಕಂಪನಿ ಅಥವಾ ಸಹಕಾರ ಸಂಘವನ್ನು ಹಾಗೆ ಮಾಡಲು ಸಾಧ್ಯಗೊಳಿಸತಕ್ಕದ್ದಲ್ಲ.

**23. ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ತನ್ನವೇ ಬಾಂಡುಗಳು ಅಥವಾ ಡಿಬೆಂಚರುಗಳ ಮೇಲೆ ಸಾಲಗಳು ಅಥವಾ ಮುಂಗಡಗಳನ್ನು ನೀಡದಿರುವುದು.**- ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ತನ್ನವೇ ಬಾಂಡುಗಳು ಅಥವಾ ಡಿಬೆಂಚರುಗಳ ಭದ್ರತೆಯ ಮೇಲೆ ಯಾವುದೇ ಸಾಲ ಅಥವಾ ಮುಂಗಡವನ್ನು ನೀಡತಕ್ಕದ್ದಲ್ಲ.

**24. ಪರಿಶೀಲಿಸಲು ಅಧಿಕಾರ.**- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಯಾವುದೇ ಸಮಯದಲ್ಲಿ ಯಾವ ಸಂಸ್ಥೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಯಾವುದೇ ಸಾಲ ಅಥವಾ ಮುಂಗಡವನ್ನು ಕೊಟ್ಟಿದೆಯೋ ಅಥವಾ ಯಾವುದೇ ಇತರ ಹಣಕಾಸು ನೆರವನ್ನು ನೀಡಿದೆಯೋ ಆ ಯಾವುದೇ ಸಂಸ್ಥೆಯನ್ನು ಮತ್ತು ಅದರ ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ತನ್ನ ಒಬ್ಬ ಅಥವಾ ಹೆಚ್ಚು ಜನ ಅಧಿಕಾರಿಗಳಿಂದ ಪರಿಶೀಲನೆ ಮಾಡಿಸಬಹುದು ಮತ್ತು ಹಾಗೆ ಮಾಡಲು ರಿಸರ್ವ್ ಬ್ಯಾಂಕು ನಿರ್ದೇಶಿಸಿದ ಮೇಲೆ ಹಾಗೆ ಮಾಡಿಸತಕ್ಕದ್ದು; ಮತ್ತು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಅಂಥ ಪರಿಶೀಲನೆಯ ಮೇಲಣ ತನ್ನ ವರದಿಯ ಒಂದು ಪ್ರತಿಯನ್ನು ಆ ಸಂಸ್ಥೆಗೆ ಒದಗಿಸತಕ್ಕದ್ದು.

(2) ಸಂಸ್ಥೆಯ ಪ್ರತಿಯೊಬ್ಬ ಅಧಿಕಾರಿ, ನಿಯೋಜಿತ ಅಥವಾ ಅದರ ಸಕಲ ವ್ಯವಹಾರಗಳ ಅಥವಾ ಅದರ ಭಾಗದ ಪ್ರಭಾರ ಹೊಂದಿರುವ ಇತರ ವ್ಯಕ್ತಿ ಅಥವಾ ವ್ಯಕ್ತಿಗಳು, (1)ನೇ ಉಪ-ಪ್ರಕರಣದ ಮೇರೆಗೆ ಪರಿಶೀಲನೆ ನಡೆಸುವ ಯಾವನೇ ಅಧಿಕಾರಿಗೆ ತನ್ನ ಅಭಿರಕ್ಷೆಯಲ್ಲಿರುವ ಅಥವಾ ಅಧಿಕಾರದಲ್ಲಿರುವಂಥ ಎಲ್ಲ ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಸದರಿ ಅಧಿಕಾರಿಯು ನಿರ್ದಿಷ್ಟಪಡಿಸಬಹುದಾದ ಸಮಯದೊಳಗೆ ಸದರಿ ಅಧಿಕಾರಿಯು ಸಂಸ್ಥೆಯ ವ್ಯವಹಾರಗಳಿಗೆ ಸಂಬಂಧಿಸಿದ ಹಾಗೆ ಅವನಿಂದ ಕೋರಬಹುದಾದ ಯಾವುದೇ ವಿವರಣೆಗಳನ್ನು ಮತ್ತು ಮಾಹಿತಿಯನ್ನು ಒದಗಿಸುವುದು ಅವರ ಕರ್ತವ್ಯವಾಗಿರತಕ್ಕದ್ದು.

**25. ಸಾಲದ ಮಾಹಿತಿಯನ್ನು ಸಂಗ್ರಹಿಸಲು ಅಧಿಕಾರ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಯ ಉದ್ದೇಶಕ್ಕಾಗಿ, ಯಾವುದೇ ಸಮಯದಲ್ಲಿ, ಯಾವುದೇ ಸಂಸ್ಥೆಗೆ ಸಾಲದ ಮಾಹಿತಿಯನ್ನು ತನಗೆ ಕಾಲಕಾಲಕ್ಕೆ ತಾನು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಸಮಯದೊಳಗೆ ಸಲ್ಲಿಸುವಂತೆ ನಿರ್ದೇಶಿಸಬಹುದು.

(2) ಪ್ರತಿಯೊಂದು ಸಂಸ್ಥೆಯು, ಅದರ ಘಟಕಗಳೊಂದಿಗೆ ಅದರ ವ್ಯವಹಾರಗಳ ಗೌಪ್ಯತೆಗೆ ಸಂಬಂಧಿಸಿದಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಅದರ ರಚನೆಯನ್ನು ವಿನಿಯಮಗೊಳಿಸುವ ಯಾವುದೇ ಲಿಖಿತದಲ್ಲಿ ಅಥವಾ ಅದು ಬರೆದುಕೊಟ್ಟ ಯಾವುದೇ ಒಪ್ಪಂದದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, (1)ನೇ ಉಪ-ಪ್ರಕರಣದ ಮೇರೆಗೆ ನೀಡಲಾದ ಯಾವುದೇ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕುದು.

(3) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಯ ಉದ್ದೇಶಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸ್ಥಳೀಯ ಪ್ರಾಧಿಕಾರಗಳು, ರಿಸರ್ವ್ ಬ್ಯಾಂಕು ಅಥವಾ ಈ ಬಗ್ಗೆ ರಿಸರ್ವ್ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಬ್ಯಾಂಕು ಅಥವಾ ಅಂಥ ಹಣಕಾಸು ಅಥವಾ ಇತರ ಸಂಸ್ಥೆಗಳಿಂದ ಸಾಲದ ಮಾಹಿತಿ ಅಥವಾ ಇತರ ಮಾಹಿತಿಗಳನ್ನು ಸಂಗ್ರಹಿಸಬಹುದು.

**ವಿವರಣೆ:**- ಈ ಪ್ರಕರಣ ಮತ್ತು 26ನೇ ಪ್ರಕರಣದ ಉದ್ದೇಶಗಳಿಗಾಗಿ ಸಾಲದ ಮಾಹಿತಿ, ಎಂದರೆ-

(i) ಗೃಹ ನಿರ್ಮಾಣ ಉದ್ದೇಶಕ್ಕಾಗಿ ನೀಡಲಾದ ಸಾಲಗಳು ಮತ್ತು ಮುಂಗಡಗಳ ಮತ್ತು ಇತರ ಸಾಲ ಸೌಲಭ್ಯಗಳ ಮೊಬಲಗು ;

(ii) ಅಂಥ ಸಾಲಗಳು, ಮುಂಗಡಗಳು ಅಥವಾ ಇತರ ಸಾಲದ ಸೌಲಭ್ಯಗಳಿಗಾಗಿ ತೆಗೆದುಕೊಂಡ ಭದ್ರತೆಯ ಸ್ವರೂಪ ;

(iii) ಒದಗಿಸಲಾದ ಖಾತರಿಗಳು; ಮತ್ತು

(iv) ಸಾಲ ಪಡೆದವರ ಸಾಲ ತೀರಿಕೆ ಸಾಮರ್ಥ್ಯಕ್ಕೆ ಸಂಬಂಧಿಸಿದ ಯಾವುದೇ ಇತರ ಮಾಹಿತಿ

- ಇವುಗಳಿಗೆ ಸಂಬಂಧಪಟ್ಟ ಯಾವುದೇ ಮಾಹಿತಿ.

**26. ಮಾಹಿತಿಯನ್ನು ಪ್ರಕಟಿಸಲು ಅಧಿಕಾರ.**- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಈ ಅಧಿನಿಯಮದ ಮೇರೆಗೆ ತಾನು ಪಡೆದ ಯಾವುದೇ ಸಾಲದ ಮಾಹಿತಿಯನ್ನು ಅಥವಾ ಇತರ ಮಾಹಿತಿಯನ್ನು ತಾನು ಸೂಕ್ತವೆಂದು ಭಾವಿಸುವಂಥ ಕ್ರೋಡೀಕೃತ ನಮೂನೆಯಲ್ಲಿ ಅಥವಾ ಯಾವುದೇ ಇತರ ನಮೂನೆಯಲ್ಲಿ ಪ್ರಕಟಿಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಇರುವುದಾಗಿ ಪರಿಗಣಿಸಿದರೆ ಹಾಗೆ ಮಾಡಬಹುದು.

**27. ಸಲಹಾ ಸೇವೆಗಳು.**- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸ್ಥಳೀಯ ಪ್ರಾಧಿಕಾರಗಳು ಮತ್ತು ಗೃಹ ನಿರ್ಮಾಣಕ್ಕೆ ಸಂಬಂಧಪಟ್ಟ ಇತರ ಏಜೆನ್ಸಿಗಳಿಗೆ-

(ಎ) ಗೃಹ ನಿರ್ಮಾಣ ಮತ್ತು ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಬೆಳವಣಿಗೆಯನ್ನು ಪ್ರವರ್ತಿಸುವ ಗುರಿ ಹೊಂದಿರುವ ಸಮಗ್ರ ಕಾರ್ಯನೀತಿಗಳನ್ನು ರೂಪಿಸುವುದು ;

(ಬಿ) ಆಶ್ರಯ, ಗೃಹನಿರ್ಮಾಣ ಮತ್ತು ಮಾನವ ವಸಾಹತು ಇವುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತ ಕಾನೂನು ರಚನೆ

- ಇವುಗಳಿಗೆ ಸಂಬಂಧಿಸಿ ಸಲಹಾ ಸೇವೆಗಳನ್ನು ಒದಗಿಸಬಹುದು.

## ಅಧ್ಯಾಯ V

### ಠೇವಣಿಗಳನ್ನು ಸ್ವೀಕರಿಸುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಉಪಬಂಧಗಳು

**28. ಠೇವಣಿಯ ಪರಿಭಾಷೆ.**- ಈ ಅಧ್ಯಾಯದಲ್ಲಿ 'ಠೇವಣಿ' ಎಂಬ ಪದವು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ 2) 45Iನೇ ಪ್ರಕರಣದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರತಕ್ಕುದು.

**29. ಕೆಲವು ಸಂದರ್ಭಗಳಲ್ಲಿ ಈ ಅಧ್ಯಾಯವು ಅನ್ವಯಿಸದಿರುವುದು.**- (1) ಈ ಅಧ್ಯಾಯದ ಉಪಬಂಧಗಳು ಒಂದು ಫರ್ಮು ಆಗಿರುವ ಅಥವಾ ನಿಗಮಿತವಲ್ಲದ ವ್ಯಕ್ತಿಗಳ ಸಂಘವಾಗಿರುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಸ್ವೀಕರಿಸುವ ಠೇವಣಿಗಳಿಗೆ ಅನ್ವಯವಾಗತಕ್ಕುದಲ್ಲ.

(2) ಸಂದೇಹಗಳ ನಿವಾರಣೆಗಾಗಿ, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಫರ್ಮುಗಳು ಮತ್ತು ನಿಗಮಿತವಲ್ಲದ ವ್ಯಕ್ತಿಗಳ ಸಂಘಗಳು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ 2) ಅಧ್ಯಾಯ IIIಸಿ ಯ ಉಪಬಂಧಗಳಿಗೆ ಅಧೀನವಾಗಿರುವುದು ಮುಂದುವರಿಯತಕ್ಕುದು ಎಂದು ಈ ಮೂಲಕ ಘೋಷಿಸಲಾಗಿದೆ.

**29ಎ. ನೋಂದಣಿಯ ಮತ್ತು ನಿವ್ವಳ ಒಡೆತನದ ನಿಧಿಯ ಅಗತ್ಯತೆ.**- (1) ಈ ಅಧ್ಯಾಯದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಕಂಪನಿಯಾಗಿರುವ ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು-

(ಎ) ಈ ಅಧ್ಯಾಯದ ಮೇರೆಗೆ ನೀಡಲಾಗುವ ನೋಂದಣಿ ಪ್ರಮಾಣ ಪತ್ರವನ್ನು ಪಡೆಯದೆಯೇ; ಮತ್ತು

(ಬಿ) ಇಪ್ಪತ್ತೈದು ಲಕ್ಷ ರೂಪಾಯಿಗಳಷ್ಟು ನಿವ್ವಳ ಒಡೆತನದ ನಿಧಿ ಅಥವಾ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಷ್ಟು ಇನ್ನೂ ಹೆಚ್ಚಿನ ಮೊಬಲಗು ಇಲ್ಲದೆಯೇ

- ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವ್ಯವಹಾರವನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ.

(2) ಪ್ರತಿಯೊಂದು ಅಂಥ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ನೋಂದಣಿ ಕೋರಿ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು (ತಿದ್ದುಪಡಿ) ಅಧಿನಿಯಮ, 2000ದ ಪ್ರಾರಂಭದಂದು, ಅಸ್ತಿತ್ವದಲ್ಲಿರುವ ಕಂಪನಿಯಾಗಿರುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ಅಂಥ ಪ್ರಾರಂಭದಿಂದ ಆರು ತಿಂಗಳು ಮುಕ್ತಾಯವಾಗುವುದಕ್ಕೆ ಮುಂಚೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ನೋಂದಣಿ ಕೋರಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಅದಕ್ಕೆ ನೋಂದಣಿ ಪ್ರಮಾಣ ಪತ್ರವನ್ನು ನೀಡುವವರೆಗೆ ಅಥವಾ ನೋಂದಣಿ ಕೋರಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿದ ಬಗ್ಗೆ ಅದಕ್ಕೆ ತಿಳಿಸುವವರೆಗೆ ಅದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯಾಗಿ ವ್ಯವಹಾರ ನಡೆಸುವುದನ್ನು ಮುಂದುವರೆಸಬಹುದು.

(3) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು (ತಿದ್ದುಪಡಿ) ಅಧಿನಿಯಮ, 2000ದ ಪ್ರಾರಂಭದಂದು ಅಸ್ತಿತ್ವದಲ್ಲಿರುವಂಥ ಮತ್ತು ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ನಿವ್ವಳ ಒಡೆತನದ ನಿಧಿಯನ್ನು ಹೊಂದಿರುವಂಥ ಕಂಪನಿಯಾಗಿರುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ನಿವ್ವಳ ಒಡೆತನದ ನಿಧಿಯ ಅಗತ್ಯತೆಯನ್ನು ಈಡೇರಿಸಿಕೊಳ್ಳುವುದಕ್ಕೆ ಅಂಥ ಸಂಸ್ಥೆಗೆ ಸಾಧ್ಯತೆ ಮಾಡಿಕೊಡುವ ಉದ್ದೇಶಕ್ಕಾಗಿ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವ್ಯವಹಾರವನ್ನು,-

(i) ಅಂಥ ಪ್ರಾರಂಭದಿಂದ ಮೂರು ವರ್ಷಗಳ ಅವಧಿಯವರೆಗೆ; ಅಥವಾ

(ii) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಮತ್ತಷ್ಟು ಹೆಚ್ಚಿನ ಅವಧಿಯವರೆಗೆ ವಿಸ್ತರಿಸುವುದಕ್ಕಾಗಿ ಕಾರಣಗಳನ್ನು ಲಿಖಿತದಲ್ಲಿ ದಾಖಲ್ಮಾಡಿದ ತರುವಾಯ, ಹಾಗೆ ಹೆಚ್ಚಿಸಿದ ಮತ್ತಷ್ಟು ಅವಧಿಯವರೆಗೆ

- ಅಂಥ ಸಂಸ್ಥೆಯು, ನಿವ್ವಳ ಒಡೆತನದ ನಿಧಿಯ ಅಗತ್ಯತೆಯನ್ನು ಈಡೇರಿಸಿಕೊಂಡ ಮೂರು ತಿಂಗಳೊಳಗಾಗಿ ಹಾಗೆ ಅಗತ್ಯವನ್ನು ಈಡೇರಿಸಿಕೊಂಡಿರುವುದಾಗಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ತಿಳಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಮುಂದುವರೆಸಬಹುದು:

ಪರಂತು, ಈ ಉಪ-ಪ್ರಕರಣದ ಮೇರೆಗೆ ವ್ಯವಹಾರ ಮುಂದುವರಿಸಲು ಅನುಮತಿಸಿದ ಅವಧಿಯು ಯಾವುದೇ ಸಂದರ್ಭದಲ್ಲಿ ಒಟ್ಟಾರೆಯಾಗಿ ಆರು ವರ್ಷಗಳನ್ನು ಮೀರತಕ್ಕದ್ದಲ್ಲ.

(4) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ನೋಂದಣಿ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಅಂಥ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಪುಸ್ತಕಗಳನ್ನು ತಪಾಸಣೆ ಮಾಡುವ ಮೂಲಕ ಮನದಟ್ಟು ಮಾಡಿಕೊಡುವಂತೆ ಅಥವಾ ಅನ್ಯಥಾ ಈ ಕೆಳಕಂಡ ಷರತ್ತುಗಳನ್ನು ಈಡೇರಿಸುವಂತೆ ಅಗತ್ಯಪಡಿಸಬಹುದು:-

(ಎ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ತನ್ನ ಈಗಿನ ಅಥವಾ ಮುಂದಿನ ಠೇವಣಿದಾರರು ಕ್ಲೇಮು ಮಾಡಿದಾಗ ಅವರಿಗೆ ಪೂರ್ಣವಾಗಿ ಸಂದಾಯವನ್ನು ಮಾಡುವ ಸ್ಥಿತಿಯಲ್ಲಿದೆ ಅಥವಾ ಸ್ಥಿತಿಯಲ್ಲಿರತಕ್ಕದ್ದು;

(ಬಿ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವ್ಯವಹಾರಗಳನ್ನು ಈಗಿನ ಅಥವಾ ಮುಂದಿನ ಠೇವಣಿದಾರರ ಹಿತಾಸಕ್ತಿಗೆ ಹಾನಿಯುಂಟಾಗುವ ರೀತಿಯಲ್ಲಿ ನಿರ್ವಹಿಸುತ್ತಿಲ್ಲ ಅಥವಾ ನಿರ್ವಹಿಸುವ ಸಂಭವ ಇಲ್ಲ;

(ಸಿ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಆಡಳಿತ ವರ್ಗದ ಅಥವಾ ಉದ್ದೇಶಿತ ಆಡಳಿತ ವರ್ಗದ ಸಾಮಾನ್ಯ ಸ್ವರೂಪವು ಸಾರ್ವಜನಿಕ ಹಿತಾಸಕ್ತಿಗೆ ಅಥವಾ ಠೇವಣಿದಾರರ ಹಿತಾಸಕ್ತಿಗಳಿಗೆ ಪ್ರತಿಕೂಲಕರವಾಗಿರತಕ್ಕದ್ದಲ್ಲ;

(ಡಿ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಯಲ್ಲಿ ಸಾಕಷ್ಟು ಬಂಡವಾಳ ರಚನೆಯಿದೆ ಮತ್ತು ಗಳಿಸುವ ನಿರೀಕ್ಷೆಯಿದೆ;

(ಇ) ಭಾರತದಲ್ಲಿ ವ್ಯವಹಾರವನ್ನು ಪ್ರಾರಂಭಿಸಲು ಅಥವಾ ನಡೆಸಲು ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡುವ ಮೂಲಕ ಸಾರ್ವಜನಿಕ ಹಿತದೃಷ್ಟಿಯನ್ನು ಸಾಧಿಸತಕ್ಕದ್ದು;

(ಎಫ್) ನೋಂದಣಿ ಪ್ರಮಾಣ ಪತ್ರದ ನೀಡಿಕೆಯು ದೇಶದ ಗೃಹ ನಿರ್ಮಾಣ ಹಣಕಾಸು ವಲಯದ ಕಾರ್ಯನಿರ್ವಹಣೆ ಮತ್ತು ಬೆಳವಣಿಗೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ; ಮತ್ತು

(ಜಿ) ಗೃಹ ನಿರ್ಮಾಣ ಸಂಸ್ಥೆಯೊಂದು ಭಾರತದಲ್ಲಿ ವ್ಯವಹಾರವನ್ನು ಪ್ರಾರಂಭಿಸುವುದನ್ನು ಅಥವಾ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಯಾವುದೇ ಇತರ ಷರತ್ತನ್ನು ಈಡೇರಿಸುವುದು ಅವಶ್ಯವೆಂದು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಅಭಿಪ್ರಾಯಪಟ್ಟಲ್ಲಿ ಅಂಥ ಷರತ್ತು ಸಾರ್ವಜನಿಕ ಹಿತಾಸಕ್ತಿಗೆ ಅಥವಾ ಠೇವಣಿದಾರರ ಹಿತಾಸಕ್ತಿಗಳಿಗೆ ಬಾಧಕವಾಗುವಂತೆ ಇರತಕ್ಕುದಲ್ಲ.

(5) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, (4)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳನ್ನು ಈಡೇರಿಸಲಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಂಡ ತರುವಾಯ, ತಾನು ವಿಧಿಸುವುದು ಸೂಕ್ತವೆಂದು ಪರಿಗಣಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡಬಹುದು.

(6) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಈ ಪ್ರಕರಣದ ಮೇರೆಗೆ, ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ ಮಂಜೂರು ಮಾಡಿದ ನೋಂದಣಿ ಪ್ರಮಾಣ ಪತ್ರವನ್ನು, ಆ ಸಂಸ್ಥೆಯು,-

(i) ಭಾರತದಲ್ಲಿ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವ್ಯವಹಾರ ನಡೆಸುವುದನ್ನು ನಿಲ್ಲಿಸಿದ್ದರೆ; ಅಥವಾ

(ii) ಯಾವ ಷರತ್ತಿಗೆ ಒಳಪಟ್ಟು ನೋಂದಣಿ ಪ್ರಮಾಣ ಪತ್ರವನ್ನು ನೀಡಲಾಗಿತ್ತೋ ಆ ಯಾವುದೇ ಷರತ್ತನ್ನು ಪಾಲಿಸಲು ತಪ್ಪಿದ್ದರೆ; ಅಥವಾ

(iii) (4)ನೇ ಉಪ ಪ್ರಕರಣದ (ಎ) ಯಿಂದ (ಜಿ) ವರೆಗಿನ ಖಂಡಗಳಲ್ಲಿ ಉಲ್ಲೇಖಿಸಿದ ಷರತ್ತುಗಳ ಪೈಕಿ ಯಾವುದೇ ಷರತ್ತನ್ನು ಈಡೇರಿಸಲು ಯಾವುದೇ ಸಮಯದಲ್ಲಿ ತಪ್ಪಿದರೆ; ಅಥವಾ

(iv) (ಎ) ಈ ಅಧ್ಯಾಯದ ಉಪಬಂಧಗಳ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪಿದರೆ; ಅಥವಾ

(ಬಿ) ಈ ಅಧ್ಯಾಯದ ಉಪಬಂಧಗಳ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಹೊರಡಿಸಿದ ಯಾವುದೇ ಕಾನೂನಿನ ಅಥವಾ ಯಾವುದೇ ನಿರ್ದೇಶನದ ಅಥವಾ ಆದೇಶದ ಅಗತ್ಯತೆಗಳಿಗೆ ಅನುಸಾರವಾಗಿ ಲೆಕ್ಕಪತ್ರಗಳನ್ನು ನಿರ್ವಹಿಸಲು ತಪ್ಪಿದರೆ; ಅಥವಾ

(ಸಿ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ತಪಾಸಣಾಧಿಕಾರಿಗಳು ಅದರ ಲೆಕ್ಕ ಪುಸ್ತಕಗಳು ಮತ್ತು ಇತರ ಸಂಬಂಧಪಟ್ಟ ದಸ್ತಾವೇಜುಗಳನ್ನು ತಪಾಸಣೆಯ ಸಲುವಾಗಿ ಒಪ್ಪಿಸುವಂತೆ ಅಥವಾ ನೀಡುವಂತೆ ತಗಾದೆಮಾಡಿದಾಗ ಅದು ಹಾಗೆ ಒಪ್ಪಿಸಲು ಅಥವಾ ನೀಡಲು ತಪ್ಪಿದರೆ; ಅಥವಾ

(v) ಈ ಅಧ್ಯಾಯದ ಉಪಬಂಧಗಳ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಮಾಡಿದ ಆದೇಶದ ಮೂಲಕ ಠೇವಣಿಯನ್ನು ಸ್ವೀಕರಿಸುವಂತೆ ನಿಷೇಧಿಸಿದ್ದು, ಅಂಥ ಆದೇಶವು ಮೂರು ತಿಂಗಳಿಗೆ ಕಡಿಮೆ ಇಲ್ಲದ ಅವಧಿಯವರೆಗೆ ಜಾರಿಯಲ್ಲಿದ್ದರೆ-

- ರದ್ದುಪಡಿಸಬಹುದು:

ಪರಂತು, ಆ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು (ii)ನೇ ಖಂಡದ ಉಪಬಂಧಗಳನ್ನು ಪಾಲಿಸಲು ತಪ್ಪಿದೆಯೆಂಬ ಅಥವಾ (4)ನೇ ಉಪ-ಪ್ರಕರಣದ (ಎ)ಯಿಂದ (ಜಿ) ವರೆಗಿನ ಖಂಡಗಳಲ್ಲಿ ಉಲ್ಲೇಖಿಸಿರುವ ಷರತ್ತುಗಳ ಪೈಕಿ ಯಾವುದೇ ಷರತ್ತನ್ನು ಈಡೇರಿಸಲು ತಪ್ಪಿದೆಯೆಂಬ ಕಾರಣದ ಮೇಲೆ ನೋಂದಣಿ ಪ್ರಮಾಣ ಪತ್ರವನ್ನು ರದ್ದುಪಡಿಸುವುದಕ್ಕೆ ಮುಂಚೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ನೋಂದಣಿ ಪ್ರಮಾಣ ಪತ್ರವನ್ನು ರದ್ದುಪಡಿಸುವಲ್ಲಿ ವಿಳಂಬವಾದರೆ ಸಾರ್ವಜನಿಕ ಹಿತಾಸಕ್ತಿಗೆ ಅಥವಾ ಠೇವಣಿದಾರರ ಅಥವಾ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಹಿತಾಸಕ್ತಿಗೆ ಬಾಧಕವಾಗುವುದೆಂದು ಅಭಿಪ್ರಾಯಪಟ್ಟ ಹೊರತು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳ ಮೇಲೆ ಅಂಥ ಸಂಸ್ಥೆಗೆ ಅಂಥ ಉಪಬಂಧಗಳನ್ನು ಪಾಲಿಸಲು ಅಥವಾ ಅಂಥ ಷರತ್ತನ್ನು ಈಡೇರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಒಂದು ಅವಕಾಶವನ್ನು ನೀಡತಕ್ಕದ್ದು:

ಮತ್ತೂ ಪರಂತು, ನೋಂದಣಿ ಪ್ರಮಾಣ ಪತ್ರವನ್ನು ರದ್ದುಪಡಿಸುವ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ ಅಹವಾಲನ್ನು ಹೇಳಿಕೊಳ್ಳಲು ಅಂಥ ಸಂಸ್ಥೆಗೆ ಒಂದು ಯುಕ್ತ ಅವಕಾಶವನ್ನು ನೀಡತಕ್ಕದ್ದು.

(7) ನೋಂದಣಿ ಕೋರಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವ ಅಥವಾ ನೋಂದಣಿ ಪ್ರಮಾಣ ಪತ್ರವನ್ನು ರದ್ದುಪಡಿಸುವ ಆದೇಶದಿಂದ ಬಾಧಿತವಾದ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ಹಾಗೆ ತಿರಸ್ಕರಿಸುವ ಅಥವಾ ರದ್ದುಪಡಿಸುವ ಆದೇಶವನ್ನು ತನಗೆ ತಿಳಿಸಿದಂಥ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕೇಂದ್ರ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ಮತ್ತು ಕೇಂದ್ರ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಿದ್ದರೆ, ಅದರ ತೀರ್ಮಾನವು, ಅಥವಾ ಯಾವುದೇ ಅಪೀಲನ್ನು ಸಲ್ಲಿಸಿಲ್ಲದಿದ್ದರೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ಅಪೀಲನ್ನು ತಿರಸ್ಕರಿಸುವ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ, ಅಹವಾಲನ್ನು ಹೇಳಿಕೊಳ್ಳಲು ಅಂಥ ಸಂಸ್ಥೆಗೆ ಒಂದು ಯುಕ್ತ ಅವಕಾಶವನ್ನು ನೀಡತಕ್ಕದ್ದು.

**ವಿವರಣೆ.**- ಈ ಪ್ರಕರಣದ ಉದ್ದೇಶಗಳಿಗಾಗಿ,-

(I) "ನಿವ್ವಳ ಒಡೆತನದ ನಿಧಿ" ಎಂದರೆ -

ಎ. ಆಯವ್ಯಯ ಪಟ್ಟಿಯಿಂದ;

(i) ನಷ್ಟದ ಸಂಚಿತ ಬಾಕಿಯನ್ನು;

(ii) ಮುಂದೂಡಲಾದ ರಾಜಸ್ವ ವೆಚ್ಚವನ್ನು; ಮತ್ತು

(iii) ಇತರ ಅಮೂರ್ತ ಅಸ್ತಿಗಳನ್ನು

– ಕಳೆದ ತರುವಾಯ; ಮತ್ತು

(ಬಿ) ಅಂಥ ಸಂಸ್ಥೆಯು –

(1) (i) ತನ್ನ ಅಧೀನ ಸಂಸ್ಥೆಗಳ;

(ii) ಅದೇ ಸಮೂಹದ ಕಂಪನಿಗಳ;

(iii) ಕಂಪನಿಗಳಾಗಿರುವ ಎಲ್ಲ ಇತರ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ

– ಷೇರುಗಳಲ್ಲಿ ಹೂಡಿರುವ ಹೂಡಿಕೆಗಳನ್ನು ತೋರಿಸುವ ಮೊಬಲಗುಗಳನ್ನು ಮತ್ತೆ ಕಳೆದ ತರುವಾಯ; ಮತ್ತು

(2) (i) ಅಂಥ ಕಂಪನಿಯ ಅಧೀನ ಕಂಪನಿಗಳಿಗೆ; ಮತ್ತು

(ii) ಮೇಲಿನ (ಎ) ಯಲ್ಲಿ ಹೇಳಿರುವ ಮೊಬಲಗಿನಲ್ಲಿ ಶೇ. 10 ರಷ್ಟನ್ನು ಮೀರುವ ಮೊಬಲಗಿನ ಮಟ್ಟಿಗೆ, ಅದೇ ಸಮೂಹದ ಕಂಪನಿಗಳಿಗೆ

– ನೀಡಿರುವ ಡಿಬೆಂಚರುಗಳ, ಬಾಂಡುಗಳ, ಬಾಕಿಯಿರುವ ಸಾಲಗಳ ಮತ್ತು ಮುಂಗಡಗಳ ಪುಸ್ತಕ ಮೌಲ್ಯವನ್ನು (ಕಂತು – ಖರೀದಿ ಮತ್ತು ಹಣಕಾಸು ನೀಡಿಕೆಯೂ ಸೇರಿದಂತೆ) ಮತ್ತು ಠೇವಣಿಗಳ ಪುಸ್ತಕ ಮೌಲ್ಯವನ್ನು

– ಕಳೆದ ತರುವಾಯ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಸದರಿ ಇತ್ತೀಚಿನ ಆಯವ್ಯಯ ಪಟ್ಟಿಯಲ್ಲಿ ತೋರಿಸಿದ ಸಂದಾಯಿತ ಈಕ್ವಿಟಿ ಬಂಡವಾಳ ಮತ್ತು ಮುಕ್ತ ಮೀಸಲುಗಳ ಒಟ್ಟು ಮೊತ್ತ;

(II) "ಸಹಾಯಕ ಸಂಸ್ಥೆಗಳು" ಮತ್ತು "ಅದೇ ಗುಂಪಿನಲ್ಲಿನ ಕಂಪನಿಗಳು" ಎಂಬ ಪದಾವಳಿಗಳು ಕಂಪನಿಗಳ ಅಧಿನಿಯಮ, 1956(1956ರ 1)ರಲ್ಲಿ ಅವುಗಳಿಗೆ ನೀಡಲಾಗಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**29ಬಿ. ಆಸ್ತಿಗಳ ಶೇಕಡಾ ಪ್ರಮಾಣವನ್ನು ಉಳಿಸಿಕೊಂಡು ಬರುವುದು.**– (1) ಪ್ರತಿಯೊಂದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ಭಾರತದಲ್ಲಿ ಪೂರ್ವಾಧಿರಹಿತ ಅನುಮೋದಿತ ಭದ್ರತಾ ಪತ್ರಗಳಲ್ಲಿ, ಎಂದರೆ ಅಂಥ ಭದ್ರತೆ ಪತ್ರಗಳ ಪ್ರಸ್ತುತ ಮಾರುಕಟ್ಟೆ ಬೆಲೆಗೆ ಮೀರದ ಬೆಲೆಯಲ್ಲಿ ಮೌಲ್ಯ ನಿರ್ಣಯಮಾಡಿದ ಮೊತ್ತವನ್ನು, ಎಂದರೆ ಯಾವುದೇ ದಿನದಂದು ವ್ಯವಹಾರ ಮುಕ್ತಾಯವಾದಾಗ, ಶೇಕಡ ಐದಕ್ಕಿಂತ ಕಡಿಮೆ ಇರದ ಅಥವಾ ಎರಡನೆಯ ಹಿಂದಿನ ತ್ರೈಮಾಸಿಕದ ಕೊನೆಯ ಕೆಲಸದ ದಿನದಂದು ವ್ಯವಹಾರ ಮುಕ್ತಾಯವಾಗಿದ್ದಾಗ ಬಾಕಿಯಿದ್ದ ಠೇವಣಿಗಳಲ್ಲಿ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಕಾಲಕಾಲಕ್ಕೆ ಮತ್ತು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಶೇಕಡ ಇಪ್ಪತ್ತೈದನ್ನು ಮೀರದ ಹೆಚ್ಚಿನ ಶೇಕಡಾ ಪ್ರಮಾಣದ ಮೊತ್ತವನ್ನು ಹೂಡಿಕೆ ಮಾಡತಕ್ಕದ್ದು ಮತ್ತು ಹೂಡಿಕೆಯನ್ನು ಮುಂದುವರಿಸತಕ್ಕದ್ದು.

(2) ಪ್ರತಿಯೊಂದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ಭಾರತದಲ್ಲಿ, (ಋಣಭಾರ ಮುಕ್ತ ಅಥವಾ ಧಾರಣಾಧಿಕಾರ ಮುಕ್ತವಾದ) ಅನುಸೂಚಿತ ಬ್ಯಾಂಕಿನ ಸಾವಧಿ ಠೇವಣಿಗಳ ಖಾತೆಯಲ್ಲಿ ಅಥವಾ ಠೇವಣಿಗಳ ಪ್ರಮಾಣಪತ್ರದಲ್ಲಿ ಅಥವಾ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಠೇವಣಿಗಳಲ್ಲಿ ಅಥವಾ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಹೊರಡಿಸಿದ ಬಾಂಡುಗಳಿಗೆ ವಂತಿಗೆ ನೀಡುವ ರೂಪದಲ್ಲಿ, ಅಥವಾ ಭಾಗಶಃ ಅಂಥ ಖಾತೆಯಲ್ಲಿ ಅಥವಾ ಠೇವಣಿಯಲ್ಲಿ ಅಥವಾ ಭಾಗಶಃ ಅಂಥ ವಂತಿಗೆಯಲ್ಲಿ ಯಾವುದೇ ದಿನದಂದು ವ್ಯವಹಾರ ಮುಕ್ತಾಯವಾದಾಗ, (1)ನೇ ಉಪ-ಪ್ರಕರಣದ ಮೇರೆಗೆ ಮಾಡಲಾದ ಹೂಡಿಕೆಗಳ ಸಹಿತ ಶೇಕಡಾ ಹತ್ತಕ್ಕಿಂತ ಕಡಿಮೆ ಇರದ ಅಥವಾ ಎರಡನೆಯ ಹಿಂದಿನ ತ್ರೈಮಾಸಿಕದ ಕೊನೆಯ ಕೆಲಸದ ದಿನದಂದು ವ್ಯವಹಾರ ಮುಕ್ತಾಯವಾಗಿದ್ದಾಗ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಪುಸ್ತಕಗಳಲ್ಲಿ ಬಾಕಿಯಿದ್ದ ಠೇವಣಿಗಳಲ್ಲಿ, ರಾಷ್ಟ್ರೀಯ ಗೃಹ ನಿರ್ಮಾಣ

ಬ್ಯಾಂಕು ಕಾಲಕಾಲಕ್ಕೆ ಮತ್ತು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಶೇಕಡಾ ಇಪ್ಪತ್ತೈದನ್ನು ಮೀರದ ಹೆಚ್ಚಿನ ಶೇಕಡಾ ಪ್ರಮಾಣದ ಮೊತ್ತವನ್ನು ಇಡತಕ್ಕದ್ದು.

(3) ಈ ಪ್ರಕರಣದ ಉಪಬಂಧಗಳನ್ನು ಪಾಲಿಸಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಪ್ರತಿಯೊಂದು ಅಂಥ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ, ಅಂಥ ರೀತಿಯಲ್ಲಿ ಮತ್ತು ಅಂಥ ಅವಧಿಗಾಗಿ ವಿವರಪಟ್ಟಿಕೆಯನ್ನು ತನಗೆ ಸಲ್ಲಿಸುವಂತೆ ಅಗತ್ಯಪಡಿಸಬಹುದು.

(4) ಯಾವುದೇ ದಿನದ ವ್ಯವಹಾರದ ಮುಕ್ತಾಯವಾದಾಗ, ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಹೂಡಿಕೆ ಮಾಡಿದ ಮೊಬಲಗು (1)ನೇ ಉಪ ಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ದರಕ್ಕಿಂತ ಕಡಿಮೆ ಇದ್ದರೆ, ಅಂಥ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ರಾಷ್ಟ್ರೀಯ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ, ಅಂಥ ಕೊರತೆಗೆ ಸಂಬಂಧಿಸಿದಂತೆ ವಾಸ್ತವವಾಗಿ ಎಷ್ಟು ಮೊತ್ತವನ್ನು ಉಳಿಸಿಕೊಳ್ಳಲಾಗಿದೆಯೋ ಅಥವಾ ನಿರ್ದಿಷ್ಟಪಡಿಸಿದ ಶೇಕಡಾ ಪ್ರಮಾಣಕ್ಕಿಂತ ಅಥವಾ ಕಡಿಮೆ ಹೂಡಿಕೆ ಮಾಡಲಾಗಿದೆಯೋ ಆ ಮೊಬಲಗಿನ ಮೇಲೆ, ಬ್ಯಾಂಕ್ ದರಕ್ಕಿಂತ ಹೆಚ್ಚಿಗೆಯಾಗಿ ವಾರ್ಷಿಕ ಶೇ. ಮೂರರ ದರದಲ್ಲಿ ದಂಡ ಬಡ್ಡಿಯನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದು, ಮತ್ತು ತರುವಾಯದ ಪ್ರತಿಯೊಂದು ತ್ರೈಮಾಸಿಕಗಳಲ್ಲಿ ಆ ಕೊರತೆಯು ಮುಂದುವರೆದರೆ, ದಂಡ ಬಡ್ಡಿಯ ದರವು, ಅಂಥ ಕೊರತೆಯ ಮೇಲೆ, ಪ್ರತಿಯೊಂದು ತರುವಾಯದ ತ್ರೈಮಾಸಿಕಕ್ಕಾಗಿ ಬ್ಯಾಂಕ್ ದರಕ್ಕಿಂತ ಹೆಚ್ಚಿಗೆಯಾಗಿ ವಾರ್ಷಿಕ ಶೇ. ಐದು ಆಗಿರತಕ್ಕದ್ದು.

(5) (ಎ) (4)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾಗಿರುವ ದಂಡ ಬಡ್ಡಿಯನ್ನು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ದಂಡ ಬಡ್ಡಿಯನ್ನು ಸಂದಾಯ ಮಾಡುವಂತೆ ತಗಾದೆ ಮಾಡಿ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ ನೋಟೀಸನ್ನು ಜಾರಿ ಮಾಡಿದಂಥ ದಿನಾಂಕದಿಂದ ಹದಿನಾಲ್ಕು ದಿನಗಳ ಅವಧಿಯೊಳಗಾಗಿ ಸಂದಾಯ ಮಾಡತಕ್ಕದ್ದು ಮತ್ತು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಅಂಥ ಅವಧಿಯೊಳಗಾಗಿ ಅದನ್ನು ಸಂದಾಯ ಮಾಡಲು ತಪ್ಪಿದರೆ, ಅಂಥ ತಪ್ಪಿತಸ್ಥ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಕಚೇರಿಯು ಇರುವಂಥ ಪ್ರದೇಶದ ಮೇಲೆ ಕ್ಷೇತ್ರಾಧಿಕಾರವನ್ನು ಹೊಂದಿರುವ ಪ್ರಧಾನ ಸಿವಿಲ್ ನ್ಯಾಯಾಲಯದ ನಿರ್ದೇಶನದ ಮೂಲಕ ಅದನ್ನು ವಿಧಿಸಬಹುದು ಮತ್ತು ಅಂಥ ನಿರ್ದೇಶನವನ್ನು, ಗೃಹ ನಿರ್ಮಾಣ ಬ್ಯಾಂಕು ಆ ಬಗ್ಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ತರುವಾಯ ಮತ್ತು ಅರ್ಜಿಯ ಮೇಲೆ ಮಾತ್ರ, ಕೊಡತಕ್ಕದ್ದು; ಮತ್ತು

(ಬಿ) ನ್ಯಾಯಾಲಯವು (ಎ) ಖಂಡದ ಮೇರೆಗೆ ನಿರ್ದೇಶನವನ್ನು ಕೊಡುವಾಗ, ಅದು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಸಂದಾಯ ಮಾಡಬೇಕಾಗಿರುವ ಮೊತ್ತವನ್ನು ನಿರ್ದಿಷ್ಟಪಡಿಸಿ ಒಂದು ಪ್ರಮಾಣ ಪತ್ರವನ್ನು ಹೊರಡಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪ್ರಮಾಣ ಪತ್ರವು ಒಂದು ದಾವೆಯಲ್ಲಿ ನ್ಯಾಯಾಲಯವು ಮಾಡಿದ ಡಿಕ್ರಿಯಾಗಿದ್ದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಜಾರಿಗೊಳಿಸುವಂಥದ್ದಾಗಿರತಕ್ಕದ್ದು.

(6) ಈ ಪ್ರಕರಣದಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಉಪಬಂಧಗಳನ್ನು ಪಾಲಿಸದಿರುವುದಕ್ಕೆ, ತಪ್ಪಿತಸ್ಥ ಗೃಹನಿರ್ಮಾಣ ಹಣಕಾಸು ಸಂಸ್ಥೆಗೆ ಸಾಕಷ್ಟು ಕಾರಣಗಳಿದ್ದವೆಂದು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಮನದಟ್ಟಾದರೆ, ಅದು, ದಂಡ ಬಡ್ಡಿಯನ್ನು ಸಂದಾಯ ಮಾಡುವಂತೆ ತಗಾದೆ ಮಾಡದಿರಬಹುದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ,-

(i) "ಅನುಮೋದಿತ ಭದ್ರತಾ ಪತ್ರಗಳು" ಎಂದರೆ, ಯಾವುದೇ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಭದ್ರತಾ ಪತ್ರಗಳು ಮತ್ತು ಬಂಧಪತ್ರಗಳ ಅಸಲು ಮತ್ತು ಅದರ ಮೇಲಿನ ಬಡ್ಡಿ ಇವೆರಡಕ್ಕೂ ಅಂಥ ಯಾವುದೇ ಸರ್ಕಾರವು ಪೂರ್ಣವಾಗಿ ಮತ್ತು ಷರತ್ತಿಲ್ಲದೆ ಖಾತ್ರಿ ನೀಡಿರುವಂಥ ಬಂಧಪತ್ರಗಳು;

(ii) "ಪೂರ್ವಾಧಿ ರಹಿತ ಭದ್ರತಾ ಪತ್ರಗಳು" ಎಂಬುದರಲ್ಲಿ, ಅನುಮೋದಿತ ಭದ್ರತಾ ಪತ್ರಗಳನ್ನು ನಗದೀಕರಿಸಿಕೊಳ್ಳದಿರುವ ಅಥವಾ ಬಳಸಿಕೊಳ್ಳದಿರುವ ಅಥವಾ ಯಾವುದೇ ರೀತಿಯಲ್ಲಿ ಪೂರ್ವಾಧಿ ಇರದಿರುವಷ್ಟರ ಮಟ್ಟಿಗೆ ಮುಂಗಡಕ್ಕಾಗಿ ಅಥವಾ ಯಾವುದೇ ಇತರ ಏರ್ಪಾಟಿಗಾಗಿ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಇನ್ನೊಂದು ಸಂಸ್ಥೆಯಲ್ಲಿ ಇಟ್ಟಿರುವಂಥ ಅನುಮೋದಿತ ಭದ್ರತಾ ಪತ್ರಗಳನ್ನು ಒಳಗೊಳ್ಳುತ್ತವೆ;

(iii) "ತ್ರೈಮಾಸಿಕ" ಎಂದರೆ ಮಾರ್ಚ್, ಜೂನ್, ಸೆಪ್ಟೆಂಬರ್ ಅಥವಾ ಡಿಸೆಂಬರ್ ತಿಂಗಳ ಕೊನೆಯ ದಿನದಂದು ಮುಕ್ತಾಯಗೊಳ್ಳುವ ಮೂರು ತಿಂಗಳ ಅವಧಿ.

**29ಸಿ. ಮೀಸಲು ನಿಧಿ.**- (1) ಕಂಪನಿಯಾಗಿರುವ ಪ್ರತಿಯೊಂದು ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಒಂದು ಮೀಸಲು ನಿಧಿಯನ್ನು ರಚಿಸತಕ್ಕದ್ದು ಮತ್ತು ಅದು ಲಾಭ ಮತ್ತು ನಷ್ಟದ ಲೆಕ್ಕಪತ್ರಗಳಲ್ಲಿ ನಿರೂಪಿಸಿರುವಂಥ ಪ್ರತಿವರ್ಷದ ಅದರ ನಿವ್ವಳ ಲಾಭದ ಪೈಕಿ ಶೇ. ಇಪ್ಪತ್ತೈದಕ್ಕೆ ಕಡಿಮೆ ಇಲ್ಲದಷ್ಟು ಮೊತ್ತವನ್ನು ಅದಕ್ಕೆ ವರ್ಗಾಯಿಸತಕ್ಕದ್ದು.

**ವಿವರಣೆ:**- ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ 36ನೇ ಪ್ರಕರಣದ (1)ನೇ ಉಪ ಪ್ರಕರಣದ (viii) ನೇ ಖಂಡದ ನಿಬಂಧನೆಗಳಿಗನುಸಾರವಾಗಿ ಯಾವುದೇ ವಿಶೇಷ ಮೀಸಲು ನಿಧಿಯನ್ನು ರಚಿಸುವ ಮತ್ತು ಅದನ್ನು ನಿರ್ವಹಿಸುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ಈ ಉಪಪ್ರಕರಣದ ಉದ್ದೇಶಗಳಿಗಾಗಿ ಅಂಥ ಮೀಸಲು ನಿಧಿಗೆ ಆ ವರ್ಷದಲ್ಲಿ ತಾನು ವರ್ಗಾವಣೆ ಮಾಡಿದ ಯಾವುದೇ ಮೊತ್ತವನ್ನು ಗಣನೆಗೆ ತೆಗೆದುಕೊಳ್ಳಬಹುದು.

(2) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಕ್ಕಾಗಿ ಹೊರತು, ಅಂಥ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, (1)ನೇ ಉಪಪ್ರಕರಣದ ನಿಬಂಧನೆಗಳಿಗೆ ಅನುಸಾರವಾಗಿ ಮೀಸಲು ನಿಧಿಯ ಉದ್ದೇಶಗಳಿಗಾಗಿ ಗಣನೆಗೆ ತೆಗೆದುಕೊಂಡಿರುವಂಥ ವಿಶೇಷ ಮೀಸಲು ನಿಧಿಯೂ ಸೇರಿದಂತೆ ಮೀಸಲು ನಿಧಿಯಿಂದ ಯಾವುದೇ ಮೊತ್ತದ ಯಾವುದೇ ವಿನಿಯೋಗವನ್ನು ಮಾಡತಕ್ಕದಲ್ಲ ಮತ್ತು ಪ್ರತಿಯೊಂದು ಅಂಥ ವಿನಿಯೋಗವನ್ನು ಹಾಗೆ ಹಣ ತೆಗೆದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ವರದಿ ಮಾಡತಕ್ಕದ್ದು:

ಪರಂತು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಸಾಕಷ್ಟು ಕಾರಣಗಳನ್ನು ತೋರಿಸಿದ ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ, ಆ ಇಪ್ಪತ್ತೊಂದು ದಿನಗಳ ಅವಧಿಯನ್ನು ತಾನು ಸೂಕ್ತವೆಂದು ಆಲೋಚಿಸುವಂಥ ಹೆಚ್ಚಿನ ಅವಧಿಯವರೆಗೆ ವಿಸ್ತರಿಸಬಹುದು ಮತ್ತು ಹಾಗೆ ವರದಿಯನ್ನು ಸಲ್ಲಿಸುವಲ್ಲಿ ಉಂಟಾದ ವಿಳಂಬವನ್ನು ಮನ್ನಾ ಮಾಡಬಹುದು.

(3) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಶಿಫಾರಸಿನ ಮೇಲೆ, ಮತ್ತು ಕಂಪನಿಯಾಗಿರುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಠೇವಣಿ ಹೊಣೆಗಾರಿಕೆಗಳಿಗೆ ಸಂಬಂಧಪಟ್ಟಂತೆ ಅದರ ಸಂದಾಯಿತ ಬಂಡವಾಳ ಮತ್ತು ಮೀಸಲುಗಳ ಪರ್ಯಾಪ್ತತೆಯನ್ನು ಗಮನದಲ್ಲಿಟ್ಟುಕೊಂಡು, ಲಿಖಿತ ಆದೇಶದ ಮೂಲಕ, (1)ನೇ ಉಪ ಪ್ರಕರಣದ ಉಪಬಂಧಗಳು ಅಂಥ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಅನ್ವಯವಾಗತಕ್ಕದ್ದಲ್ಲವೆಂದು ಘೋಷಿಸಬಹುದು:

ಪರಂತು, (1)ನೇ ಉಪ ಪ್ರಕರಣದ ಮೇರೆಗಿನ ಮೀಸಲು ನಿಧಿಯಲ್ಲಿರುವ ಮೊಬಲಗು, ಮತ್ತು ಷೇರು ಕಂತು ಲೆಕ್ಕದಲ್ಲಿರುವ ಮೊಬಲಗು - ಇವು ಆ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಸಂದಾಯಿತ ಬಂಡವಾಳಕ್ಕಿಂತ ಕಡಿಮೆ ಇರದಿದ್ದ ಹೊರತು, ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**30. ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಹಣದ ಠೇವಣಿಗಳನ್ನು ಕೋರುವ ವಿವರಣ ಪತ್ರದ ಅಥವಾ ಜಾಹೀರಾತಿನ ನೀಡಿಕೆಯನ್ನು ನಿಯಂತ್ರಿಸುವುದು ಅಥವಾ ನಿಷೇಧಿಸುವುದು.**- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಸಾರ್ವಜನಿಕ ಹಿತಾಸಕ್ತಿಯಲ್ಲಿ-

(ಎ) ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಸಾರ್ವಜನಿಕರಿಂದ ಹಣದ ಠೇವಣಿಗಳನ್ನು ಕೋರುವ ಯಾವುದೇ ವಿವರಣಪತ್ರ ಅಥವಾ ಜಾಹೀರಾತಿನ ನೀಡಿಕೆಯನ್ನು ನಿಯಂತ್ರಿಸುವುದು ಅಥವಾ ನಿಷೇಧಿಸುವುದು; ಮತ್ತು

(ಬಿ) ಅಂಥ ಯಾವುದೇ ವಿವರಣ ಪತ್ರ ಅಥವಾ ಜಾಹೀರಾತನ್ನು ನಿಷೇಧಿಸಿರದಿದ್ದರೆ ಯಾವ ಷರತ್ತುಗಳಿಗೊಳಪಟ್ಟು ಅದನ್ನು ನೀಡಬಹುದೋ ಆ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು

- ಅವಶ್ಯವೆಂದು ಪರಿಗಣಿಸಿದರೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅದು ಹಾಗೆ ಮಾಡಬಹುದು.

**30ಎ. ಕಾರ್ಯನೀತಿಯನ್ನು ನಿರ್ಧರಿಸಲು ಮತ್ತು ನಿರ್ದೇಶನಗಳನ್ನು ನೀಡಲು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರ.**- (1) ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ದೇಶದ ಗೃಹ ನಿರ್ಮಾಣ ಹಣಕಾಸು ವ್ಯವಸ್ಥೆಯನ್ನು ದೇಶದ ಹಿತದೃಷ್ಟಿಗೆ ಸಾಧಕವಾಗುವಂತೆ ನಿಯಂತ್ರಿಸುವುದು ಅಥವಾ ಠೇವಣಿದಾರರ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ಅಥವಾ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ನಡೆಸಲಾಗುತ್ತಿರುವ ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವ್ಯವಹಾರವನ್ನು ಪ್ರತಿಬಂಧಿಸುವುದು ಅವಶ್ಯ ಅಥವಾ ವಿಹಿತವೆಂದು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಮನದಟ್ಟಾದರೆ, ಅದು 5ನೇ ಪ್ರಕರಣದ (5)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಕಾರ್ಯನೀತಿಯನ್ನು ನಿರ್ಧರಿಸಬಹುದು ಮತ್ತು ಎಲ್ಲ ಅಥವಾ ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ, ಆದಾಯ ಮನ್ನಣೆ ನೀಡುವುದಕ್ಕೆ, ಲೆಕ್ಕವನ್ನು ದಾಖಲೆ ಇಡುವುದಕ್ಕೆ ಸಂಬಂಧಿಸಿದ ಮಾನಕಗಳು, ವಸೂಲಾಗದ ಮತ್ತು ಸಂದೇಹಾಸ್ಪದ ಸಾಲಗಳಿಗಾಗಿ ಸೂಕ್ತ ಉಪಬಂಧ ಕಲ್ಪಿಸುವುದಕ್ಕೆ, ಆಸ್ತಿಗಳ ಹಾನಿ ಸಂಭವದ ಗುರುತ್ವಗಳ ಆಧಾರದ ಮೇಲೆ ಬಂಡವಾಳ ಸಾಕಷ್ಟಿರುವುದಕ್ಕೆ ಮತ್ತು ರದ್ದುಗೊಳಿಸಿದ ಸಂತುಲನ ಪತ್ರದ ಬಾಬುಗಳಿಗೆ ಸಂಬಂಧಿಸಿದಂತೆ ಸಾಲ ಪರಿವರ್ತನಾ ಅಂಶಗಳಿಗೆ ಸಂಬಂಧಪಟ್ಟಂತೆ ಹಾಗೂ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಅಥವಾ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಒಂದು ಗುಂಪು ಅಥವಾ ಸಂದರ್ಭಾನುಸಾರ ಸಾಮಾನ್ಯವಾಗಿ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳು ಮಾಡಿದ ನಿಧಿಗಳ ನಿಯೋಜನೆಗೆ ಸಂಬಂಧಪಟ್ಟಂತೆ ಸಹ ನಿರ್ದೇಶನಗಳನ್ನು ನೀಡಬಹುದು, ಮತ್ತು ಅಂಥ ಗೃಹನಿರ್ಮಾಣ ಹಣಕಾಸು ಸಂಸ್ಥೆಗಳು ಹಾಗೆ ನಿರ್ಧರಿಸಿದ ಕಾರ್ಯನೀತಿಯನ್ನು ಮತ್ತು ಹಾಗೆ ನೀಡಿದ ನಿರ್ದೇಶನಗಳನ್ನು ಅನುಸರಿಸಲು ಬದ್ಧವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನಿಹಿತವಾದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು,-

(ಎ) ಯಾವ ಉದ್ದೇಶಕ್ಕಾಗಿ ಮುಂಗಡಗಳನ್ನು ಅಥವಾ ಇತರ ನಿಧಿ ಆಧಾರಿತ ಅಥವಾ ನಿಧಿಯೇತರ ಆಧಾರಿತ ಹಣ ಸಾಲವನ್ನು ಕೊಡಬಹುದಾಗಿಲ್ಲವೋ ಆ ಉದ್ದೇಶದ; ಮತ್ತು

(ಬಿ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಸಂದಾಯಿತ ಬಂಡವಾಳ, ಮೀಸಲುಗಳು ಮತ್ತು ಠೇವಣಿಗಳನ್ನು ಮತ್ತು ಇತರ ಸೂಕ್ತ ಪರಿಗಣನೆಗಳನ್ನು ಗಮನದಲ್ಲಿಟ್ಟುಕೊಂಡು, ಆ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಯಾರೇ ವ್ಯಕ್ತಿಗೆ ಅಥವಾ ಒಂದು ಕಂಪನಿಗೆ ಅಥವಾ ಕಂಪನಿಗಳ ಒಂದು ಗುಂಪಿಗೆ ನೀಡಬಹುದಾದ ಮುಂಗಡಗಳ ಗರಿಷ್ಠ ಮೊಬಲಗಿನ ಅಥವಾ ಇತರ ಹಣಕಾಸು ಸಾಲದ ಅಥವಾ ಷೇರುಗಳಲ್ಲಿ ಹೂಡಿಕೆ ಅಥವಾ ಇತರ ಭದ್ರತೆಗಳ

- ಬಗ್ಗೆ ಸಾಮಾನ್ಯವಾಗಿ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ಅಥವಾ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಒಂದು ಸಮೂಹಕ್ಕೆ ಅಥವಾ ನಿರ್ದಿಷ್ಟವಾಗಿ ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ ನಿರ್ದೇಶನಗಳನ್ನು ನೀಡಬಹುದು.

**31. ಠೇವಣಿಗಳಿಗೆ ಸಂಬಂಧಿಸಿದಂತೆ ಗೃಹನಿರ್ಮಾಣ ಹಣಕಾಸು ಸಂಸ್ಥೆಗಳಿಂದ ಮಾಹಿತಿಯನ್ನು ಸಂಗ್ರಹಿಸಲು ಮತ್ತು ನಿರ್ದೇಶನಗಳನ್ನು ನೀಡಲು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಯಾವುದೇ ಸಮಯದಲ್ಲಿ ಠೇವಣಿಗಳನ್ನು ಸ್ವೀಕರಿಸುವ ಪ್ರತಿಯೊಂದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ

ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಮಧ್ಯಂತರಗಳಲ್ಲಿ ಮತ್ತು ಅಂಥ ಸಮಯದೊಳಗೆ ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಸ್ವೀಕರಿಸಿದ ಠೇವಣಿಗಳಿಗೆ ಸಂಬಂಧಪಟ್ಟಂಥ ವಿವರಣೆಗಳು, ಮಾಹಿತಿ ಅಥವಾ ವಿವರಗಳನ್ನು ಒದಗಿಸತಕ್ಕದೆಂದು ನಿರ್ದೇಶಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಲ್ಲಿ ನಿಹಿತವಾಗಿರುವ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, (1)ನೇ ಉಪ-ಪ್ರಕರಣದ ಮೇರೆಗೆ ಒದಗಿಸಬೇಕಾದ ವಿವರಣೆಗಳು, ಮಾಹಿತಿ ಅಥವಾ ವಿವರಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಎಂದರೆ, ಠೇವಣಿಗಳ ಮೊಬಲಗು, ಅಂಥ ಠೇವಣಿಗಳನ್ನು ಯಾವ ಉದ್ದೇಶಕ್ಕಾಗಿ ಮತ್ತು ಎಷ್ಟು ಅವಧಿಯವರೆಗೆ ಯಾವ ಬಡ್ಡಿ ದರಗಳು ಮತ್ತು ಇತರ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಸ್ವೀಕರಿಸಲಾಗುವುದೋ ಆ ವಿಷಯಗಳಿಗೆ ಸಂಬಂಧಪಟ್ಟಿರಬಹುದು.

(3) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಠೇವಣಿಗಳನ್ನು ಸ್ವೀಕರಿಸುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ಸಾಮಾನ್ಯವಾಗಿ ಅಥವಾ ಠೇವಣಿಗಳನ್ನು ಸ್ವೀಕರಿಸುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಯಾವುದೇ ಒಂದು ಸಮೂಹಕ್ಕೆ ಮತ್ತು ಮುಖ್ಯವಾಗಿ ಠೇವಣಿಗಳನ್ನು ಸ್ವೀಕರಿಸುವುದಕ್ಕೆ ಸಂಬಂಧಪಟ್ಟ ಹಾಗೆ ಠೇವಣಿಗಳನ್ನು ಸ್ವೀಕರಿಸುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಸಾಲ ಪರಿಮಾಣ ನಿಗದಿ, ಅಂಥ ಠೇವಣಿಗಳ ಮೇಲೆ ಸಂದಾಯ ಮಾಡಬಹುದಾದ ಬಡ್ಡಿಯ ದರಗಳು ಮತ್ತು ಯಾವ ಅವಧಿಗಳಿಗೆ ಠೇವಣಿಗಳನ್ನು ಸ್ವೀಕರಿಸಬಹುದೋ ಆ ಅವಧಿಗಳೂ ಸೇರಿದಂತೆ ಯಾವುದೇ ವಿಷಯಕ್ಕೆ ಸಂಬಂಧಿಸಿ ನಿರ್ದೇಶನಗಳನ್ನು ನೀಡುವುದು ಅವಶ್ಯವೆಂದು ಪರಿಗಣಿಸಿದರೆ, ಅದು ಹಾಗೆ ಮಾಡಬಹುದು.

(4) ಠೇವಣಿಗಳನ್ನು ಸ್ವೀಕರಿಸುವ ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, (3)ನೇ ಉಪ-ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪಿದರೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಆ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಠೇವಣಿಗಳನ್ನು ಸ್ವೀಕರಿಸುವುದನ್ನು ನಿಷೇಧಿಸಬಹುದು.

(5) ಠೇವಣಿಗಳನ್ನು ಸ್ವೀಕರಿಸುವ ಪ್ರತಿಯೊಂದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವೆಚ್ಚದಲ್ಲಿ ಅದರ ವಾರ್ಷಿಕ ಆಯವ್ಯಯ ಪಟ್ಟಿ ಮತ್ತು ಲಾಭ ಮತ್ತು ನಷ್ಟಗಳ ಲೆಕ್ಕ ಅಥವಾ ಇತರ ವಾರ್ಷಿಕ ಲೆಕ್ಕಗಳ ಒಂದು ಪ್ರತಿಯನ್ನು, ಆ ಲೆಕ್ಕಪ್ರತಿಗಳು ಯಾವ ವರ್ಷಕ್ಕೆ ಸಂಬಂಧಪಟ್ಟಿರುತ್ತವೆಯೋ ಆ ವರ್ಷದ ಕೊನೆಯ ದಿನದಂದು ಇದ್ದಂತೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ಮೊತ್ತಕ್ಕಿಂತ ಹೆಚ್ಚಿನ ಠೇವಣಿಗಳನ್ನು ಯಾವ ವ್ಯಕ್ತಿಯಿಂದ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಹೊಂದಿರುವುದೋ ಆ ಪ್ರತಿಯೊಬ್ಬ ವ್ಯಕ್ತಿಗೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಕಳುಹಿಸುವಂತೆ ಅಗತ್ಯಪಡಿಸಿದರೆ ಹಾಗೆ ಮಾಡತಕ್ಕುದು.

**32. ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಅಗತ್ಯಪಡಿಸುವ ವಿವರಗಳು, ಇತ್ಯಾದಿಗಳನ್ನು ಒದಗಿಸುವುದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಕರ್ತವ್ಯವಾಗಿರುವುದು.**- ಪ್ರತಿಯೊಂದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ಕೋರಲಾದ ವಿವರಣೆಗಳು, ಮಾಹಿತಿ ಅಥವಾ ವಿವರಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಒದಗಿಸತಕ್ಕುದು ಮತ್ತು ಈ ಅಧ್ಯಾಯದ ಉಪಬಂಧಗಳ ಮೇರೆಗೆ ತನಗೆ ನೀಡಲಾದ ಯಾವುದೇ ನಿರ್ದೇಶನವನ್ನು ಪಾಲಿಸತಕ್ಕುದು.

**33. ಲೆಕ್ಕ ಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು.**- (1) ಪ್ರತಿಯೊಂದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಲೆಕ್ಕ ಪರಿಶೋಧಕನು, ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ತಾನು ಸ್ವೀಕರಿಸಿದ ಠೇವಣಿಗಳಿಗೆ ಸಂಬಂಧಿಸಿದಂತೆ ಈ ಅಧ್ಯಾಯದ ಮೇರೆಗೆ ಒದಗಿಸತಕ್ಕದೆಂದು ಅಗತ್ಯಪಡಿಸಲಾದಂಥ ವಿವರಣೆಗಳು, ಮಾಹಿತಿ ಅಥವಾ ವಿವರಗಳನ್ನು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್‌ಗೆ ಒದಗಿಸಿದೆಯೇ ಅಥವಾ ಇಲ್ಲವೇ ಎಂಬುದನ್ನು ವಿಚಾರಿಸತಕ್ಕುದು, ಮತ್ತು ಲೆಕ್ಕಪರಿಶೋಧಕನು ಅಂಥ ವಿಚಾರಣೆಯ ತರುವಾಯ ಆ ಗೃಹನಿರ್ಮಾಣ ಹಣಕಾಸು ಸಂಸ್ಥೆಯು

ಅಂಥ ವಿವರಣೆಗಳು, ಮಾಹಿತಿ ಅಥವಾ ವಿವರಗಳನ್ನು ಒದಗಿಸಿದೆ ಎಂದು ಮನದಟ್ಟು ಮಾಡಿಕೊಂಡಿರುವಲ್ಲಿ ಹೊರತು, ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಹೊಂದಿರುವಂಥ ಠೇವಣಿಗಳ ಒಟ್ಟು ಮೊಬಲಗನ್ನು ತಿಳಿಸುವ ವರದಿಯನ್ನು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸಲ್ಲಿಸತಕ್ಕುದು.

(1ಎ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಠೇವಣಿದಾರರ ಹಿತದೃಷ್ಟಿಯಿಂದ ಅಥವಾ ಲೆಕ್ಕ ಪುಸ್ತಕಗಳ ಸೂಕ್ತ ನಿರ್ಧರಣೆಯ ಉದ್ದೇಶಕ್ಕಾಗಿ, ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ ಅಥವಾ ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳ ಯಾವುದೇ ಸಮೂಹಕ್ಕೆ ಅಥವಾ ಸಾಮಾನ್ಯವಾಗಿ ಗೃಹ ನಿರ್ಮಾಣ ಹಣಕಾಸು ಕಂಪನಿಗೆ ಅಥವಾ ಅಂಥ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಲೆಕ್ಕ ಪರಿಶೋಧಕರಿಗೆ ಅಥವಾ ಸಂತುಲನ ಪತ್ರ, ಲಾಭ ಮತ್ತು ನಷ್ಟ ಲೆಕ್ಕ, ಲೆಕ್ಕ ಪುಸ್ತಕಗಳಲ್ಲಿರುವ ಹೊಣೆಗಾರಿಕೆಗಳನ್ನು ಬಹಿರಂಗಪಡಿಸುವುದು ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡುವುದು ಅವಶ್ಯವೆಂದು ಮನದಟ್ಟಾದ ತರುವಾಯ, ಅದು ನಿರ್ದೇಶನಗಳನ್ನು ನೀಡಬಹುದು.

(2) ಕಂಪನಿಯಾಗಿರುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಸಂದರ್ಭದಲ್ಲಿ, ಲೆಕ್ಕಪರಿಶೋಧಕನು, (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ವರದಿಯನ್ನು ಸಲ್ಲಿಸಿರುವಲ್ಲಿ ಅಥವಾ ಸಲ್ಲಿಸಲು ಉದ್ದೇಶಿಸಿರುವಲ್ಲಿ, ಅವನು ಕಂಪನಿಗಳ ಅಧಿನಿಯಮ, 1956ರ (1956ರ 1) 227ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ತನ್ನ ವರದಿಯಲ್ಲಿ, ತಾನು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸಲ್ಲಿಸಿರುವ ಅಥವಾ ಸಲ್ಲಿಸಲು ಉದ್ದೇಶಿಸಿರುವ ವರದಿಯ ಒಳಾಂಶಗಳನ್ನು ಸೇರಿಸತಕ್ಕುದು.

(3) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಹಿತದೃಷ್ಟಿಯಿಂದ ಅಥವಾ ಅಂಥ ಸಂಸ್ಥೆಯ ಠೇವಣಿದಾರರ ಹಿತದೃಷ್ಟಿಯಿಂದ, ಯಾವುದೇ ಸಮಯದಲ್ಲಿ, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ವ್ಯವಹಾರ ಅಥವಾ ವ್ಯವಹಾರಗಳ ವರ್ಗಕ್ಕೆ ಸಂಬಂಧಪಟ್ಟಂತೆ ಅಥವಾ ಅಂಥ ಅವಧಿ ಅಥವಾ ಅವಧಿಗಳಿಗಾಗಿ ಆ ಹಣಕಾಸು ಸಂಸ್ಥೆಯ ಲೆಕ್ಕಪತ್ರಗಳ ವಿಶೇಷ ಲೆಕ್ಕಪರಿಶೋಧನೆ ನಡೆಸತಕ್ಕದ್ದೆಂದು ನಿರ್ದೇಶಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಅದು ಹಾಗೆ ಮಾಡಬಹುದು, ಮತ್ತು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಅಂಥ ವಿಶೇಷ ಲೆಕ್ಕಪರಿಶೋಧನೆ ನಡೆಸಲು ಒಬ್ಬ ಲೆಕ್ಕಪರಿಶೋಧಕನನ್ನು ಅಥವಾ ಪರಿಶೋಧಕರನ್ನು ನೇಮಿಸಬಹುದು ಮತ್ತು ವರದಿಯನ್ನು ತನಗೆ ಸಲ್ಲಿಸುವಂತೆ ಲೆಕ್ಕಪರಿಶೋಧಕನಿಗೆ ಅಥವಾ ಪರಿಶೋಧಕರಿಗೆ ನಿರ್ದೇಶಿಸಬಹುದು.

(4) ಲೆಕ್ಕ ಪರಿಶೋಧನೆ ಆಗಬೇಕಾದ ಕೆಲಸದ ಸ್ವರೂಪ ಮತ್ತು ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ನಿಗದಿಪಡಿಸಬಹುದಾದಂತೆ ಲೆಕ್ಕ ಪರಿಶೋಧಕರ ಸಂಭಾವನೆಯನ್ನು ಮತ್ತು ಲೆಕ್ಕಪರಿಶೋಧನೆಯ ವೆಚ್ಚಗಳನ್ನು ಮತ್ತು ಪ್ರಾಸಂಗಿಕ ವೆಚ್ಚಗಳನ್ನು ಹಾಗೆ ಲೆಕ್ಕ ಪರಿಶೋಧನೆಗೆ ಒಳಗಾದ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಭರಿಸತಕ್ಕದ್ದು.

**33ಎ. ಠೇವಣಿ ಸ್ವೀಕಾರವನ್ನು ಮತ್ತು ಆಸ್ತಿಗಳ ಪರಭಾರೆಯನ್ನು ನಿಷೇಧಿಸಲು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರ.–** (1) ಯಾವುದೇ ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಯಾವುದೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ ಅಥವಾ ಈ ಅಧ್ಯಾಯದ ಯಾವುದೇ ಉಪಬಂಧಗಳ ಮೇರೆಗೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ನೀಡಿದ ಯಾವುದೇ ನಿರ್ದೇಶನ ಅಥವಾ ಆದೇಶವನ್ನು ಪಾಲಿಸಲು ತಪ್ಪಿದರೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಆ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಯಾವುದೇ ಠೇವಣಿ ಸ್ವೀಕರಿಸುವುದನ್ನು ನಿಷೇಧಿಸಬಹುದು.

(2) ಯಾವುದೇ ಒಪ್ಪಂದದಲ್ಲಿ ಅಥವಾ ಲಿಖಿತದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಠೇವಣಿದಾರರ ಹಿತದೃಷ್ಟಿಯಿಂದ, ಯಾವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವಿರುದ್ಧ ಠೇವಣಿ ಸ್ವೀಕರಿಸದಂತೆ ನಿಷೇಧಿಸುವ ಆದೇಶವನ್ನು

ಹೊರಡಿಸಲಾಗಿದೆಯೋ, ಆ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು, ಆ ಆದೇಶದ ದಿನಾಂಕದಿಂದ ಆರು ತಿಂಗಳನ್ನು ಮೀರದಂಥ ಅವಧಿಯವರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಿಂದ ಲಿಖಿತದಲ್ಲಿ ಮುಂಚಿತವಾಗಿ ಅನುಮತಿ ಪಡೆಯದೆ ತನ್ನ ಸ್ವತ್ತನ್ನು ಮತ್ತು ಆಸ್ತಿಗಳನ್ನು ಮಾರಾಟ ಮಾಡದಂತೆ, ವರ್ಗಾವಣೆ ಮಾಡದಂತೆ, ಋಣಭಾರ ಅಥವಾ ಅಡಮಾನ ಸೃಜಿಸದಂತೆ ಅಥವಾ ಯಾವುದೇ ರೀತಿಯಲ್ಲಿ ಆ ಬಗ್ಗೆ ವ್ಯವಹರಿಸದಂತೆ ಅದಕ್ಕೆ ನಿರ್ದೇಶಿಸುವುದು ಅವಶ್ಯವೆಂದು ಮನದಟ್ಟಾದ ತರುವಾಯ, ಅದು ಹಾಗೆ ಮಾಡಬಹುದು.

**33ಬಿ. ಪರಿಸಮಾಪನ ಅರ್ಜಿಯನ್ನು ದಾಖಲ್ಮಾಡಲು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರ.**- (1) ಕಂಪನಿಯಾಗಿರುವ ಒಂದು ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು,-

(ಎ) ತನ್ನ ಋಣಗಳನ್ನು ಸಂದಾಯ ಮಾಡಲು ಅಸಮರ್ಥವಾಗಿದೆಯೆಂದು; ಅಥವಾ

(ಬಿ) 29ಎ ಪ್ರಕರಣದ ಉಪಬಂಧಗಳ ಕಾರಣದಿಂದಾಗಿ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವ್ಯವಹಾರವನ್ನು ನಿರ್ವಹಿಸಲು ಅನರ್ಹವಾಗಿದೆಯೆಂದು; ಅಥವಾ

(ಸಿ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಆದೇಶದ ಮೂಲಕ ಠೇವಣಿ ಸ್ವೀಕರಿಸುವುದನ್ನು ನಿಷೇಧಿಸಿದ್ದು, ಅಂಥ ಆದೇಶವು ಮೂರು ತಿಂಗಳಿಗಿಂತ ಕಡಿಮೆ ಇಲ್ಲದ ಅವಧಿಯವರೆಗೆ ಜಾರಿಯಲ್ಲಿದೆಯೆಂದು; ಅಥವಾ

(ಡಿ) ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಮುಂದುವರೆಯುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಅಥವಾ ಕಂಪನಿಯ ಠೇವಣಿದಾರರ ಹಿತಾಸಕ್ತಿಗೆ ಬಾಧಕ ಉಂಟಾಗುತ್ತದೆಂದು

- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಮನದಟ್ಟಾದ ತರುವಾಯ, ಅದು, ಕಂಪನಿಗಳ ಅಧಿನಿಯಮ, 1956 (1956ರ 1)ರ ಮೇರೆಗೆ ಅಂಥ ಗೃಹನಿರ್ಮಾಣ ಹಣಕಾಸು ಸಂಸ್ಥೆಯನ್ನು ಪರಿಸಮಾಪನಗೊಳಿಸಲು ಅರ್ಜಿಯನ್ನು ದಾಖಲ್ಮಾಡಬಹುದು.

(2) ಕಂಪನಿಯಾಗಿರುವ ಗೃಹನಿರ್ಮಾಣ ಹಣಕಾಸು ಸಂಸ್ಥೆಯು ತನ್ನ ಕಚೇರಿಗಳು ಅಥವಾ ಶಾಖೆಗಳ ಪೈಕಿ ಯಾವುದೇ ಕಚೇರಿ ಅಥವಾ ಶಾಖೆಯು ಸಲ್ಲಿಸಿದ ಯಾವುದೇ ಕಾನೂನುಬದ್ಧ ತಗಾದೆಯನ್ನು ಐದು ಕೆಲಸದ ದಿನಗಳೊಳಗಾಗಿ ಈಡೇರಿಸಲು ನಿರಾಕರಿಸಿದರೆ ಅಥವಾ ವಿಫಲವಾದರೆ, ಅದು ತನ್ನ ಋಣಗಳನ್ನು ಸಂದಾಯ ಮಾಡಲು ಅಸಮರ್ಥವಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅಂಥ ಕಂಪನಿಯು ತನ್ನ ಋಣಗಳನ್ನು ಸಂದಾಯ ಮಾಡಲು ಅಸಮರ್ಥವಾಗಿದೆಯೆಂದು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಪ್ರಮಾಣೀಕರಿಸುತ್ತದೆ.

(3) (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಸಲ್ಲಿಸಿದ ಪ್ರತಿಯೊಂದು ಅರ್ಜಿಯ ಒಂದು ಪ್ರತಿಯನ್ನು ಕಂಪನಿಗಳ ರಿಜಿಸ್ಟ್ರಾರ್‌ಗೆ ಕಳುಹಿಸತಕ್ಕದ್ದು.

(4) ಒಂದು ಕಂಪನಿಯನ್ನು ಪರಿಸಮಾಪನಗೊಳಿಸುವುದಕ್ಕೆ ಸಂಬಂಧಪಟ್ಟ 1956ರ ಕಂಪನಿಗಳ ಅಧಿನಿಯಮದ (1956ರ 1) ಎಲ್ಲ ಉಪಬಂಧಗಳು ಈ ಉಪಬಂಧದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಸಲ್ಲಿಸಿದ ಅರ್ಜಿಯ ಮೇಲೆ ಪ್ರಾರಂಭಿಸಿದ ಪರಿಸಮಾಪನ ವ್ಯವಹರಣೆಗೆ ಅನ್ವಯವಾಗತಕ್ಕದ್ದು.

**34. ಪರಿಶೀಲನೆ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಯಾವುದೇ ಸಮಯದಲ್ಲಿ, ಠೇವಣಿಗಳನ್ನು ಸ್ವೀಕರಿಸುವ ಯಾವುದೇ ಗೃಹನಿರ್ಮಾಣ ಹಣಕಾಸು ಸಂಸ್ಥೆಯ ಪರಿಶೀಲನೆಯನ್ನು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಒದಗಿಸಲಾದ ಯಾವುದೇ ವಿವರಣೆ, ಮಾಹಿತಿ ಅಥವಾ ವಿವರಗಳು ಸರಿಯಾಗಿವೆಯೇ ಅಥವಾ ಪೂರ್ಣವಾಗಿವೆಯೇ ಎಂಬುದನ್ನು ಸರಿನೋಡುವ ಉದ್ದೇಶಕ್ಕಾಗಿ ಅಥವಾ ಹಾಗೆ ಒದಗಿಸಲು ಕೋರಿದ್ದ, ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಒದಗಿಸಲು ತಪ್ಪಿರುವಂಥ ಯಾವುದೇ ಮಾಹಿತಿ ಅಥವಾ ವಿವರಗಳನ್ನು ಪಡೆದುಕೊಳ್ಳುವ ಉದ್ದೇಶಕ್ಕಾಗಿ ಠೇವಣಿಗಳನ್ನು (ಇಲ್ಲಿ ಇನ್ನು ಮುಂದೆ ಪರಿಶೀಲನಾ ಪ್ರಾಧಿಕಾರಿ ಎಂದು ಉಲ್ಲೇಖಿತವಾಗುವ) ತನ್ನ ಅಧಿಕಾರಿಗಳು ಅಥವಾ ನೌಕರರ ಅಥವಾ ಇತರ ವ್ಯಕ್ತಿಗಳ ಪೈಕಿ ಒಬ್ಬ ಅಥವಾ ಹೆಚ್ಚು ಜನರಿಂದ ಪರಿಶೀಲನೆ ಮಾಡಿಸಬಹುದು.

(2) ಠೇವಣಿಗಳನ್ನು ಸ್ವೀಕರಿಸುವ ಪ್ರತಿಯೊಂದು ಗೃಹನಿರ್ಮಾಣ ಹಣಕಾಸು ಸಂಸ್ಥೆಯ ಪ್ರತಿಯೊಬ್ಬ ನಿರ್ದೇಶಕನು ಅಥವಾ ಯಾವುದೇ ಸಮಿತಿಯ ಅಥವಾ ಇತರ ನಿಕಾಯದ ಸದಸ್ಯನು ಅಥವಾ ಅದರ ಸಕಲ ವ್ಯವಹಾರದ ಅಥವಾ ಅದರ ಯಾವುದೇ ಭಾಗದ ವ್ಯವಸ್ಥಾಪನೆಯು ತತ್ಕಾಲದಲ್ಲಿ ಯಾವ ವ್ಯಕ್ತಿಯಲ್ಲಿ ನಿಹಿತವಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು ಅಥವಾ ಅದರ ಇತರ ಅಧಿಕಾರಿಯು ಅಥವಾ ನೌಕರನು ತನ್ನ ಅಭಿರಕ್ಷೆ ಅಥವಾ ಅಧಿಕಾರದಲ್ಲಿರುವಂಥ ಎಲ್ಲ ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ಪರಿಶೀಲನಾ ಪ್ರಾಧಿಕಾರಿಗೆ ಹಾಜರುಪಡಿಸುವುದು ಮತ್ತು ಆ ಪ್ರಾಧಿಕಾರಿಯು ಅವನನ್ನು ಅಗತ್ಯಪಡಿಸಬಹುದಾದಂತೆ ಆ ಸಂಸ್ಥೆಯ ವ್ಯವಹಾರಕ್ಕೆ ಸಂಬಂಧಿಸಿದ ಯಾವುದೇ ವಿವರಣೆ ಮತ್ತು ಮಾಹಿತಿಯನ್ನು ಆ ಪ್ರಾಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಆ ಪ್ರಾಧಿಕಾರಿಗೆ ಒದಗಿಸುವುದು ಅವರ ಕರ್ತವ್ಯವಾಗಿರತಕ್ಕುದು.

(3) ಪರಿಶೀಲನಾ ಪ್ರಾಧಿಕಾರಿಯು, ಠೇವಣಿಗಳನ್ನು ಸ್ವೀಕರಿಸುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಯಾವನೇ ನಿರ್ದೇಶಕ ಅಥವಾ ಯಾವುದೇ ಸಮಿತಿ ಅಥವಾ ನಿಕಾಯದ ಸದಸ್ಯನನ್ನು ಅಥವಾ ತತ್ಕಾಲದಲ್ಲಿ ಅದರ ವ್ಯವಹಾರಗಳ ವ್ಯವಸ್ಥಾಪನೆಯು ಯಾವ ವ್ಯಕ್ತಿಯಲ್ಲಿ ನಿಹಿತವಾಗಿದೆಯೋ ಆ ಯಾವನೇ ಇತರ ವ್ಯಕ್ತಿಯನ್ನು ಅಥವಾ ಅದರ ವ್ಯವಹಾರಕ್ಕೆ ಸಂಬಂಧಿಸಿದ ಯಾವನೇ ಅಧಿಕಾರಿ ಅಥವಾ ನೌಕರನನ್ನು ಪ್ರಮಾಣ ಮಾಡಿಸಿ ಪರೀಕ್ಷಿಸಬಹುದು.

**35. ಅನಧಿಕೃತ ವ್ಯಕ್ತಿಗಳು ಠೇವಣಿಗಳನ್ನು ಕೋರದಿರುವುದು.**- ಯಾವನೇ ವ್ಯಕ್ತಿಯು, ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಪರವಾಗಿ ಯಾವುದೇ ವಿವರಣಪತ್ರ ಅಥವಾ ಜಾಹೀರಾತನ್ನು ಪ್ರಕಟಿಸುವ ಮೂಲಕ ಅಥವಾ ಪ್ರಕಟಿಸುವಂತೆ ಮಾಡುವ ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ಸಾರ್ವಜನಿಕರಿಂದ ಹಣದ ಠೇವಣಿಗಳನ್ನು -

(ಎ) ಹಾಗೆ ಮಾಡಲು ಸದರಿ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಲಿಖಿತದಲ್ಲಿ ಅವನನ್ನು ಅಧಿಕೃತಗೊಳಿಸಿದ್ದ ಹೊರತು ಮತ್ತು ಹಾಗೆ ಅವನನ್ನು ಅಧಿಕೃತಗೊಳಿಸಿದ ಸಂಸ್ಥೆಯ ಹೆಸರನ್ನು ನಿರ್ದಿಷ್ಟಪಡಿಸಿದ ಹೊರತು; ಮತ್ತು

(ಬಿ) ಆ ವಿವರಣ ಪತ್ರ ಅಥವಾ ಜಾಹೀರಾತು, 30ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಮಾಡಿದ ಯಾವುದೇ ಆದೇಶಕ್ಕೆ ಮತ್ತು ಅಂಥ ವಿವರಣ ಪತ್ರ ಅಥವಾ ಜಾಹೀರಾತಿನ ಪ್ರಕಟಣೆಗೆ ಅನ್ವಯವಾಗುವ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಯಾವುದೇ ಇತರ ಉಪಬಂಧಕ್ಕೆ ಅನುಗುಣವಾಗಿ ಇದ್ದ ಹೊರತು

- ಕೋರತಕ್ಕುದಲ್ಲ.

**35ಎ. ಮಾಹಿತಿಯನ್ನು ಬಹಿರಂಗಪಡಿಸುವುದು.**- (1) ಗೃಹನಿರ್ಮಾಣ ಹಣಕಾಸು ಸಂಸ್ಥೆಗೆ ಸಂಬಂಧಪಟ್ಟಂತೆ,-

(ಎ) ಈ ಅಧ್ಯಾಯದ ಉಪಬಂಧಗಳ ಮೇರೆಗೆ ಅಂಥ ಸಂಸ್ಥೆಯು ಒಪ್ಪಿಸಿದ ಯಾವುದೇ ವಿವರಪತ್ರದಲ್ಲಿ ಅಥವಾ ವಿವರಪಟ್ಟಿಕೆಯಲ್ಲಿ ಒಳಗೊಂಡಿರುವ; ಅಥವಾ

(ಬಿ) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು, ಲೆಕ್ಕಪರಿಶೋಧನೆ ಅಥವಾ ಪರಿಶೀಲನೆ ಅಥವಾ ಇನ್ನಾವುದರ ಮುಖಾಂತರವಾದರೂ ಪಡೆದಿರುವ

- ಯಾವುದೇ ಮಾಹಿತಿಯನ್ನು ರಹಸ್ಯವಾದುದೆಂದು ಪರಿಗಣಿಸತಕ್ಕದ್ದು ಹಾಗೂ ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಬಹಿರಂಗಪಡಿಸತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿ ಇರುವುದು ಯಾವುದೂ,-

(ಎ) (1)ನೇ ಉಪ-ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಒದಗಿಸಿದ ಯಾವುದೇ ಮಾಹಿತಿಯನ್ನು, ಯಾವುದೇ ಗೃಹನಿರ್ಮಾಣ ಹಣಕಾಸು ಸಂಸ್ಥೆಯು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನಿಂದ ಮುಂಚಿತವಾಗಿಯೇ ಅನುಮತಿ ಪಡೆದು ಬಹಿರಂಗಪಡಿಸುವುದಕ್ಕೆ;

(ಬಿ) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಯಾವುದೇ ಗೃಹನಿರ್ಮಾಣ ಹಣಕಾಸು ಸಂಸ್ಥೆಯ ಅಥವಾ ಅದರ ಯಾರೇ ಸಾಲಗಾರರ ಹೆಸರನ್ನು ಬಹಿರಂಗಪಡಿಸದೆ, ಯುಕ್ತವೆಂದು ತಾನು

ಭಾವಿಸಬಹುದಾದಂಥ ಕ್ರೋಡೀಕೃತ ನಮೂನೆಯಲ್ಲಿ (1)ನೇ ಉಪ-ಪ್ರಕರಣದ ಮೇರೆಗೆ ಅದು ಸಂಗ್ರಹಿಸಿದ ಯಾವುದೇ ಮಾಹಿತಿಯನ್ನು, ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಿಸುವುದು ಅಗತ್ಯವೆಂದು ಮನಗಂಡರೆ, ಅದನ್ನು ಪ್ರಕಟಿಸುವುದಕ್ಕೆ;

(ಸಿ) ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಅಥವಾ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು, ಯಾವುದೇ ಇತರ ಗೃಹನಿರ್ಮಾಣ ಹಣಕಾಸು ಸಂಸ್ಥೆಗೆ ಅಥವಾ ಅಂಥ ಸಂಸ್ಥೆಗಳ ನಡುವೆ ಇರುವ ಪದ್ಧತಿ ಮತ್ತು ರೂಢಿ, ಆಚರಣೆಯನುಸಾರ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಅನುಮತಿಸಿದಂತೆ ಅಥವಾ ಅಗತ್ಯಪಡಿಸಿದಂತೆ ಯಾವುದೇ ಅಂಥ ಮಾಹಿತಿಯನ್ನು ಬಹಿರಂಗಪಡಿಸುವುದಕ್ಕೆ

– ಅನ್ವಯವಾಗತಕ್ಕದ್ದಲ್ಲ:

ಪರಂತು, ಈ ಖಂಡದ ಮೇರೆಗೆ ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಸ್ವೀಕರಿಸಿದ ಯಾವುದೇ ಅಂಥ ಮಾಹಿತಿಯನ್ನು ಸಂಸ್ಥೆಗಳ ನಡುವೆ ಇರುವ ಪದ್ಧತಿ ಮತ್ತು ರೂಢಿ, ಆಚರಣೆಯನ್ನು ಅನುಸರಿಸಿದ ಹೊರತು ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಅನುಮತಿಸಿದಂತೆ ಅಥವಾ ಅಗತ್ಯಪಡಿಸಿದಂತೆ ಹೊರತು ಪ್ರಕಟಿಸತಕ್ಕದ್ದಲ್ಲ.

(3) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಠೇವಣಿದಾರರ ಅಥವಾ ಗೃಹನಿರ್ಮಾಣ ಹಣಕಾಸು ಸಂಸ್ಥೆಯ ಹಿತದೃಷ್ಟಿಯಿಂದ, ಅಥವಾ ಠೇವಣಿದಾರರ ಹಿತಾಸಕ್ತಿಗೆ ಹಾನಿಕರವಾಗುವ ರೀತಿಯಲ್ಲಿ ನಡೆಸುತ್ತಿರುವ ಯಾವುದೇ ಗೃಹನಿರ್ಮಾಣ ಹಣಕಾಸು ಸಂಸ್ಥೆಯ ವ್ಯವಹಾರಗಳನ್ನು ಪ್ರತಿಬಂಧಿಸುವುದಕ್ಕಾಗಿ ಯಾವುದೇ ಗೃಹನಿರ್ಮಾಣ ಹಣಕಾಸು ಸಂಸ್ಥೆಯು ನಡೆಸುತ್ತಿರುವ ವ್ಯವಹಾರಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಯಾವುದೇ ಕಾನೂನಿನ ಮೇರೆಗೆ ರಚಿತವಾದ ಯಾವುದೇ ಪ್ರಾಧಿಕಾರಕ್ಕೆ ಒದಗಿಸುವುದು ಅಥವಾ ತಿಳಿಸುವುದು ವಿಹಿತವೆಂದು ಮನಗಂಡರೆ,ತಾನೇ ಸ್ವತಃ ಅಥವಾ ಕೋರಿದಾಗ ಆ ಯಾವುದೇ ಮಾಹಿತಿಯನ್ನು ಆ ಪ್ರಾಧಿಕಾರಕ್ಕೆ ಒದಗಿಸಬಹುದು ಅಥವಾ ತಿಳಿಸಬಹುದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ನ್ಯಾಯಾಲಯವು ಅಥವಾ ನ್ಯಾಯಾಧಿಕರಣವು ಅಥವಾ ಇತರ ಪ್ರಾಧಿಕಾರವು, ಈ ಅಧ್ಯಾಯದ ಯಾವುದೇ ಉಪಬಂಧದ ಮೇರೆಗೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಪಡೆದುಕೊಂಡ ಯಾವುದೇ ವಿವರಪತ್ರವನ್ನು ಅಥವಾ ಇನ್ನಿತರ ವಿಷಯ ಸಾಮಗ್ರಿಯನ್ನು ಹಾಜರುಪಡಿಸುವಂತೆ ಅಥವಾ ಪರಿಶೀಲನೆಗೆ ಕೊಡುವಂತೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕನ್ನು ಒತ್ತಾಯಿಸತಕ್ಕದ್ದಲ್ಲ.

**35ಬಿ. ಯಾವುದೇ ಗೃಹನಿರ್ಮಾಣ ಹಣಕಾಸು ಸಂಸ್ಥೆಗೆ ವಿನಾಯಿತಿ ಕೊಡುವುದಕ್ಕೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರ.**– ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿಗೆ, ಸಾಮಾನ್ಯವಾಗಿ ಅಥವಾ ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ, ಯುಕ್ತವೆಂದು ತಾನು ಯೋಚಿಸಿ, ವಿಧಿಸಬಹುದಾದಂಥ ಷರತ್ತುಗಳಿಗೆ, ಪರಿಮಿತಿಗಳಿಗೆ ಅಥವಾ ನಿರ್ಬಂಧಗಳಿಗೆ ಒಳಪಟ್ಟು, ಈ ಅಧ್ಯಾಯದ ಉಪಬಂಧಗಳಲ್ಲಿ ಯಾವುದೇ ಅಥವಾ ಎಲ್ಲಾ ಉಪಬಂಧಗಳು, ಗೃಹನಿರ್ಮಾಣ ಹಣಕಾಸು ಸಂಸ್ಥೆಗೆ ಅಥವಾ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಒಂದು ಗುಂಪಿಗೆ ಅನ್ವಯವಾಗತಕ್ಕದ್ದಲ್ಲವೆಂದು ಘೋಷಿಸುವುದು ಅಗತ್ಯವೆಂದು ಮನವರಿಕೆಯಾದ ಮೇಲೆ, ಅದು ಅಧಿಸೂಚನೆಯ ಮೂಲಕ ಹಾಗೆ ಮಾಡಬಹುದು.

**36. Vನೇ ಅಧ್ಯಾಯವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರುವುದು.**– ಈ ಅಧ್ಯಾಯದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಅಂಥ ಯಾವುದೇ ಕಾನೂನಿನ ಬಲದಿಂದಾಗಿ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಅದಕ್ಕೆ ಅಸಂಗತವಾದುದು ಏನೇ ಇದ್ದರೂ, ಪರಿಣಾಮಕಾರಿಯಾಗತಕ್ಕುದು.

**36ಎ. ಠೇವಣಿಯನ್ನು ಮರುಸಂದಾಯ ಮಾಡುವಂತೆ ಆದೇಶಿಸುವುದಕ್ಕೆ ಅಧಿಕಾರ.**– (1) ಕಂಪನಿಯಾಗಿರುವ ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಅಂಗೀಕರಿಸಿದ ಪ್ರತಿಯೊಂದು ಠೇವಣಿಯನ್ನು, ಅದನ್ನು ನವೀಕರಿಸಿರದಿದ್ದರೆ, ಅಂಥ ಠೇವಣಿಯ ಅವಧಿ ಮತ್ತು ಷರತ್ತುಗಳ ಪ್ರಕಾರ ಮರುಸಂದಾಯ ಮಾಡತಕ್ಕದ್ದು.

(2) ಕಂಪನಿಯಾಗಿರುವ ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಅಂಥ ಠೇವಣಿಯ ಅವಧಿ ಮತ್ತು ಷರತ್ತುಗಳ ಪ್ರಕಾರ, ಯಾವುದೇ ಠೇವಣಿಯನ್ನು ಅಥವಾ ಅದರ ಭಾಗವನ್ನು ಮರುಸಂದಾಯ ಮಾಡುವುದಕ್ಕೆ ವಿಫಲವಾದರೆ, ಕೇಂದ್ರ ಸರ್ಕಾರವು, ಈ ಪ್ರಕರಣದ ಉದ್ದೇಶಕ್ಕಾಗಿ ಅಧಿಕೃತಗೊಳಿಸಬಹುದಾದಂಥ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರಿಯು (ಇಲ್ಲಿ ಇನ್ನು ಮುಂದೆ "ಅಧಿಕೃತ ಅಧಿಕಾರಿ" ಎಂದು ಉಲ್ಲೇಖಿಸಲಾಗಿದೆ), ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ, ಠೇವಣಿದಾರರ ಹಿತದೃಷ್ಟಿಯನ್ನು ಅಥವಾ ಸಾರ್ವಜನಿಕ ಹಿತದೃಷ್ಟಿಯನ್ನು ರಕ್ಷಿಸುವುದಕ್ಕಾಗಿ, ಅಂಥ ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಅಂಥ ಠೇವಣಿಯನ್ನು ಅಥವಾ ಅದರ ಭಾಗವನ್ನು ತತ್‌ಕ್ಷಣ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಮರುಸಂದಾಯ ಮಾಡಬೇಕೆಂದು ಆದೇಶದ ಮೂಲಕ ಆದೇಶಿಸುವುದು ಅತ್ಯಗತ್ಯವೆಂದು ತನಗೇ ಸ್ವತಃ ಅಥವಾ ಠೇವಣಿದಾರನ ಅರ್ಜಿಯಿಂದಾಗಲಿ ಮನವರಿಕೆಯಾದರೆ, ಅವನು ಹಾಗೆ ಮಾಡಬಹುದು:

ಪರಂತು, ಅಧಿಕೃತ ಅಧಿಕಾರಿಯು, ಈ ಉಪ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸುವುದಕ್ಕೂ ಮೊದಲು, ಆ ಗೃಹನಿರ್ಮಾಣ ಹಣಕಾಸು ಸಂಸ್ಥೆಗೆ ಅಥವಾ ಈ ವಿಷಯದಲ್ಲಿ ಆಸಕ್ತಿಯುಳ್ಳ ಇತರ ವ್ಯಕ್ತಿಗಳಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ಕೊಡಬಹುದು.

**36ಬಿ. ಠೇವಣಿದಾರರಿಂದ ನಾಮನಿರ್ದೇಶನ.-** (1) ಗೃಹ ನಿರ್ಮಾಣ ಹಣಕಾಸು ಸಂಸ್ಥೆಯಲ್ಲಿ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳ ಖಾತೆಯಲ್ಲಿ ಠೇವಣಿ ಇದ್ದರೆ, ಠೇವಣಿದಾರನು ಅಥವಾ ಸಂದರ್ಭಾನುಸಾರ ಎಲ್ಲಾ ಠೇವಣಿದಾರರೂ, ಆ ಠೇವಣಿದಾರನು ಮರಣ ಹೊಂದಿದಾಗ, ಅಥವಾ ಎಲ್ಲಾ ಠೇವಣಿದಾರರು ಮರಣ ಹೊಂದಿದಾಗ, ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಯಾವ ವ್ಯಕ್ತಿಗೆ ಠೇವಣಿಯನ್ನು ಹಿಂದಿರುಗಿಸಬಹುದೋ ಆ ಒಬ್ಬನೇ ವ್ಯಕ್ತಿಯನ್ನು, ಕೇಂದ್ರ ಸರ್ಕಾರವು ಬ್ಯಾಂಕುಗಳ ವಿನಿಯಮನ ಅಧಿನಿಯಮ, 1949ರ 45ಝಡ್ಎ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನಾಮನಿರ್ದೇಶನ ಮಾಡಬಹುದು.

(2) ಅಂಥ ಠೇವಣಿಗೆ ಸಂಬಂಧಪಟ್ಟಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಸಾಕ್ಷ್ಯದಲ್ಲಿ ಅದು ಮರಣಶಾಸನ ಇರಬಹುದು ಅಥವಾ ಇನ್ಯಾವುದಾದರೂ ಆಗಿರಬಹುದು, ಏನೇ ಇದ್ದರೂ, ಆ ನಾಮನಿರ್ದೇಶನವು ಗೃಹನಿರ್ಮಾಣ ಹಣಕಾಸು ಸಂಸ್ಥೆಯಿಂದ ಠೇವಣಿಯ ಮೊತ್ತವನ್ನು ಪಡೆಯುವುದಕ್ಕೆ ಯಾವುದೇ ವ್ಯಕ್ತಿಗೆ ಹಕ್ಕನ್ನು ಕೊಡುತ್ತದೆಯೆಂದು ತಾತ್ಪರ್ಯವಾಗುವಂತಿದ್ದರೆ, ಕೇಂದ್ರ ಸರ್ಕಾರವು ಬ್ಯಾಂಕುಗಳ ವಿನಿಯಮನ ಅಧಿನಿಯಮ, 1949ರ 45ಝಡ್ಎ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನಾಮನಿರ್ದೇಶನವನ್ನು ವ್ಯತ್ಯಸ್ತಗೊಳಿಸಿದ್ದ ಅಥವಾ ರದ್ದುಗೊಳಿಸಿದ್ದ ಹೊರತು, ಅಂಥ ಠೇವಣಿಗೆ ಸಂಬಂಧಪಟ್ಟಂತೆ, ಇತರ ಎಲ್ಲಾ ವ್ಯಕ್ತಿಗಳನ್ನು ಬಿಟ್ಟು, ನಾಮನಿರ್ದೇಶಿತನು, ಆ ಒಬ್ಬ ಠೇವಣಿದಾರನು ಮರಣ ಹೊಂದಿದಾಗ ಅಥವಾ ಸಂದರ್ಭಾನುಸಾರ ಎಲ್ಲಾ ಠೇವಣಿದಾರರು ಮರಣ ಹೊಂದಿದಾಗ ಆ ಒಬ್ಬ ಠೇವಣಿದಾರನ ಅಥವಾ ಸಂದರ್ಭಾನುಸಾರ ಎಲ್ಲ ಠೇವಣಿದಾರರ ಎಲ್ಲಾ ಹಕ್ಕುಗಳಿಗೂ ಹಕ್ಕುಳ್ಳವನಾಗಿರತಕ್ಕದ್ದು.

(3) ನಾಮನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿದ್ದರೆ, ಕೇಂದ್ರ ಸರ್ಕಾರವು ಬ್ಯಾಂಕುಗಳ ವಿನಿಯಮನ ಅಧಿನಿಯಮ, 1949ರ 45ಝಡ್ಎ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ, ಠೇವಣಿದಾರನು, ತನ್ನ ಮರಣದ ಸಂದರ್ಭದಲ್ಲಿ, ನಾಮನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿರುವ ಅವಧಿಯಲ್ಲಿ ಮೊತ್ತವನ್ನು ಸ್ವೀಕರಿಸುವುದಕ್ಕೆ ಯಾವನೇ ವ್ಯಕ್ತಿಯನ್ನು ನೇಮಿಸುವುದಕ್ಕೆ ನಾಮನಿರ್ದೇಶನ ಮಾಡುವುದು ಕಾನೂನುಸಮ್ಮತವಾಗಿರತಕ್ಕದ್ದು.

(4) ಈ ಪ್ರಕರಣದ ಉಪಬಂಧಗಳ ಅನುಸಾರ, ಗೃಹನಿರ್ಮಾಣ ಹಣಕಾಸು ಸಂಸ್ಥೆಯು ಸಂದಾಯ ಮಾಡಿದರೆ, ಠೇವಣಿಗೆ ಸಂಬಂಧಪಟ್ಟಂತೆ ಅದು ಗೃಹನಿರ್ಮಾಣ ಹಣಕಾಸು ಸಂಸ್ಥೆಗೆ, ಅದರ ಹೊಣೆಗಾರಿಕೆಯ ಸಂಪೂರ್ಣ ವಿಮೋಚನೆಯಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಈ ಪ್ರಕರಣದ ಮೇರೆಗೆ ಯಾವುದೇ ಸಂದಾಯವನ್ನು ಯಾರಿಗೆ ಮಾಡಲಾಗಿತ್ತೋ ಆ ವ್ಯಕ್ತಿಯ ವಿರುದ್ಧ ಯಾರೇ ವ್ಯಕ್ತಿಯು ಹೊಂದಿರಬಹುದಾದ ಹಕ್ಕು ಅಥವಾ ಕ್ಲೇಮಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(5) ಗೃಹ ನಿರ್ಮಾಣ ಹಣಕಾಸು ಸಂಸ್ಥೆಯಲ್ಲಿ ಯಾರ ಹೆಸರಿನಲ್ಲಿ ಠೇವಣಿ ಇದೆಯೋ, ಆ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯು ಮಾಡುವ ಕ್ಲೇಮಿನ ನೋಟೀಸು ಆ ಗೃಹನಿರ್ಮಾಣ ಹಣಕಾಸು ಸಂಸ್ಥೆಯಿಂದ ಸ್ವೀಕಾರಾರ್ಹವಾಗತಕ್ಕದ್ದಲ್ಲ ಅಥವಾ ಗೃಹನಿರ್ಮಾಣ ಹಣಕಾಸು ಸಂಸ್ಥೆಯು, ತನಗೆ ನಿರ್ದಿಷ್ಟವಾಗಿ ಕೊಟ್ಟಿದ್ದರೂ ಕೂಡ ಯಾವುದೇ ಅಂಥ ನೋಟೀಸಿಗೆ ಬದ್ಧವಾಗಿರತಕ್ಕದ್ದಲ್ಲ:

ಪರಂತು, ಅಂಥ ಠೇವಣಿಗೆ ಸಂಬಂಧಪಟ್ಟಂತೆ ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯವು ನೀಡಿದ ಯಾವುದೇ ಡಿಕ್ರಿಯನ್ನು, ಆದೇಶವನ್ನು, ಪ್ರಮಾಣಪತ್ರವನ್ನು ಅಥವಾ ಇತರ ಅಧಿಕಾರ ಪತ್ರವನ್ನು ಗೃಹನಿರ್ಮಾಣ ಹಣಕಾಸು ಸಂಸ್ಥೆಯ ಮುಂದೆ ಹಾಜರುಪಡಿಸಿದರೆ, ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಅಂಥ ಡಿಕ್ರಿಗೆ, ಆದೇಶಕ್ಕೆ, ಪ್ರಮಾಣಪತ್ರಕ್ಕೆ ಅಥವಾ ಇತರ ಅಧಿಕಾರ ಪತ್ರಕ್ಕೆ ಯುಕ್ತ ಗಮನ ಕೊಡತಕ್ಕದ್ದು.

## ಅಧ್ಯಾಯ-V ಎ

## ಗೃಹ ನಿರ್ಮಾಣ ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಇತರ ಉಪಬಂಧಗಳು

**36ಸಿ. ಪರಿಭಾಷೆಗಳು.**- ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಪೀಲು ನ್ಯಾಯಾಧಿಕರಣ" ಎಂದರೆ 36ಐ ಪ್ರಕರಣದ ಮೇರೆಗೆ ಸ್ಥಾಪಿತವಾದ ಅಪೀಲು ನ್ಯಾಯಾಧಿಕರಣ;

(ಬಿ) "ಅನುಮೋದಿತ ಸಂಸ್ಥೆ" ಎಂದರೆ-

(i) 29ಎ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡಲಾದ ಒಂದು ಗೃಹನಿರ್ಮಾಣ ಹಣಕಾಸು ಸಂಸ್ಥೆ;

(ii) ಅನುಸೂಚಿತ ಬ್ಯಾಂಕು;

(iii) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಕೈಗೊಂಡ ಗೃಹನಿರ್ಮಾಣ ಅಡಮಾನಗಳಿಗೆ ಭದ್ರತೆ ನೀಡುವ ವ್ಯವಹಾರದಲ್ಲಿ ನ್ಯಾಸಧಾರಿಯಾಗಿ ಅಥವಾ ಅನ್ಯಥಾ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು;

(iv) ಕೇಂದ್ರ ಸರ್ಕಾರವು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಶಿಫಾರಸಿನ ಮೇಲೆ, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸಂಸ್ಥೆಗಳು;

(ಸಿ) "ನೆರವು" ಎಂದರೆ ತಾನು ಕೈಗೊಂಡ ಯಾವುದೇ ಗೃಹನಿರ್ಮಾಣ ಹಣಕಾಸು ಚಟುವಟಿಕೆಯು ನಡೆಯುತ್ತಿರುವ ಕಾಲದಲ್ಲಿ ಒಂದು ಅನುಮೋದಿತ ಸಂಸ್ಥೆಯು ಮಂಜೂರು ಮಾಡಿದ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಹಣಕಾಸಿನ ನೆರವು;

(ಡಿ) "ಸಾಲಿಗ" ಎಂದರೆ ವಾಸದ ಮನೆಯ ಖರೀದಿ, ನಿರ್ಮಾಣ, ರಿಪೇರಿ, ವಿಸ್ತರಣೆ ಅಥವಾ ಜೀರ್ಣೋದ್ಧಾರದ ಉದ್ದೇಶಗಳಿಗಾಗಿ ಒಂದು ಅನುಮೋದಿತ ಸಂಸ್ಥೆ ಯಾರಿಗೆ ಯಾವುದೇ ನೆರವನ್ನು ಕೊಟ್ಟಿದೆಯೋ ಆ ಯಾರೇ ವ್ಯಕ್ತಿ;

(ಇ) "ಬಾಕಿಗಳು" ಎಂದರೆ ಅನುಮೋದಿತ ಸಂಸ್ಥೆಯು ಯಾರೇ ವ್ಯಕ್ತಿಯಿಂದ ಯಾವುದನ್ನು ಬಾಕಿಯೆಂದು ಕ್ಲೇಮು ಮಾಡುತ್ತದೋ ಆ ಯಾವುದೇ ಹೊಣೆಗಾರಿಕೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಬಡ್ಡಿ, ವೆಚ್ಚಗಳು, ಚಾರ್ಜುಗಳು ಮತ್ತು ಇತರ ಮೊತ್ತವನ್ನು ಒಳಗೊಳ್ಳುತ್ತದೆ;

(ಎಫ್) "ವಸೂಲಿ ಅಧಿಕಾರಿ" ಎಂದರೆ 36ಡಿ ಪ್ರಕರಣದ ಮೇರೆಗೆ ನೇಮಕವಾದ ಅಧಿಕಾರಿ.

**36ಡಿ. ವಸೂಲಿ ಅಧಿಕಾರಿಯ ನೇಮಕಾತಿ.**- (1) ಕೇಂದ್ರ ಸರ್ಕಾರವು, ಅನುಮೋದಿತ ಸಂಸ್ಥೆಯ ಅಧಿಕಾರಿಗಳಾಗಿರಲು ಸೂಕ್ತವೆಂದು ತಾನು ಭಾವಿಸಬಹುದಾದಂಥ ವ್ಯಕ್ತಿಗಳನ್ನು, ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ಈ ಅಧ್ಯಾಯದ ಉದ್ದೇಶಕ್ಕಾಗಿ ವಸೂಲಿ ಅಧಿಕಾರಿಗಳನ್ನಾಗಿ ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು, ಅವರು ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅರ್ಹತೆಗಳನ್ನು ಹೊಂದಿರತಕ್ಕದ್ದು.

(2) ವಸೂಲಿ ಅಧಿಕಾರಿಯು ಈ ಅಧ್ಯಾಯದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕ ಮತ್ತು ಅದರ ಮೂಲಕ ವಿಧಿಸಿದ ಕರ್ತವ್ಯಗಳನ್ನು ನೇರವೇರಿಸತಕ್ಕ ಸ್ಥಳೀಯ ವ್ಯಕ್ತಿಯು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥದ್ದಾಗಿರತಕ್ಕದ್ದು.

**36ಇ. ವಸೂಲಿ ಅಧಿಕಾರಿಗೆ ಅರ್ಜಿ ಸಲ್ಲಿಸುವುದು.**- (1) ಒಪ್ಪಂದದ ಮೇರೆಗೆ ಅನುಮೋದಿತ ಸಂಸ್ಥೆಗೆ ಹೊಣೆಗಾರನಾಗಿರುವ ಯಾರೇ ಸಾಲಿಗನು, ಯಾವುದೇ ನೆರವನ್ನು ಅಥವಾ ಅದರ ಯಾವುದೇ ಕಂತನ್ನು ಮರುಸಂದಾಯ ಮಾಡಲು ತಪ್ಪಿದರೆ, ಅಥವಾ ಅನ್ಯಥಾ ಸದರಿ ಒಪ್ಪಂದದ ನಿಬಂಧನೆಗಳನ್ನು ಪಾಲಿಸಲು ವಿಫಲನಾದರೆ, ಆಗ, ಸ್ವತ್ತು ವರ್ಗಾವಣೆ ಅಧಿನಿಯಮ, 1882 (1882ರ 4)ರ 69ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಆ ಅನುಮೋದಿತ ಸಂಸ್ಥೆಯು, ಯಾವ ವಸೂಲಿ ಅಧಿಕಾರಿಯ ಅಧಿಕಾರ ವ್ಯಾಪ್ತಿಯಲ್ಲಿ ಸಾಲಿಗನು ವಾಸ್ತವವಾಗಿ ಅಥವಾ ಸ್ವಯಿಚ್ಛೆಯಿಂದ ವಾಸಿಸಿರುವನೋ, ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಅಥವಾ ಗಳಿಕೆಗಾಗಿ ವೈಯಕ್ತಿಕವಾಗಿ ಕೆಲಸ ಮಾಡುತ್ತಿರುವನೋ ಅಥವಾ ಬಾಕಿಗಳಿಗೆ ಭದ್ರತೆಯಾಗಿ ಅನುಮೋದಿತ ಸಂಸ್ಥೆಗೆ ಒತ್ತೆ ಇಟ್ಟ, ಅಡಮಾನ ಮಾಡಿದ, ಆಧಾರ ಮಾಡಿದ ಅಥವಾ ಹಸ್ತಾಂತರಿಸಿ ಕೊಟ್ಟ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ ಪೂರ್ಣವಾಗಿ ಅಥವಾ ಭಾಗಶಃ ವ್ಯಾಜ್ಯಕಾರಣ ಉದ್ಭವವಾಗಿದೆಯೋ ಆ ವಸೂಲಿ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು.

(2) ಯಾರೇ ಸಾಲಿಗನಿಂದ ತನ್ನ ಬಾಕಿಯನ್ನು ವಸೂಲಿ ಮಾಡಿಕೊಳ್ಳಬೇಕಾಗಿರುವ ಒಂದು ಅನುಮೋದಿತ ಸಂಸ್ಥೆಯು (1)ನೇ ಉಪ-ಪ್ರಕರಣದ ಮೇರೆಗೆ ವಸೂಲಿ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ಅದೇ ಸ್ವತ್ತನ್ನು ಬೇರೊಂದು ಅನುಮೋದಿತ ಸಂಸ್ಥೆಗೂ ಅಥವಾ ವ್ಯಕ್ತಿಗೂ ಒತ್ತೆ ಇಟ್ಟಿದ್ದರೆ, ಅಡಮಾನ ಮಾಡಿದ್ದರೆ, ಆಧಾರ ಮಾಡಿದ್ದರೆ ಅಥವಾ ಹಸ್ತಾಂತರಿಸಿಕೊಟ್ಟಿದ್ದರೆ, ಆ ಇನ್ನೊಂದು ಅನುಮೋದಿತ ಸಂಸ್ಥೆಯು ಅಥವಾ ವ್ಯಕ್ತಿಯು, ಈ ಅನುಮೋದಿತ ಸಂಸ್ಥೆಯೊಂದಿಗೆ, ವ್ಯವಹರಣೆಯ ಯಾವುದೇ ಹಂತದಲ್ಲಿ, ಅಂತಿಮ ಆದೇಶ ಜಾರಿಯಾಗುವುದಕ್ಕೆ ಮುಂಚೆ, ಆ ವಸೂಲಿ ಅಧಿಕಾರಿಗೆ ಒಂದು ಅರ್ಜಿಯನ್ನು ಸಲ್ಲಿಸುವ ಮೂಲಕ ಸೇರಿಕೊಳ್ಳಬಹುದು.

(3) (1)ನೇ ಉಪ-ಪ್ರಕರಣ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯಲ್ಲಿ, ಅನುಮೋದಿತ ಸಂಸ್ಥೆಗೆ ಇರುವ ಸಾಲಿಗನ ಹೊಣೆಯ ಸ್ವರೂಪ ಮತ್ತು ವ್ಯಾಪ್ತಿಯನ್ನು, ಯಾವ ಆಧಾರದ ಮೇಲೆ ಅರ್ಜಿಯನ್ನು ಸಲ್ಲಿಸಲಾಗಿದೆ ಎಂಬ ಕಾರಣಗಳನ್ನು ತಿಳಿಸಿರತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ದಸ್ತಾವೇಜುಗಳು ಅಥವಾ ಇತರೆ ಸಾಕ್ಷಿಗಳನ್ನು ಅದರೊಂದಿಗೆ ಲಗತ್ತಿಸಿರತಕ್ಕದ್ದು.

**36ಎಫ್. 36ಇ ಪ್ರಕರಣದ ಮೇರೆಗೆ ಸಲ್ಲಿಸುವ ಅರ್ಜಿಗೆ ಸಂಬಂಧಪಟ್ಟ ಪ್ರಕ್ರಿಯೆ.**- (1) 36ಇ ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ವಸೂಲಿ ಅಧಿಕಾರಿಯು, ಒಂದು ಒಪ್ಪಂದದಲ್ಲಿ ಸಾಲಿಗನು ಅನುಮೋದಿತ ಸಂಸ್ಥೆಗೆ ಹೊಣೆಯಾಗಿರುವನೆಂದು ಅಥವಾ ನೆರವನ್ನು ಅಥವಾ ಅದರ ಯಾವುದೇ ಕಂತನ್ನು ಮರುಸಂದಾಯ ಮಾಡಲು ತಪ್ಪಿದ್ದಾನೆಂದು ಅಥವಾ ಸದರಿ ಒಪ್ಪಂದದ ನಿಬಂಧನೆಗಳನ್ನು ಪಾಲಿಸಲು ವಿಫಲನಾಗಿದ್ದಾನೆಂದು ಅಭಿಪ್ರಾಯಪಟ್ಟರೆ, ಅವನು, ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ತೊಂಬತ್ತು ದಿವಸಗಳ ಅವಧಿಯೊಳಗಾಗಿ ಅದರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂದಾಯ ಮಾಡುವಂತೆ ಅಥವಾ ಕೋರಿದ ಪರಿಹಾರವನ್ನು ಯಾಕೆ ಮಂಜೂರು ಮಾಡಬಾರದೆಂಬುದಕ್ಕೆ ಕಾರಣವನ್ನು ತೋರಿಸುವಂತೆ ಅವನನ್ನು ಕೋರುವ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿನ ಲಿಖಿತ ತಗಾದೆ ನೋಟೀಸನ್ನು ಸಾಲಿಗನ ಮೇಲೆ ಜಾರಿ ಮಾಡುವಂತೆ ಮಾಡತಕ್ಕದ್ದು.

(2) ವಸೂಲಿ ಅಧಿಕಾರಿಯು, ಅರ್ಜಿದಾರನಿಗೆ ಮತ್ತು ಸಾಲಿಗನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ, ಯಾವ ದಿನಾಂಕದಂದು ಅಥವಾ ಯಾವ ದಿನಾಂಕಕ್ಕೆ ಮುಂಚೆ ಮೊತ್ತದ ಸಂದಾಯವು ಬಾಕಿಯಿದೆಯೆಂದು ಕಂಡುಬರುವುದೋ ಆ ದಿನಾಂಕದಿಂದ ವಸೂಲಿಯ ಅಥವಾ ವಾಸ್ತವಿಕ ಸಂದಾಯದ ದಿನಾಂಕದವರೆಗೆ ಮಾಡಬೇಕಾಗುವ ಬಡ್ಡಿಯ ಸಂದಾಯಕ್ಕಾಗಿ ಆದೇಶವೂ ಒಳಗೊಂಡಂತೆ, ನ್ಯಾಯೋದ್ದೇಶವನ್ನು ಈಡೇರಿಸುವುದಕ್ಕೆ, ಅವನು, ಆ ಅರ್ಜಿಯ ಸಂಬಂಧ, ಸೂಕ್ತವೆಂದು ಆಲೋಚಿಸಬಹುದಾದಂಥ ಮಧ್ಯಕಾಲೀನ ಅಥವಾ ಅಂತಿಮ ಆದೇಶವನ್ನು ಹೊರಡಿಸಬಹುದು.

(3) ವಸೂಲಿ ಅಧಿಕಾರಿಯು, ಎದುರು ದಾವೆಯ ಯಾವುದೇ ಕ್ಲೇಮನ್ನು ಅಥವಾ ಅನುಮೋದಿತ ಸಂಸ್ಥೆ ಅಥವಾ ವ್ಯಕ್ತಿಯ ವಿರುದ್ಧ ಸಾಲಿಗನು ಮಂಡಿಸುವ ಕೌಂಟರ್ ಕ್ಲೇಮನ್ನೂ ಪರ್ಯಾಲೋಚಿಸಲೂಬಹುದು ಅಥವಾ ತನಗೆ ಒಪ್ಪಿಗೆಯಾದರೆ ಪುರಸ್ಕರಿಸಲೂಬಹುದು.

(4) ವಸೂಲಿ ಅಧಿಕಾರಿಯು, ತಾನು ಹೊರಡಿಸಿದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಅನುಮೋದಿತ ಸಂಸ್ಥೆಗೆ ಮತ್ತು ಸಾಲಿಗನಿಗೆ ಒದಗಿಸತಕ್ಕದ್ದು.

(5) ವಸೂಲಿ ಅಧಿಕಾರಿಯು, ಬಾಕಿಗಳಿಗೆ ಭದ್ರತೆಯಾಗಿ ಅನುಮೋದಿತ ಸಂಸ್ಥೆಗೆ ಒತ್ತೆ ಇಟ್ಟ, ಅಡಮಾನ ಮಾಡಿದ, ಆಧಾರ ಮಾಡಿದ ಅಥವಾ ಹಸ್ತಾಂತರಿಸಿಕೊಟ್ಟ ಯಾವುದೇ ಸ್ವತ್ತನ್ನು ಸಾಲಿಗನು ವರ್ಗಾವಣೆ ಮಾಡುವುದಕ್ಕೆ, ಪರಭಾರೆ ಮಾಡುವುದರಿಂದ ಅಥವಾ ಅನ್ಯಥಾ ಮಾರಾಟ ಮಾಡುವುದಕ್ಕೆ ಅಥವಾ ವಿಲೇವಾರಿ ಮಾಡುವುದಕ್ಕೆ ಅನರ್ಹನನ್ನಾಗಿ ಮಾಡುವುದಕ್ಕೆ ಅವನ ಬಗ್ಗೆ, ಒಂದು ಮಧ್ಯಂತರ ಆದೇಶವನ್ನು (ನಿರ್ಬಂಧಕಾಜ್ಞೆಯ ಅಥವಾ ತಡೆ ಆಜ್ಞೆಯ ಅಥವಾ ಜಪ್ತಿ ಆದೇಶದ ರೂಪದ) ಹೊರಡಿಸಬಹುದು.

(6) 36ಇ ಪ್ರಕರಣದ ಮೇರೆಗೆ ವಸೂಲಿ ಅಧಿಕಾರಿಗೆ ಸಲ್ಲಿಸಿದ ಅರ್ಜಿಯ ಬಗ್ಗೆ ಅವನು ಸಾಧ್ಯವಾದಷ್ಟು ಶೀಘ್ರವಾಗಿ ವ್ಯವಹರಿಸತಕ್ಕದ್ದು ಮತ್ತು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಅಂತಿಮವಾಗಿ ಅರ್ಜಿಯನ್ನು ವಿಲೆ ಮಾಡಲು ಅವನು ಪ್ರಯತ್ನಿಸತಕ್ಕದ್ದು.

**36ಜಿ. ವಸೂಲಿ ಅಧಿಕಾರಿಯ ಆದೇಶದ ಜಾರಿ.**- (1) ಸಾಲಿಗನು ಆದೇಶವನ್ನು, ಅದರಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ, ವಸೂಲಿ ಅಧಿಕಾರಿಯು, ಯಾವ ನೆರವಿನ ಬಗ್ಗೆ ಕರ್ತವ್ಯ ಲೋಪ ಆಗಿದೆಯೋ ಆ ಯಾವುದೇ ನೆರವಿಗೆ ಸಂಬಂಧಿಸಿದಂತೆ ಭದ್ರತೆಯಾಗಿ, ಅನುಮೋದಿತ ಸಂಸ್ಥೆಗೆ ಒತ್ತೆ ಇಟ್ಟ, ಅಡಮಾನ ಮಾಡಿದ, ಆಧಾರ ಮಾಡಿದ ಅಥವಾ ಹಸ್ತಾಂತರಿಸಿದ ಯಾವುದೇ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಅಂಥ ಸ್ವತ್ತನ್ನು ಮಾರಾಟದ, ಭೋಗ್ಯದ ಅಥವಾ ಇನ್ನಿತರ ರೂಪದಲ್ಲಿ ವರ್ಗಾಯಿಸಬಹುದು.

(2) ಈ ಪ್ರಕರಣದ ಮೇರೆಗೆ ಮಾರಾಟದ, ಭೋಗ್ಯದ ಅಥವಾ ಇನ್ನಿತರ ರೂಪದಲ್ಲಿ ಮಾಡುವ ಯಾವುದೇ ವರ್ಗಾವಣೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮಾಡತಕ್ಕದ್ದು.

(3) (1)ನೇ ಉಪ-ಪ್ರಕರಣದ ಮೇರೆಗೆ ತನ್ನ ಅಧಿಕಾರವನ್ನು ಚಲಾಯಿಸುವಾಗ ವಸೂಲಿ ಅಧಿಕಾರಿಯು ಮಾಡುವ ಯಾವುದೇ ಸ್ವತ್ತಿನ ವರ್ಗಾವಣೆಯು, ಸ್ವತ್ತಿನ ಒಡೆಯನು ವರ್ಗಾವಣೆಯನ್ನು ಮಾಡಿದ್ದಿದ್ದರೆ ಹೇಗೋ ಹಾಗೆ, ವರ್ಗಾಯಿತ ಸ್ವತ್ತಿನಲ್ಲಿನ ಅಥವಾ ವರ್ಗಾಯಿತ ಸ್ವತ್ತಿನ ಬಗೆಗಿನ ಎಲ್ಲಾ ಹಕ್ಕುಗಳೂ ವರ್ಗಾವಣೆ ಪಡೆದವನಲ್ಲಿ ನಿಹಿತವಾಗತಕ್ಕದ್ದು.

(4) (1)ನೇ ಉಪ-ಪ್ರಕರಣದ ಉಪಬಂಧಗಳ ಮೇರೆಗೆ ಸಾಲಿಗನ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಂಡಿದ್ದಲ್ಲಿ, ಅದಕ್ಕೆ ಪ್ರಾಸಂಗಿಕವಾಗಿ ತಾನು ಸೂಕ್ತವಾಗಿ ಖರ್ಚು ಮಾಡಿದ್ದೇನೆಂದು ವಸೂಲಿ ಅಧಿಕಾರಿಯು ಅಭಿಪ್ರಾಯಪಟ್ಟ ಎಲ್ಲ ಖರ್ಚುಗಳನ್ನು, ಚಾರ್ಜುಗಳನ್ನು, ವೆಚ್ಚಗಳನ್ನು ಸಾಲಿಗನಿಂದ ವಸೂಲಿ ಮಾಡತಕ್ಕದ್ದು ಮತ್ತು ಅವನು ಪಡೆದ ಹಣವನ್ನು, ಯಾವುದೇ ತದ್ವಿರುದ್ಧ ಕರಾರು ಇಲ್ಲದಿದ್ದರೆ, ಮೊದಲನೆಯದಾಗಿ, ಅಂಥ ಖರ್ಚುಗಳನ್ನು, ಚಾರ್ಜುಗಳನ್ನು ಮತ್ತು ವೆಚ್ಚಗಳನ್ನು ಸರಿದೂಗಿಸಿಕೊಳ್ಳುವುದಕ್ಕೆ ಮತ್ತು ಎರಡನೆಯದಾಗಿ, ಅನುಮೋದಿತ ಸಂಸ್ಥೆಗೆ ಬಾಕಿಯಿರುವ ಋಣದ ವಿಮೋಚನೆಗೆ ನ್ಯಾಸದ ರೂಪದಲ್ಲಿ ಅವನು ಇಟ್ಟುಕೊಂಡಿರತಕ್ಕದ್ದು ಮತ್ತು ಉಳಿದ ಹಣವನ್ನು ಅದಕ್ಕೆ ಹಕ್ಕುಳ್ಳ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

(5) ಅನುಮೋದಿತ ಸಂಸ್ಥೆಯ ಬಾಕಿಗಳನ್ನು, ವಸೂಲಿ ಅಧಿಕಾರಿಯು ವಹಿಸಿದ ಎಲ್ಲಾ ಖರ್ಚುಗಳು, ಚಾರ್ಜುಗಳು ಮತ್ತು ವೆಚ್ಚಗಳ ಸಹಿತ, ಸ್ವತ್ತಿನ ಮಾರಾಟಕ್ಕೆ ಅಥವಾ ವರ್ಗಾವಣೆಗೆ ನಿಗದಿಪಡಿಸಿದ ದಿನಾಂಕಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಅನುಮೋದಿತ ಸಂಸ್ಥೆಗೆ ಅಥವಾ ವಸೂಲಿ ಅಧಿಕಾರಿಗೆ ಕೊಟ್ಟಿದ್ದರೆ, ಸ್ವತ್ತನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ವರ್ಗಾಯಿಸತಕ್ಕದ್ದಲ್ಲ ಮತ್ತು ಆ ಸ್ವತ್ತಿನ ವರ್ಗಾವಣೆ ಅಥವಾ ಮಾರಾಟಕ್ಕಾಗಿ ಮತ್ಯಾವ ಕ್ರಮಗಳನ್ನೂ ತೆಗೆದುಕೊಳ್ಳತಕ್ಕದ್ದಲ್ಲ.

**36ಎಚ್. ಸ್ವತ್ತನ್ನು ವಹಿಸಿಕೊಳ್ಳುವಲ್ಲಿ ವಸೂಲಿ ಅಧಿಕಾರಿಗೆ ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರ ಸಹಾಯ.**– (1) 36ಇ ಪ್ರಕರಣದ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರದ ಅನುಸಾರ, ಯಾವುದೇ ಸ್ವತ್ತನ್ನು ಮಾರಾಟ ಮಾಡಿದ್ದರೆ ಅಥವಾ ಗುತ್ತಿಗೆಗೆ ಕೊಟ್ಟಿದ್ದರೆ, ವಸೂಲಿ ಅಧಿಕಾರಿಯು, ಯಾವುದೇ ಅಂಥ ಸ್ವತ್ತನ್ನು ಅಭಿರಕ್ಷೆಗೆ ಅಥವಾ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಯಾವುದೇ ಅಂಥ ಸ್ವತ್ತು ಅಥವಾ ಅದಕ್ಕೆ ಸಂಬಂಧಿಸಿದ ಇತರ ದಸ್ತಾವೇಜುಗಳು ಯಾರ ಅಧಿಕಾರ ವ್ಯಾಪ್ತಿಯಲ್ಲಿ ಇರುವುದೋ ಅಥವಾ ಯಾರ ಅಧಿಕಾರ ವ್ಯಾಪ್ತಿಯಲ್ಲಿ ಅದರ ಸ್ವಾಧೀನತೆಯನ್ನು ತೆಗೆದುಕೊಂಡಿರುವುದು ಕಂಡುಬರುವುದೋ ಆ ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟ್‌ನನ್ನು ಅಥವಾ ಆ ಜಿಲ್ಲಾ ಮ್ಯಾಜಿಸ್ಟ್ರೇಟ್‌ನನ್ನು ಲಿಖಿತದಲ್ಲಿ ಕೇಳಿಕೊಳ್ಳಬಹುದು, ಮತ್ತು ತನಗೆ ಅಂಥ ಕೋರಿಕೆ ಬಂದಾಗ, ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟನು ಅಥವಾ ಸಂದರ್ಭಾನುಸಾರ, ಜಿಲ್ಲಾ ಮ್ಯಾಜಿಸ್ಟ್ರೇಟನು,-

(ಎ) ಅದಕ್ಕೆ ಸಂಬಂಧಪಟ್ಟ ಅಂಥ ಸ್ವತ್ತು ಮತ್ತು ದಸ್ತಾವೇಜುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು; ಮತ್ತು

(ಬಿ) ಅವುಗಳನ್ನು ವಸೂಲಿ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳ ಪಾಲನೆಯಾಗುವ ಉದ್ದೇಶಕ್ಕಾಗಿ, ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟನು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಅವಶ್ಯಕವೆಂದು ತಾನು ಅಭಿಪ್ರಾಯಪಡಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು ಅಥವಾ ತೆಗೆದುಕೊಳ್ಳುವಂತೆ ಮಾಡಬಹುದು ಮತ್ತು ಅಂಥ ಬಲವನ್ನೂ ಬಳಸಿಕೊಳ್ಳಬಹುದು ಅಥವಾ ಬಳಸಿಕೊಳ್ಳುವಂತೆ ಮಾಡಬಹುದು.

(3) ಈ ಪ್ರಕರಣದ ಅನುಸಾರ ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟನು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಮಾಡಿದ ಕಾರ್ಯವನ್ನು ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸತಕ್ಕದ್ದಲ್ಲ.

**36ಐ. ಅಪೀಲು ನ್ಯಾಯಾಧಿಕರಣದ ಸ್ಥಾಪನೆ.**– (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ಗೃಹನಿರ್ಮಾಣ ಹಣಕಾಸು ಸಂಸ್ಥೆಗಳ ಸಾಲ ವಸೂಲಿ ಅಪೀಲು ನ್ಯಾಯಾಧಿಕರಣಗಳು ಎಂಬ ಹೆಸರಿನ ಒಂದು ಅಥವಾ ಹೆಚ್ಚು ಅಪೀಲು ನ್ಯಾಯಾಧಿಕರಣಗಳನ್ನು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಂಥ ನ್ಯಾಯಾಧಿಕರಣಕ್ಕೆ ಪ್ರದತ್ತವಾದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಚಲಾಯಿಸುವುದಕ್ಕಾಗಿ ಸ್ಥಾಪಿಸತಕ್ಕದ್ದು.

(2) ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಸೂಚನೆಯಲ್ಲಿ, ಅಪೀಲು ನ್ಯಾಯಾಧಿಕರಣವು, ಯಾವ ಪ್ರದೇಶಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸ ಬಹುದಾಗಿದೆಯೋ ಆ ಪ್ರದೇಶಗಳನ್ನೂ ಕೂಡ ನಿರ್ದಿಷ್ಟಪಡಿಸತಕ್ಕದ್ದು.

(3) (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು, ಒಂದು ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯನ್ನು ಇನ್ನೊಂದು ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯ ಪ್ರಕಾರ್ಯಗಳನ್ನೂ ಕೂಡ ನಿರ್ವಹಿಸಲು ಅಧಿಕೃತಗೊಳಿಸಬಹುದು.

**36ಜೆ. ಅಪೀಲು ನ್ಯಾಯಾಧಿಕರಣದ ರಚನೆ.**– ಅಪೀಲು ನ್ಯಾಯಾಧಿಕರಣವು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನೇಮಿಸಿದ ಒಬ್ಬ ವ್ಯಕ್ತಿಯನ್ನು ಮಾತ್ರ (ಇಲ್ಲಿ ಇನ್ನು ಮುಂದೆ ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಒಳಗೊಂಡಿರತಕ್ಕದ್ದು.

**36ಕೆ. ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯಾಗಿ ನೇಮಕವಾಗುವುದಕ್ಕೆ ಇರಬೇಕಾದ ಅರ್ಹತೆಗಳು.**- ಒಬ್ಬ ವ್ಯಕ್ತಿಯು, ಅವನು,-

(ಎ) ಜಿಲ್ಲಾ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಆಗಲು ಅರ್ಹನಾಗಿರುವ ಹೊರತು;

(ಬಿ) ಭಾರತ ಕಾನೂನು ಸೇವೆಯ ಸದಸ್ಯನಾಗಿದ್ದ ಮತ್ತು ಕೊನೇಪಕ್ಷ ಮೂರು ವರ್ಷಗಳ ಕಾಲ ಆ ಸೇವೆಯ IIನೇ ದರ್ಜೆಯಲ್ಲಿನ ಹುದ್ದೆಯಲ್ಲಿದ್ದ ಹೊರತು

- ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯಾಗಿ ನೇಮಕವಾಗುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

**36ಎಲ್. ಪದಾವಧಿ.**- ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯು, ಅವನು ತನ್ನ ಪದವನ್ನು ಯಾವ ದಿನಾಂಕದಿಂದ ವಹಿಸಿಕೊಳ್ಳುವನೋ ಆ ದಿನಾಂಕದಿಂದ ಐದು ವರ್ಷಗಳ ಕಾಲ ಅಥವಾ ಅವನಿಗೆ ಅರವತ್ತೈದು ವರ್ಷ ತುಂಬುವವರೆಗೆ ಈ ಎರಡರಲ್ಲಿ ಯಾವುದು ಮೊದಲು ಬರುವುದೋ ಆ ಅವಧಿಗೆ ಪದದಲ್ಲಿರತಕ್ಕದ್ದು.

**36ಎಂ. ಅಪೀಲು ನ್ಯಾಯಾಧಿಕರಣದ ಸಿಬ್ಬಂದಿ.**- (1) ಕೇಂದ್ರ ಸರ್ಕಾರವು, ಸೂಕ್ತವೆಂದು ತಾನು ಆಲೋಚಿಸಬಹುದಾದಂಥ ಅಧಿಕಾರಿಗಳು ಮತ್ತು ಇತರ ನೌಕರರನ್ನು ಅಪೀಲು ನ್ಯಾಯಾಧಿಕರಣಕ್ಕೆ ಒದಗಿಸತಕ್ಕದ್ದು.

(2) ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳು ಮತ್ತು ಇತರ ನೌಕರರು ಪ್ರಿಸೈಡಿಂಗ್ ಅಧಿಕಾರಿಯ ಸಾಮಾನ್ಯ ಮೇಲ್ವಿಚಾರಣೆಯಲ್ಲಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ಇತರ ನೌಕರರ ವೇತನಗಳು ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ಷರತ್ತುಗಳು ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥವುಗಳಾಗಿರತಕ್ಕದ್ದು.

**36ಎನ್. ಪ್ರಿಸೈಡಿಂಗ್ ಅಧಿಕಾರಿಗಳ ವೇತನಗಳು ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು.**- ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯ ಸೇವೆಗೆ ಸಂದಾಯವಾಗಬೇಕಾದ ವೇತನ ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಉಪದಾನ ಮತ್ತು ಇತರ ನಿವೃತ್ತಿ ಸೌಲಭ್ಯಗಳನ್ನು ಒಳಗೊಂಡಂತೆ) ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥವುಗಳಾಗಿರತಕ್ಕದ್ದು:

ಪರಂತು, ಪ್ರಿಸೈಡಿಂಗ್ ಅಧಿಕಾರಿಯ ವೇತನ ಮತ್ತು ಭತ್ಯೆಗಳು ಅಥವಾ ಇತರ ನಿಬಂಧನೆಗಳು ಮತ್ತು ಷರತ್ತುಗಳನ್ನು ಅವನ ನೇಮಕವಾದ ನಂತರ, ಅವನಿಗೆ ಅನಾನುಕೂಲಕರವಾಗಿರುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

**36ಓ. ಖಾಲಿ ಸ್ಥಾನಗಳನ್ನು ತುಂಬುವುದು.**- ತಾತ್ಕಾಲಿಕ ಗೈರುಹಾಜರಿಯಲ್ಲದೆ ಇನ್ನಾವುದೇ ಕಾರಣದಿಂದಾಗಿ ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯ ಪದವು ಖಾಲಿಯಾದರೆ, ತದನಂತರ ಕೇಂದ್ರ ಸರ್ಕಾರವು ಆ ಖಾಲಿ ಸ್ಥಾನವನ್ನು ತುಂಬುವುದಕ್ಕೆ ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಬೇರೊಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು, ಮತ್ತು ಯಾವ ಹಂತದಲ್ಲಿ ಖಾಲಿಸ್ಥಾನವನ್ನು ತುಂಬಲಾಯಿತೋ ಆ ಹಂತದಿಂದ ಅಪೀಲು ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳನ್ನು ಮುಂದುವರಿಸಬಹುದು.

**36ಪಿ. ರಾಜೀನಾಮೆ ಮತ್ತು ತೆಗೆದುಹಾಕುವುದು.**- (1) ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯು, ತಾನು ಸಹಿ ಮಾಡಿ ಕೇಂದ್ರ ಸರ್ಕಾರಕ್ಕೆ ಬರೆದುಕೊಂಡ ಲಿಖಿತ ನೋಟೀಸಿನ ಮೂಲಕ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು:

ಪರಂತು, ಸದರಿ ಪ್ರಿಸೈಡಿಂಗ್ ಅಧಿಕಾರಿಯು, ತಾನು ತನ್ನ ಪದವನ್ನು ಕೂಡಲೇ ತ್ಯಜಿಸುವುದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ದೊರೆತ ಹೊರತು, ಅಂಥ ನೋಟೀಸಿನ ಸ್ವೀಕೃತಿಯ ದಿನಾಂಕದಿಂದ

ಮೂರು ತಿಂಗಳು ಮುಕ್ತಾಯವಾಗುವವರೆಗೆ ಅಥವಾ ಅವನ ಉತ್ತರಾಧಿಕಾರಿಯಾಗಿ ಯುಕ್ತವಾಗಿ ನೇಮಕವಾದ ಒಬ್ಬ ವ್ಯಕ್ತಿಯು ಪದವನ್ನು ವಹಿಸಿಕೊಳ್ಳುವವರೆಗೆ ಅಥವಾ ಅವನ ಪದಾವಧಿಯು ಮುಕ್ತಾಯಗೊಳ್ಳುವವರೆಗೆ ಈ ಮೂರರಲ್ಲಿ ಯಾವುದು ಮೊದಲು ಬರುತ್ತದೆಯೋ ಅಲ್ಲಿಯವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(2) ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯನ್ನು, ಯಾವ ವಿಚಾರಣೆಯಲ್ಲಿ, ಸಂಬಂಧಪಟ್ಟ ಪ್ರಿಸೈಡಿಂಗ್ ಅಧಿಕಾರಿಗೆ ಅವನ ಮೇಲಿನ ಅಪಾದನೆಗಳನ್ನು ತಿಳಿಸಲಾಗಿತ್ತೋ ಆ ಅಪಾದನೆಗಳಿಗೆ ಸಂಬಂಧಿಸಿದಂತೆ ಅಹವಾಲನ್ನು ಹೇಳಿಕೊಳ್ಳುವ ಒಂದು ಯುಕ್ತ ಅವಕಾಶವನ್ನು ಕೊಡಲಾಗಿತ್ತೋ ಆ ವಿಚಾರಣೆಯನ್ನು ಉಚ್ಚ ನ್ಯಾಯಾಲಯದ ನ್ಯಾಯಾಧೀಶನು ಮಾಡಿದ ತರುವಾಯ ದುರ್ನಡತೆ ಅಥವಾ ಅಸಮರ್ಥತೆ ರುಜುವಾತಾದ ಆಧಾರದ ಮೇಲೆ, ಕೇಂದ್ರ ಸರ್ಕಾರವು ಆದೇಶವನ್ನು ಹೊರಡಿಸಿದ ಹೊರತು ಅವನ ಪದದಿಂದ ತೆಗೆದುಹಾಕತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಲ್ಲಿ, ಸದರಿ ಪ್ರಿಸೈಡಿಂಗ್ ಅಧಿಕಾರಿಯ ದುರ್ನಡತೆ ಅಥವಾ ಅಸಮರ್ಥತೆಯ ತನಿಖೆಗಾಗಿ ಪ್ರಕ್ರಿಯೆಯನ್ನು ವಿನಿಯಮಿಸಬಹುದು.

**36ಕ್ಯೂ. ಅಪೀಲು ನ್ಯಾಯಾಧಿಕರಣವನ್ನು ಸ್ಥಾಪಿಸುವ ಆದೇಶಗಳು ಅಂತಿಮವಾದುದಾಗಿರುವುದು ಮತ್ತು ಅದರ ವ್ಯವಹರಣೆಗಳು ಅಸಿಂಧುವಾಗದಿರುವುದು.**- ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯಾಗಿ ಯಾರೇ ವ್ಯಕ್ತಿಯನ್ನು ನೇಮಿಸುವ ಕೇಂದ್ರ ಸರ್ಕಾರದ ಆದೇಶವನ್ನು ಯಾವುದೇ ರೀತಿಯಲ್ಲಿ ಪ್ರಶ್ನಿಸತಕ್ಕದ್ದಲ್ಲ ಮತ್ತು ಅಪೀಲು ನ್ಯಾಯಾಧಿಕರಣದ ಮುಂದಿನ ಕಾರ್ಯ ಅಥವಾ ವ್ಯವಹರಣೆಯನ್ನು, ಕೇವಲ ಅಪೀಲು ನ್ಯಾಯಾಧಿಕರಣದ ಸ್ಥಾಪನೆಯಲ್ಲಿನ ಯಾವುದೇ ದೋಷದ ಕಾರಣದಿಂದಾಗಿ ಯಾವುದೇ ರೀತಿಯಲ್ಲಿ ಪ್ರಶ್ನಿಸತಕ್ಕದ್ದಲ್ಲ.

**36ಆರ್. ಅಪೀಲು ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ.**- ಅಪೀಲು ನ್ಯಾಯಾಧಿಕರಣವು, ಈ ಅಧಿನಿಯಮದ ಮೇರೆಗೆ ವಸೂಲಿ ಅಧಿಕಾರಿಯು ಮಾಡಿದ ಅಥವಾ ಮಾಡಿದ್ದಾನೆಂದು ಭಾವಿಸಿದ ಯಾವುದೇ ಆದೇಶದ ವಿರುದ್ಧದ ಅಪೀಲುಗಳನ್ನು ಪುರಸ್ಕರಿಸುವುದಕ್ಕೆ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು.

**36ಎಸ್. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು.**- (1) ಈ ಅಧ್ಯಾಯದ ಮೇರೆಗೆ ವಸೂಲಿ ಅಧಿಕಾರಿಯು ಮಾಡಿದ ಅಥವಾ ಮಾಡಿದ್ದಾನೆಂದು ಭಾವಿಸಲಾದ ಆದೇಶದ ಮೂಲಕ ಬಾಧಿತನಾದ ಯಾರೇ ವ್ಯಕ್ತಿಯು ಈ ವಿಷಯದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲು, ಯಾವ ದಿನಾಂಕದಂದು ವಸೂಲಿ ಅಧಿಕಾರಿಯು ಮಾಡಿದ ಅಥವಾ ಮಾಡಿದ್ದಾನೆಂದು ಭಾವಿಸಲಾದ ಆದೇಶದ ಪ್ರತಿಯನ್ನು ತಾನು ಸ್ವೀಕರಿಸಿದನೋ ಆ ದಿನಾಂಕದಿಂದ ನಲವತ್ತೈದು ದಿವಸಗಳ ಅವಧಿಯೊಳಗಾಗಿ ದಾಖಲಾಗತಕ್ಕದ್ದು ಮತ್ತು ನಿಗದಿಪಡಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅದರ ಜೊತೆ ಅಂಥ ಶುಲ್ಕ ಇರತಕ್ಕದ್ದು:

ಪರಂತು, ಅಪೀಲು ನ್ಯಾಯಾಧಿಕರಣವು, ಸದರಿ ನಲವತ್ತೈದು ದಿವಸಗಳ ತರುವಾಯ, ಆ ಅವಧಿಯೊಳಗೆ ಅದನ್ನು ದಾಖಲು ಮಾಡದಿರುವುದಕ್ಕೆ ಸಾಕಷ್ಟು ಕಾರಣಗಳಿದ್ದವು ಎಂದು ತನಗೆ ಮನವರಿಕೆಯಾದರೆ, ಅಪೀಲನ್ನು ಪುರಸ್ಕರಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸ್ವೀಕರಿಸಿದ ಮೇಲೆ, ಅಪೀಲು ನ್ಯಾಯಾಧಿಕರಣವು, ಅಪೀಲಿನ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ಕೊಟ್ಟ ತರುವಾಯ, ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸುವ, ಮಾರ್ಪಾಟು ಮಾಡುವ ಅಥವಾ ತಳ್ಳಿಹಾಕುವ, ತಾನು ಸೂಕ್ತವೆಂದು ಅಲೋಚಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

(4) ಅಪೀಲು ನ್ಯಾಯಾಧಿಕರಣವು ತಾನು ಮಾಡಿದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಅಪೀಲಿನ ಪಕ್ಷಕಾರರಿಗೆ ಮತ್ತು ಸಂಬಂಧಪಟ್ಟ ವಸೂಲಿ ಅಧಿಕಾರಿಗೆ ಕಳುಹಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಮುಂದೆ ದಾಖಲಾದ ಅಪೀಲಿನ ಬಗ್ಗೆ ಅದು, ಆದಷ್ಟು ಶೀಘ್ರವಾಗಿ ವ್ಯವಹರಿಸತಕ್ಕದ್ದು ಮತ್ತು ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಅಂತಿಮವಾಗಿ ಅಪೀಲನ್ನು ವಿಲೆ ಮಾಡುವುದಕ್ಕೆ ಅದು ಪ್ರಯತ್ನಿಸತಕ್ಕದ್ದು.

**36ಟಿ. ಅಪೀಲನ್ನು ದಾಖಲು ಮಾಡುವಾಗ ಬಾಕಿಯಿರುವ ಮೊತ್ತವನ್ನು ಠೇವಣಿ ಇಡುವುದು.–** ಸಾಲಿಗನು ಅಪೀಲನ್ನು ಸಲ್ಲಿಸುವಾಗ, ಅಂಥ ಅಪೀಲನ್ನು, ವಸೂಲಿ ಅಧಿಕಾರಿಯು ನಿರ್ಧರಿಸಿದಂತೆ ಸಾಲಿಗನಿಂದ ಬಾಕಿಯಿರುವ ಮೊತ್ತದ ಶೇಕಡಾ ಎಪ್ಪತ್ತೈದರಷ್ಟನ್ನು ಆ ವ್ಯಕ್ತಿಯು ಅಪೀಲು ನ್ಯಾಯಾಧಿಕರಣದಲ್ಲಿ ಠೇವಣಿ ಇಟ್ಟ ಹೊರತು ಅಪೀಲು ನ್ಯಾಯಾಧಿಕರಣವು ಪುರಸ್ಕರಿಸತಕ್ಕದ್ದಲ್ಲ:

ಪರಂತು, ಅಪೀಲು ನ್ಯಾಯಾಧಿಕರಣವು, ಬರಹದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ, ಈ ಪ್ರಕರಣದ ಮೇರೆಗೆ ಠೇವಣಿ ಇಡಬೇಕಾದ ಮೊತ್ತವನ್ನು ಮನ್ನಾಮಾಡಬಹುದು ಅಥವಾ ಕಡಿಮೆ ಮಾಡಬಹುದು.

**36ಯು. ವಸೂಲಿ ಅಧಿಕಾರಿ ಮತ್ತು ಅಪೀಲು ನ್ಯಾಯಾಧಿಕರಣದ ಪ್ರಕ್ರಿಯೆ ಮತ್ತು ಅಧಿಕಾರಗಳು.–** (1) ವಸೂಲಿ ಅಧಿಕಾರಿ ಮತ್ತು ಅಪೀಲು ನ್ಯಾಯಾಧಿಕರಣವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಗೊತ್ತುಪಡಿಸಿರುವ ಪ್ರಕ್ರಿಯೆಗೆ ಬದ್ಧವಾಗತಕ್ಕದ್ದಲ್ಲ, ಆದರೆ ಸಹಜ ನ್ಯಾಯದ ತತ್ವಗಳಿಂದ ಮಾರ್ಗದರ್ಶನ ಪಡೆದುಕೊಳ್ಳತಕ್ಕದ್ದು ಮತ್ತು ಈ ಅಧಿನಿಯಮದ ಹಾಗೂ ಯಾವುದೇ ವಿನಿಯಮಗಳ ಇತರ ಉಪಬಂಧಗಳಿಗೊಳಪಟ್ಟು, ವಸೂಲಿ ಅಧಿಕಾರಿಯು ಮತ್ತು ಅಪೀಲು ನ್ಯಾಯಾಧಿಕರಣವು ಉಪವೇಶನಗಳ ಸ್ಥಳಗಳನ್ನು ಒಳಗೊಂಡು ತಮ್ಮದೇ ಪ್ರಕ್ರಿಯೆಯನ್ನು ವಿನಿಯಮಿಸುವುದಕ್ಕೆ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ವಸೂಲಿ ಅಧಿಕಾರಿಯು ಮತ್ತು ಅಪೀಲು ನ್ಯಾಯಾಧಿಕರಣವು, ಈ ಅಧಿನಿಯಮದ ಮೇರೆಗೆ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ದಾವೆಯ ಅಧಿವಿಚಾರಣೆ ನಡೆಯುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಗೆ ಸಮನ್ಸ್ ನೀಡುವುದು ಮತ್ತು ಹಾಜರಿರುವಂತೆ ಒತ್ತಾಯಿಸುವುದು ಮತ್ತು ಪ್ರಮಾಣ ವಚನ ಮಾಡಿಸಿ ವಿಚಾರಣೆ ಮಾಡುವುದು;

(ಬಿ) ದಸ್ತಾವೇಜುಗಳನ್ನು ಪತ್ತೆಹಚ್ಚುವಂತೆ ಮತ್ತು ಹಾಜರುಪಡಿಸುವಂತೆ ಕೋರುವುದು;

(ಸಿ) ಶಪಥಪತ್ರಗಳ ಮೂಲಕ ಸಾಕ್ಷ್ಯವನ್ನು ಪಡೆದುಕೊಳ್ಳುವುದು;

(ಡಿ) ಸಾಕ್ಷಿಗಳ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನುಗಳನ್ನು ಹೊರಡಿಸುವುದು;

(ಇ) ತನ್ನ ನಿರ್ಣಯಗಳನ್ನು ಪುನರವಲೋಕಿಸುವುದು;

(ಎಫ್) ಹಾಜರಾಗದೆ ತಪ್ಪಿಸಿಕೊಂಡಿದ್ದಕ್ಕಾಗಿ ಅರ್ಜಿಯನ್ನು ವಜಾ ಮಾಡುವುದು ಅಥವಾ ಅದನ್ನು ಏಕಪಕ್ಷೀಯವಾಗಿ ನಿರ್ಣಯಿಸುವುದು;

(ಜಿ) ಹಾಜರಾಗದೆ ತಪ್ಪಿಸಿಕೊಂಡಿದ್ದಕ್ಕಾಗಿ ಯಾವುದೇ ಅರ್ಜಿಯನ್ನು ವಜಾ ಮಾಡಿದ ಯಾವುದೇ ಆದೇಶವನ್ನು ಅಥವಾ ಏಕಪಕ್ಷೀಯವೆಂದು ಅದು ಹೊರಡಿಸಿದ ಯಾವುದೇ ಆದೇಶವನ್ನು ತಳ್ಳಿಹಾಕುವುದು; ಮತ್ತು

(ಎಚ್) ನಿಯಮಿಸಬಹುದಾದ ಯಾವುವೇ ಇತರ ವಿಷಯಗಳು.

(3) ವಸೂಲಿ ಅಧಿಕಾರಿಯ ಅಥವಾ ಅಪೀಲು ನ್ಯಾಯಾಧಿಕರಣದ ಮುಂದಿರುವ ಯಾವುದೇ ವ್ಯವಹರಣೆಯು, ಭಾರತ ದಂಡ ಸಂಹಿತೆಯ (1860ರ 45) 193 ಮತ್ತು 228ನೇ ಪ್ರಕರಣಗಳ ಅರ್ಥ ವ್ಯಾಪ್ತಿಯಲ್ಲಿ ಮತ್ತು 196ನೇ ಪ್ರಕರಣದ ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು

ಮತ್ತು ವಸೂಲಿ ಅಧಿಕಾರಿಯು ಅಥವಾ ಅಪೀಲು ನ್ಯಾಯಾಧಿಕರಣವು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 195ನೇ ಪ್ರಕರಣದ ಮತ್ತು **XXVI**ನೇ ಅಧ್ಯಾಯದ ಎಲ್ಲಾ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**36ವಿ. ಕಾಲಪರಿಮಿತಿ.–** ಕಾಲ ಪರಿಮಿತಿ ಅಧಿನಿಯಮ, 1963 (1963ರ 36)ರ ಉಪಬಂಧಗಳು, ವಸೂಲಿ ಅಧಿಕಾರಿಗೆ ಸಲ್ಲಿಸಿದ ಅರ್ಜಿಗೆ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

**36ಡಬ್ಲ್ಯು. ಪ್ರಿಸೈಡಿಂಗ್ ಅಧಿಕಾರಿಯು, ವಸೂಲಿ ಅಧಿಕಾರಿಯು, ಇತರ ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರಾಗಿರುವುದು.–** ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯು, ಇತರ ಅಧಿಕಾರಿಗಳು ಮತ್ತು ನೌಕರರು ಮತ್ತು ವಸೂಲಿ ಅಧಿಕಾರಿಯು, ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

**36ಎಕ್ಸ್. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ಸಂರಕ್ಷಣೆ.–** ಯಾವ ದಾವೆಯನ್ನೂ, ಪ್ರಾಸಿಕ್ಯೂಷನ್‌ನನ್ನೂ ಅಥವಾ ಇತರ ಕಾನೂನು ವ್ಯವಹರಣೆಗಳನ್ನೂ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ವಿನಿಯಮದ ಉಪಬಂಧಗಳ ಅನುಸಾರ ಅಥವಾ ಅದರ ಮೇರೆಗೆ ಮಾಡಿದ ಆದೇಶದ ಅನುಸಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ, ಕೇಂದ್ರ ಸರ್ಕಾರದ ವಿರುದ್ಧ ಅಥವಾ ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಯ ವಿರುದ್ಧ ಅಥವಾ ವಸೂಲಿ ಅಧಿಕಾರಿಯ ವಿರುದ್ಧ ಹೂಡತಕ್ಕದ್ದಲ್ಲ.

**36ವೈ. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.–** ನ್ಯಾಯಾಲಯವೂ ಅಥವಾ ಇತರ ಪ್ರಾಧಿಕಾರವೂ, ಈ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗೆ ಸಂಬಂಧಪಟ್ಟಂತೆ ಯಾವುದೇ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಅಥವಾ ಪ್ರಾಧಿಕಾರವನ್ನು (ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳ ಮೇರೆಗೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಶ್ರೇಷ್ಠ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ಹೊರತು) ಹೊಂದಿರತಕ್ಕದ್ದಲ್ಲ ಅಥವಾ ಚಲಾಯಿಸಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ.

**36ಝಡ್. ಮಧ್ಯಕಾಲೀನ ಉಪಬಂಧಗಳು.–** ಯಾವುದೇ ಪ್ರದೇಶಕ್ಕೆ 36–ಐ ಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣವು ಸ್ಥಾಪನೆಯಾಗುವವರೆಗೆ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ಬ್ಯಾಂಕುಗಳಿಗೆ ಮತ್ತು ಹಣಕಾಸು ಸಂಸ್ಥೆಗಳಿಗೆ ಬಾಕಿ ಇರುವ ಋಣಗಳ ವಸೂಲಿ ಅಧಿನಿಯಮ, 1993 (1993ರ 51)ರ 8ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಅಪೀಲು ನ್ಯಾಯಾಧಿಕರಣವು, ಅದು ಕಾರ್ಯನಿರ್ವಹಿಸುತ್ತಿರುವ ಪ್ರದೇಶದಲ್ಲಿ, ಈ ಅಧಿನಿಯಮದ ಮೇರೆಗೆ ಅಪೀಲು ನ್ಯಾಯಾಧಿಕರಣಕ್ಕೆ ಪ್ರದತ್ತವಾದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು.

## ಅಧ್ಯಾಯ–VI

## ನಿಧಿಗಳು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**37. ಸಾಮಾನ್ಯ ನಿಧಿ ಮತ್ತು ಇತರ ನಿಧಿಗಳು.–** (1) ರಿಸರ್ವ್ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಸಾಮಾನ್ಯ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕುದು ಮತ್ತು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಮಾಡುವ ಎಲ್ಲಾ ಸಂದಾಯಗಳನ್ನು ಸದರಿ ಸಾಮಾನ್ಯ ನಿಧಿಯಿಂದ ಮಾಡತಕ್ಕುದು.

(2) ಮಂಡಲಿಯು, ವಿಶೇಷ ನಿಧಿ ಅಥವಾ ಮೀಸಲು ನಿಧಿ ಅಥವಾ ನಿಯಮಿಸಬಹುದಾದಂಥ ಇತರ ನಿಧಿಗಳನ್ನು ಸೃಷ್ಟಿಸಬಹುದು ಮತ್ತು ರಿಸರ್ವ್ ಬ್ಯಾಂಕು ಹಾಗೆ ನಿರ್ದೇಶಿಸಿದರೆ ಸೃಷ್ಟಿಸತಕ್ಕುದು.

**38. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸಂತುಲನ ಪತ್ರ ಇತ್ಯಾದಿಗಳ ತಯಾರಿಕೆ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಆಯವ್ಯಯ ಪಟ್ಟಿ ಮತ್ತು ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ತಯಾರಿಸಿ ಇಡತಕ್ಕುದು.

(2) ಮಂಡಲಿಯು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಪುಸ್ತಕಗಳು ಮತ್ತು ಲೆಕ್ಕ ಪತ್ರಗಳನ್ನು ಪ್ರತಿವರ್ಷ ಜೂನ್ ಮೂವತ್ತನೆಯ ದಿನದಂದು ಇರುವಂತೆ ಸಂತುಲನಗೊಳಿಸಿ, ಸಮಾಪ್ತಿಗೊಳಿಸುವಂತೆ ಮಾಡಿಸತಕ್ಕುದು.

**39. ಹೆಚ್ಚುವರಿಯ ವಿಲೆ.**- ವಸೂಲಾಗದ ಮತ್ತು ಸಂದೇಹಾಸ್ಪದ ಋಣಗಳು, ಸ್ವತ್ತುಗಳ ಸವಕಳಿ ಮತ್ತು ಯಾವ ವಿಷಯಗಳಿಗೆ ವ್ಯವಸ್ಥೆಯು ಅವಶ್ಯ ಅಥವಾ ವಿಹಿತವಾಗಿರುವುದೋ ಅಥವಾ ಯಾವುದನ್ನು ಸಾಮಾನ್ಯವಾಗಿ ಬ್ಯಾಂಕರುಗಳು ವ್ಯವಸ್ಥೆ ಮಾಡುವರೋ ಆ ಎಲ್ಲಾ ಇತರ ವಿಷಯಗಳ ಬಗ್ಗೆ ವ್ಯವಸ್ಥೆ ಮಾಡಿದ ತರುವಾಯ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು-

(i) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಯಾವ ಲೆಕ್ಕದ ವರ್ಷದಲ್ಲಿ ಸ್ಥಾಪಿತವಾಯಿತೋ ಆ ವರ್ಷದ ತರುವಾಯದ ಹದಿನೈದು ವರ್ಷಗಳ ಅವಧಿಯವರೆಗೆ (ಈ ಪ್ರಕರಣದಲ್ಲಿ ಇನ್ನು ಮುಂದೆ ಹೆಚ್ಚುವರಿ ಎಂದು ಉಲ್ಲೇಖಿಸಲಾಗುವ) ಉಳಿದಿರುವ ಮೊಬಲಗನ್ನು ರಿಸರ್ವ್ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂತೆ 37ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನಿಧಿಗಳಿಗೆ ವರ್ಗಾಯಿಸತಕ್ಕುದು; ಮತ್ತು

(ii) ಹದಿನೈದು ವರ್ಷಗಳ ಸದರಿ ಅವಧಿಯು ಮುಗಿದ ತರುವಾಯ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, 37ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನಿಧಿಗಳಿಗೆ ವ್ಯವಸ್ಥೆ ಮಾಡಿದ ತರುವಾಯ ಹೆಚ್ಚುವರಿ ಶಿಲ್ಕನ್ನು ರಿಸರ್ವ್ ಬ್ಯಾಂಕಿಗೆ ವರ್ಗಾಯಿಸತಕ್ಕುದು.

**40. ಲೆಕ್ಕಪರಿಶೋಧನೆ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಲೆಕ್ಕಪತ್ರಗಳನ್ನು ಕಂಪನಿ ಅಧಿನಿಯಮ, 1956ರ 226ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸಲು ಯುಕ್ತ ಅರ್ಹತೆಯುಳ್ಳ ಲೆಕ್ಕಪರಿಶೋಧಕರು ಪರಿಶೋಧಿಸತಕ್ಕುದು ಮತ್ತು ಅವರನ್ನು ರಿಸರ್ವ್‌ಬ್ಯಾಂಕ್ ನಿಗದಿಪಡಿಸಬಹುದಾದಂಥ ಅವಧಿಗೆ ಮತ್ತು ಅಂಥ ಸಂಭಾವನೆಯ ಮೇಲೆ ಆ ಬ್ಯಾಂಕು ನೇಮಕ ಮಾಡತಕ್ಕುದು.

(2) ಲೆಕ್ಕ ಪರಿಶೋಧಕರಿಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವಾರ್ಷಿಕ ಸಂತುಲನ ಪತ್ರದ ಒಂದು ಪ್ರತಿಯನ್ನು ಒದಗಿಸತಕ್ಕುದು ಮತ್ತು ಅದನ್ನು ಲೆಕ್ಕಪತ್ರಗಳು ಮತ್ತು ಅವುಗಳಿಗೆ ಸಂಬಂಧಿಸಿದ ವೋಚರುಗಳೊಂದಿಗೆ ಪರಿಶೀಲಿಸುವುದು ಅವರ ಕರ್ತವ್ಯವಾಗಿರತಕ್ಕುದು ಮತ್ತು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಇಟ್ಟುಕೊಂಡಿರುವ ಎಲ್ಲಾ ಪುಸ್ತಕಗಳ ಒಂದು ಪಟ್ಟಿಯನ್ನು ಅವರಿಗೆ ಒಪ್ಪಿಸಿರತಕ್ಕುದು ಮತ್ತು ಎಲ್ಲಾ ಸೂಕ್ತ ವೇಳೆಯಲ್ಲಿ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಪುಸ್ತಕಗಳು, ಲೆಕ್ಕಪತ್ರಗಳು, ವೋಚರುಗಳು ಮತ್ತು ಇತರ ದಸ್ತಾವೇಜುಗಳನ್ನು ಪರಿಶೀಲಿಸಲು ಅವರಿಗೆ ಅವಕಾಶವಿರತಕ್ಕುದು.

(3) ಲೆಕ್ಕಪರಿಶೋಧಕರು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ, ಮಂಡಲಿಯ ಯಾವನೇ ನಿರ್ದೇಶಕ ಅಥವಾ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಯಾವನೇ ಅಧಿಕಾರಿ ಅಥವಾ ಇತರ ನೌಕರನನ್ನು ಪರೀಕ್ಷಿಸಬಹುದು ಮತ್ತು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಮಂಡಲಿ ಅಥವಾ ಅಧಿಕಾರಿಗಳು ಅಥವಾ ಇತರ ನೌಕರರನ್ನು ತಮ್ಮ ಕರ್ತವ್ಯಗಳ ನಿರ್ವಹಣೆಗೆ ಅವಶ್ಯವೆಂದು ಲೆಕ್ಕ ಪರಿಶೋಧಕರು ಭಾವಿಸಬಹುದಾದಂಥ ಮಾಹಿತಿಯನ್ನು ಮತ್ತು ವಿವರಣೆಯನ್ನು ಒದಗಿಸುವಂತೆ ಅಗತ್ಯಪಡಿಸಲು ಹಕ್ಕುಳ್ಳವರಾಗಿರತಕ್ಕುದು.

(4) ಲೆಕ್ಕಪರಿಶೋಧಕರು, ತಾವು ಪರಿಶೀಲಿಸಿದ ವಾರ್ಷಿಕ ಆಯವ್ಯಯಪಟ್ಟಿ ಮತ್ತು ಲೆಕ್ಕಪತ್ರಗಳ ಕುರಿತು ಒಂದು ವರದಿಯನ್ನು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸಲ್ಲಿಸತಕ್ಕುದು, ಮತ್ತು ಅಂಥ ಪ್ರತಿಯೊಂದು ವರದಿಯಲ್ಲಿ, ಅವರ ಅಭಿಪ್ರಾಯದಲ್ಲಿ ಆಯವ್ಯಯ ಪಟ್ಟಿಯು ಎಲ್ಲ ಅವಶ್ಯಕ ವಿವರಗಳನ್ನೊಳಗೊಂಡಿದ್ದು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಸ್ಥಿತಿಗತಿಗಳ ನಿಜವಾದ ಮತ್ತು ಸರಿಯಾದ ಚಿತ್ರವನ್ನು ತೋರಿಸುವ ಹಾಗೆ ಯುಕ್ತವಾದ ರೀತಿಯಲ್ಲಿ ತಯಾರಿಸಲಾದ ಪೂರ್ಣ ಮತ್ತು

ಸರಿಯಾದ ಸಂತುಲನ ಪತ್ರವಾಗಿರುವುದೇ ಮತ್ತು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಮಂಡಲಿ ಅಥವಾ ಯಾವನೇ ಅಧಿಕಾರಿ ಅಥವಾ ಇತರ ನಿಯೋಜಿತನಿಂದ ಯಾವುದೇ ವಿವರಣೆಯನ್ನು ಅಥವಾ ಮಾಹಿತಿಯನ್ನು ಕೇಳಿದ್ದ ಸಂದರ್ಭದಲ್ಲಿ, ಅದನ್ನು ಸಲ್ಲಿಸಲಾಗಿದೆಯೇ ಮತ್ತು ಅದು ತೃಪ್ತಿಕರವಾಗಿದೆಯೇ ಎಂಬುದನ್ನು ಅವರು ತಿಳಿಸತಕ್ಕುದು.

(5) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವಾರ್ಷಿಕ ಲೆಕ್ಕಪತ್ರಗಳನ್ನು ಮುಕ್ತಾಯಗೊಳಿಸಿ ಸರಿದೂಗಿಸಿದ ದಿನಾಂಕದಿಂದ ಮೂರು ತಿಂಗಳ ಒಳಗೆ, ಕೇಂದ್ರ ಸರ್ಕಾರಕ್ಕೆ ಮತ್ತು ರಿಸರ್ವ್ ಬ್ಯಾಂಕಿಗೆ, ವರ್ಷದ ಲಾಭ ಮತ್ತು ನಷ್ಟದ ಲೆಕ್ಕಗಳ ಪ್ರತಿಯೊಂದಿಗೆ ಸಂಬಂಧಪಟ್ಟ ವರ್ಷದ ಮುಕ್ತಾಯದಂದು ಇದ್ದ ಅದರ ಸಂತುಲನ ಪತ್ರದ ಒಂದು ಪ್ರತಿ ಮತ್ತು ಲೆಕ್ಕ ಪರಿಶೋಧಕರ ವರದಿಯ ಒಂದು ಪ್ರತಿ ಮತ್ತು ಆ ವರ್ಷದ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಕೆಲಸದ ವರದಿಯೊಂದನ್ನು ಕಳುಹಿಸತಕ್ಕುದು ಮತ್ತು ಕೇಂದ್ರ ಸರ್ಕಾರವು ತಾನು ಅವುಗಳನ್ನು ಸ್ವೀಕರಿಸಿದ ಕೂಡಲೇ ಆದಷ್ಟು ಬೇಗನೆ ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕುದು.

(6) ಹಿಂದಿನ ಉಪ-ಪ್ರಕರಣಗಳಲ್ಲಿ ಒಳಗೊಂಡಿರುವ ಯಾವುದೇ ವಿಷಯಕ್ಕೆ ಬಾಧಕವಾಗದಂತೆ, ಕೇಂದ್ರ ಸರ್ಕಾರವು, ಯಾವುದೇ ಸಮಯದಲ್ಲಿ, ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಲೆಕ್ಕಪತ್ರಗಳನ್ನು ಪರಿಶೀಲಿಸಿ ಅವುಗಳ ಬಗ್ಗೆ ವರದಿ ಮಾಡುವುದಕ್ಕೆ ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನನ್ನು ನೇಮಕ ಮಾಡಬಹುದು ಮತ್ತು ಅಂತಹ ಪರಿಶೀಲನೆ ಮತ್ತು ವರದಿಯ ಸಂಬಂಧವಾಗಿ ಅವನು ವಹಿಸಿದ ಯಾವುದೇ ವೆಚ್ಚವನ್ನು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನಿಗೆ ಸಂದಾಯಮಾಡತಕ್ಕುದು.

**41. ವಿವರ ಪಟ್ಟಿಕೆಗಳು.**- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ರಿಸರ್ವ್ ಬ್ಯಾಂಕು ಅಗತ್ಯಪಡಿಸಬಹುದಾದಂತಹ ಮಾಹಿತಿಗಳು ಮತ್ತು ರಿಟರ್ನುಗಳನ್ನು ರಿಸರ್ವ್ ಬ್ಯಾಂಕಿಗೆ ಕಾಲಕಾಲಕ್ಕೆ ಒದಗಿಸತಕ್ಕುದು.

**42. ಗೃಹನಿರ್ಮಾಣ ಕುರಿತು ವಾರ್ಷಿಕ ವರದಿ.**- ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ದೇಶದಲ್ಲಿನ ಗೃಹ ನಿರ್ಮಾಣದ ಪ್ರವೃತ್ತಿ ಮತ್ತು ಪ್ರಗತಿಯ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕಿಗೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕುದು ಮತ್ತು ಆ ವರದಿಯಲ್ಲಿ, ಗೃಹ ನಿರ್ಮಾಣ ಅಭಿವೃದ್ಧಿಗಾಗಿ ಅದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸುವ ಸಲಹೆಗಳನ್ನು ನೀಡತಕ್ಕುದು ಮತ್ತು ಕೇಂದ್ರ ಸರ್ಕಾರವು, ಅದು ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗ ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕುದು.

## ಅಧ್ಯಾಯ - VII

### ಸಂಕೀರ್ಣ

**43. ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಸಿಬ್ಬಂದಿ ವರ್ಗ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಅದರ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಅದು ಅವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ಪರಿಗಣಿಸಬಹುದಾದಷ್ಟು ಜನ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಬಹುದು ಮತ್ತು ಅವರ ನೇಮಕಾತಿಯ ಮತ್ತು ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳನ್ನು ನಿರ್ಧರಿಸಬಹುದು.

(2) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದ ಇತರ ಸದಸ್ಯರ ಕರ್ತವ್ಯಗಳು ಮತ್ತು ನಡತೆ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅವರ ಪ್ರಯೋಜನಕ್ಕಾಗಿ ಭವಿಷ್ಯನಿಧಿ ಅಥವಾ ಯಾವುದೇ ಇತರ ನಿಧಿಯ ಸ್ಥಾಪನೆ ಮತ್ತು ನಿರ್ವಹಣೆ ಇವು ನಿಯಮಿಸಬಹುದಾದಂತೆ ಇರತಕ್ಕುದು.

(3) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಗೃಹನಿರ್ಮಾಣ ಹಣಕಾಸು ಸಂಸ್ಥೆಯೂ ಸೇರಿದಂತೆ ಯಾವುದೇ ಸಂಸ್ಥೆಗೆ ಅದು ನಿರ್ಧರಿಸಬಹುದಾದಂಥ ಅವಧಿಗೆ ಮತ್ತು ಅಂಥ ನಿಬಂಧನೆ ಮತ್ತು

ಷರತ್ತುಗಳ ಮೇಲೆ ಅದರ ಸಿಬ್ಬಂದಿ ವರ್ಗದ ಯಾವನೇ ಅಧಿಕಾರಿಯನ್ನು ಅಥವಾ ಯಾವನೇ ಸದಸ್ಯನನ್ನು ಪ್ರತಿಯೋಜಿಸಬಹುದು.

(4) ಈ ಪ್ರಕರಣದಲ್ಲಿ ಇರುವುದು ಯಾವುದೂ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ, ಅದರ ಸಿಬ್ಬಂದಿ ವರ್ಗದ ಯಾವನೇ ಅಧಿಕಾರಿ ಅಥವಾ ಸದಸ್ಯನನ್ನು, ಅಂತಹ ನಿಯೋಜನೆಯ ನಿಕಟಪೂರ್ವದಲ್ಲಿ ಅವರು ಯಾವ ಸಂಬಳ, ಉಪಲಬ್ಧಿಗಳು ಅಥವಾ ಇತರ ನಿಬಂಧನೆ ಮತ್ತು ಷರತ್ತುಗಳಿಗೆ ಹಕ್ಕುಳ್ಳವರಾಗಿದ್ದರೋ ಅವುಗಳಿಗಿಂತ ಕಡಿಮೆಯಾಗಿರುವ ಅಥವಾ ಕಡಿಮೆ ಅನುಕೂಲಕರವಾಗಿರುವಂಥ ಯಾವುದೇ ಸಂಬಳ, ಉಪಲಬ್ಧಿಗಳು ಅಥವಾ ಇತರ ನಿಬಂಧನೆ ಮತ್ತು ಷರತ್ತುಗಳ ಮೇಲೆ ಪ್ರತಿಯೋಜಿಸಲು ಅಧಿಕಾರ ನೀಡತಕ್ಕದ್ದಲ್ಲ.

(5) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು, ಭಾರತ ರಿಸರ್ವ್ ಬ್ಯಾಂಕು ಅಧಿನಿಯಮ, 1934ರ 54ಎಎ ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಹಿತದೃಷ್ಟಿಯಿಂದ ಅದು ಅವಶ್ಯವೆಂದು ಭಾವಿಸಬಹುದಾದಂತಹ ಅವಧಿಗೆ ಮತ್ತು ಅಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯೂ ಸೇರಿದಂತೆ ಯಾವುದೇ ಸಂಸ್ಥೆಯಿಂದ ಯಾವನೇ ಅಧಿಕಾರಿ ಅಥವಾ ಇತರ ನೌಕರನನ್ನು ಪ್ರತಿನಿಯೋಜನೆಯ ಮೇಲೆ ಸ್ವೀಕರಿಸಬಹುದು ಅಥವಾ ತೆಗೆದುಕೊಳ್ಳಬಹುದು.

**43ಎ. ಅಧಿಕಾರಗಳ ಪ್ರತ್ಯಾಯೋಜನೆ.**- ಮಂಡಲಿಯು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಾವುವಾದರೂ ಇದ್ದರೆ, ಅಂತಹವುಗಳಿಗೊಳಪಟ್ಟು, ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರಿಗೆ ಅಥವಾ ಅಧಿಕಾರಿಗಳಿಗೆ, ಈ ಅಧಿನಿಯಮದ ಮೇರೆಗೆ ಅಗತ್ಯವೆಂದು ತಾನು ಭಾವಿಸಬಹುದಾದಂಥ ತನ್ನ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಪ್ರತ್ಯಾಯೋಜಿಸಬಹುದು.

**44. ನಂಬಿಕೆ ಮತ್ತು ರಹಸ್ಯಕ್ಕೆ ಸಂಬಂಧಿಸಿದ ಹೊಣೆಗಾರಿಕೆ.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿಂದ ಅನ್ಯಥಾ ಅಗತ್ಯಪಡಿಸಲಾದಂತೆ ಹೊರತು, ಕಾನೂನು ಅಥವಾ ಪದ್ಧತಿ ಮತ್ತು ಬ್ಯಾಂಕರುಗಳಲ್ಲಿ ವಾಡಿಕೆಯಲ್ಲಿರುವ ಪದ್ಧತಿ ಮತ್ತು ರೂಢಿಗಳ ಅನುಸಾರ ಅದು ಇರತಕ್ಕಂಥ ಸಂದರ್ಭದ ಹೊರತು, ಅದರ ಕಾರ್ಯಕಲಾಪಗಳು, ಅದರ ರಚನೆಗೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಅಂಥ ಮಾಹಿತಿಯ ಬಹಿರಂಗಪಡಿಸುವಿಕೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಅವಶ್ಯವಿದ್ದ ಅಥವಾ ಯುಕ್ತವಾಗಿದ್ದ ಹೊರತು ಹೊರಗೆಡಹತಕ್ಕುದಲ್ಲ.

(2) ಈ ಅಧಿನಿಯಮದ ಉಪಬಂಧಗಳ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಥವಾ ರಿಸರ್ವ್ ಬ್ಯಾಂಕಿನ ಯಾವ ನಿರ್ದೇಶಕ, ಸಮಿತಿಯ ಸದಸ್ಯ, ಲೆಕ್ಕಪರಿಶೋಧಕ, ಸಲಹೆಗಾರ, ಅಧಿಕಾರಿ ಅಥವಾ ಇತರ ನೌಕರನ ಸೇವೆಗಳನ್ನು ಬಳಸಿಕೊಂಡಿರುವುದೋ ಅಂಥವರಲ್ಲಿ ಪ್ರತಿಯೊಬ್ಬನು ತನ್ನ ಕರ್ತವ್ಯಕ್ಕೆ ಹಾಜರಾಗುವ ಮೊದಲು ಈ ಅಧಿನಿಯಮದ ಪ್ರಥಮ ಅನುಸೂಚಿಯಲ್ಲಿ ನಮೂದಿಸಿದ ನಮೂನೆಯಲ್ಲಿ ನಂಬಿಕೆ ಮತ್ತು ರಹಸ್ಯದ ಘೋಷಣೆಯನ್ನು ಮಾಡತಕ್ಕುದು.

**45. ನೇಮಕಾತಿಯಲ್ಲಿನ ನ್ಯೂನತೆಗಳು, ಕೃತ್ಯಗಳು ಮುಂತಾದವುಗಳನ್ನು ಅಸಿಂಧುಗೊಳಿಸದಿರುವುದು.**- (1) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಮಂಡಲಿಯ ಅಥವಾ ಅದರ ಯಾವುದೇ ಸಮಿತಿಯ ಯಾವುದೇ ಕೃತ್ಯ ಅಥವಾ ವ್ಯವಹರಣೆಯನ್ನು ಮಂಡಲಿ ಅಥವಾ ಸಂದರ್ಭಾನುಸಾರ ಸಮಿತಿಯಲ್ಲಿ ಯಾವುದೇ ಹುದ್ದೆಯು ಖಾಲಿ ಇರುವುದೆಂಬ ಅಥವಾ ಅದರ ರಚನೆಯಲ್ಲಿನ ನ್ಯೂನತೆಯ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕುದಲ್ಲ.

(2) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಮಂಡಲಿಯ ನಿರ್ದೇಶಕನಾಗಿ ಅಥವಾ ಸಮಿತಿಯ ಸದಸ್ಯನಾಗಿ ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯು ಮಾಡಿದ ಯಾವುದೇ ಕೃತ್ಯವು ಆ ವ್ಯಕ್ತಿಯು ನಿರ್ದೇಶಕನಾಗಿರಲು ಅನರ್ಹನಾಗಿದ್ದನೆಂಬ ಅಥವಾ ಅವನ ನೇಮಕಾತಿಯಲ್ಲಿ ಯಾವುದೇ ಇತರ ನ್ಯೂನತೆ ಇದ್ದಿತ್ತೆಂಬ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕುದಲ್ಲ.

**45ಎ. ನಿರ್ದೇಶಕರ ನೇಮಕವಾದಾಗ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನಲ್ಲಿರುವ ವ್ಯವಸ್ಥೆ ಚಾಲ್ತಿಯಲ್ಲಿರುವುದು.**- (1) ಕಂಪನಿಯಾಗಿರುವ ಗೃಹನಿರ್ಮಾಣ ಹಣಕಾಸು ಸಂಸ್ಥೆಯೊಂದಿಗೆ, ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಮಾಡಿಕೊಂಡಿರುವ ಯಾವುದೇ ವ್ಯವಸ್ಥೆಯಲ್ಲಿ, ಅಂಥ ಗೃಹನಿರ್ಮಾಣ ಹಣಕಾಸು ಸಂಸ್ಥೆಯ ಒಬ್ಬ ಅಥವಾ ಹೆಚ್ಚು ನಿರ್ದೇಶಕರನ್ನು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ನೇಮಕ ಮಾಡಲು ಅವಕಾಶ ಕಲ್ಪಿಸಿದ್ದರೆ, ಅಂಥ ಅವಕಾಶವು ಮತ್ತು ಅದರ್ಕನುಸಾರವಾಗಿ ಮಾಡಿದ ನಿರ್ದೇಶಕರ ಯಾವುದೇ ನೇಮಕಾತಿಯು, ಕಂಪನಿಗಳ ಅಧಿನಿಯಮ, 1956 (1956ರ 1)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಬ್ಯಾಂಕ್ ಸ್ಥಾಪನಾ ವಿವರಣ ಪತ್ರದಲ್ಲಿ, ನಿಯಮಾವಳಿಗಳಲ್ಲಿ ಅಥವಾ ಆ ಗೃಹನಿರ್ಮಾಣ ಹಣಕಾಸು ಸಂಸ್ಥೆಗೆ ಸಂಬಂಧಪಟ್ಟ ಯಾವುದೇ ಇತರ ಲಿಖಿತದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಷೇರು ಅರ್ಹತೆ, ವಯೋಮಿತಿ, ನಿರ್ದೇಶಕ - ಪರ್ದಗಳ ಸಂಖ್ಯೆ ನಿರ್ದೇಶಕರನ್ನು ಪದದಿಂದ ತೆಗೆದುಹಾಕುವಿಕೆ - ಇವುಗಳಿಗೆ ಸಂಬಂಧಿಸಿದ ಯಾವುದೇ ಉಪಬಂಧವು ಮತ್ತು ಯಾವುದೇ ಅಂಥ ಕಾನೂನಿನಲ್ಲಿ ಅಥವಾ ಸದರಿ ಲಿಖಿತದಲ್ಲಿ ಒಳಗೊಂಡಂತಹ ಅದೇ ರೀತಿಯ ಷರತ್ತುಗಳು ಸದರಿ ವ್ಯವಸ್ಥೆಯ ಅನುಸಾರ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ನೇಮಕ ಮಾಡಿದ ಯಾರೇ ನಿರ್ದೇಶಕನಿಗೆ ಅನ್ವಯವಾಗತಕ್ಕದ್ದಲ್ಲ.

(2) ಮೇಲೆ ಹೇಳಿದಂತೆ ನೇಮಕವಾದ ಯಾರೇ ನಿರ್ದೇಶಕನು-

(ಎ) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು ಮತ್ತು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಲಿಖಿತ ಆದೇಶದ ಮೂಲಕ ತೆಗೆದುಹಾಕಬಹುದು ಅಥವಾ ಯಾರೇ ವ್ಯಕ್ತಿಯನ್ನು ಪ್ರತಿನಿಯೋಜಿಸಬಹುದು.

(ಬಿ) ತಾನು ನಿರ್ದೇಶಕನಾಗಿರುವ ಒಂದೇ ಕಾರಣಕ್ಕಾಗಿ ಅಥವಾ ನಿರ್ದೇಶಕನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡದೆ ಬಿಟ್ಟ ಯಾವುದೇ ಕಾರ್ಯಕ್ಕಾಗಿ ಅಥವಾ ಅದಕ್ಕೆ ಸಬಂಧಪಟ್ಟ ಯಾವುದೇ ಕೃತ್ಯಕ್ಕಾಗಿ ಯಾವುದೇ ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು ವಹಿಸಿಕೊಳ್ಳತಕ್ಕದ್ದಲ್ಲ;

(ಸಿ) ಸರದಿಯಂತೆ ನಿವೃತ್ತಿಗೆ ಗುರಿಯಾಗತಕ್ಕದ್ದಲ್ಲ ಮತ್ತು ಅಂಥ ನಿವೃತ್ತಿಗೆ ಗುರಿಯಾಗಬಹುದಾದ ನಿರ್ದೇಶಕರುಗಳ ಸಂಖ್ಯೆಯನ್ನು ಗಣನೆ ಮಾಡುವಾಗ ಅವನನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**46. ಈ ಅಧಿನಿಯಮದ ಮೇರೆಗೆ ಕೈಕೊಳ್ಳಲಾದ ಕ್ರಮಕ್ಕೆ ರಕ್ಷಣೆ.**- ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಅಥವಾ ಕಾನೂನಿನ ಬಲವಿರುವ ಯಾವುದೇ ಉಪಬಂಧದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬಯಸಿದ ಯಾವುದೇ ಕೃತ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ನಷ್ಟ ಅಥವಾ ಹಾನಿಯ ಬಗ್ಗೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಥವಾ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಯಾವನೇ ನಿರ್ದೇಶಕ ಅಥವಾ ಯಾವನೇ ಅಧಿಕಾರಿ ಅಥವಾ ಇತರ ನೌಕರ ಅಥವಾ ಈ ಅಧಿನಿಯಮದ ಮೇರೆಗೆ ಯಾವುದೇ ಕಾರ್ಯನಿರ್ವಹಣೆಗಾಗಿ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನಿಂದ ಅಧಿಕೃತನಾದ ಯಾವನೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗೆ ಅವಕಾಶವಿರತಕ್ಕುದಲ್ಲ.

**47. ನಿರ್ದೇಶಕರಿಗೆ ನಷ್ಟಭರ್ತಿ.**- (1) ಪ್ರತಿಯೊಬ್ಬ ನಿರ್ದೇಶಕನಿಗೆ, ಅವನ ಸ್ವಯಿಚ್ಛೆಯ ಕಾರ್ಯದಿಂದ ಅಥವಾ ತಪ್ಪಿನಿಂದಾಗಿ ಉಂಟಾದ ನಷ್ಟಗಳು ಮತ್ತು ವೆಚ್ಚಗಳನ್ನು ಹೊರತುಪಡಿಸಿ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ನಿರ್ವಹಣೆಗೆ ಸಂಬಂಧಿಸಿದಂತೆ ಅವನಿಂದ ಉಂಟಾದ ಇತರ ಎಲ್ಲಾ ನಷ್ಟಗಳು ಮತ್ತು ವೆಚ್ಚಗಳ ಸಂಬಂಧದಲ್ಲಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ನಷ್ಟಭರ್ತಿ ಒದಗಿಸತಕ್ಕುದು.

(2) ನಿರ್ದೇಶಕನು, ಯಾವನೇ ಇತರ ನಿರ್ದೇಶಕನಿಗೆ ಅಥವಾ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಯಾವನೇ ಅಧಿಕಾರಿ ಅಥವಾ ಇತರ ನೌಕರನಿಗೆ ಅಥವಾ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಪರವಾಗಿ ಆರ್ಜಿಸಲಾದ ಅಥವಾ ತೆಗೆದುಕೊಳ್ಳಲಾದ ಯಾವುದೇ ಸ್ವತ್ತಿನ ಅಥವಾ ಭದ್ರತೆಯ

ಮೌಲ್ಯವು ಅಥವಾ ಹಕ್ಕು ಸಾಕಷ್ಟಿಲ್ಲದಿರುವುದರಿಂದ ಅಥವಾ ಕೊರತೆಯಾಗಿರುವುದರಿಂದ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಉಂಟಾಗುವ ಯಾವುದೇ ನಷ್ಟ ಅಥವಾ ವೆಚ್ಚದ ಬಗ್ಗೆ ಅಥವಾ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಋಣದಲ್ಲಿರುವ ಯಾವನೇ ಋಣಿಯ ಅಥವಾ ಯಾವನೇ ವ್ಯಕ್ತಿಯ ದಿವಾಳಿ ಅಥವಾ ತಪ್ಪು ಕೃತ್ಯದ ಬಗ್ಗೆ ಅಥವಾ ಅದಕ್ಕೆ ಸಂಬಂಧಿಸಿದಂತೆ ಅವನ ಪದದ ಕರ್ತವ್ಯಗಳ ನಿರ್ವಹಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಯಾವುದೇ ಕೃತ್ಯಗಳ ಬಗ್ಗೆ ಹೊಣೆಗಾರನಾಗತಕ್ಕುದಲ್ಲ.

**47ಎ. ಠೇವಣಿಗಳು, ಬಾಂಡುಗಳು, ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ನಾಮನಿರ್ದೇಶನ.**- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೇ ಠೇವಣಿ, ಬಾಂಡುಗಳು ಅಥವಾ ಇತರ ಭದ್ರತೆಗಳಿಗೆ ಸಂಬಂಧಿಸಿದಂತೆ ನಾಮನಿರ್ದೇಶನವನ್ನು ನಿಯಮಿತ ರೀತಿಯಲ್ಲಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸಲ್ಲಿಸಿದ್ದರೆ, ಅಂಥ ಠೇವಣಿಗಳು, ಬಾಂಡುಗಳು ಅಥವಾ ಭದ್ರತೆಗಳ ಮೇಲೆ ಬಾಕಿಯಿರುವ ಮೊತ್ತವು, ಠೇವಣಿದಾರ ಅಥವಾ ಅದರ ಧಾರಕನು ಮರಣ ಹೊಂದಿದಾಗ, ಅಂಥ ಠೇವಣಿಗಳು, ಬಾಂಡುಗಳು ಅಥವಾ ಭದ್ರತೆಗಳಿಗೆ ಯಾವನೇ ಬೇರೊಬ್ಬ ವ್ಯಕ್ತಿಯ ಯಾವುದೇ ಹಕ್ಕಿಗೆ, ಸ್ವಾಮ್ಯಕ್ಕೆ ಅಥವಾ ಹಿತಾಸಕ್ತಿಗೆ ಒಳಪಟ್ಟು ನಾಮನಿರ್ದೇಶಿತನಲ್ಲಿ ನಿಹಿತವಾಗತಕ್ಕದ್ದು ಮತ್ತು ನಾಮನಿರ್ದೇಶಿತನಿಗೆ ಸಂದಾಯವಾಗುವಂಥದ್ದಾಗಿರತಕ್ಕದ್ದು.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಮಾಡಿದ ಯಾವುದೇ ಸಂದಾಯವು, ಅಂಥ ಠೇವಣಿಗಳು, ಬಾಂಡುಗಳು ಅಥವಾ ಭದ್ರತೆಗಳಿಗೆ ಸಂಬಂಧಪಟ್ಟಂತೆ ಅದರ ಹೊಣೆಗಾರಿಕೆಯ ಸಂಪೂರ್ಣ ವಿಮೋಚನೆಯಾಗಿರತಕ್ಕದ್ದು.

**48. ವರಮಾನ ತೆರಿಗೆಯಿಂದ ವಿನಾಯಿತಿ.**- ವರಮಾನ ತೆರಿಗೆ ಅಧಿನಿಯಮ, 1961 ರಲ್ಲಿ ಅಥವಾ ವರಮಾನ, ಲಾಭ ಅಥವಾ ಗಳಿಕೆಗಳ ಮೇಲಣ ತೆರಿಗೆಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯಲ್ಲಿ ಏನೇ ಇದ್ದರೂ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಅದರ ವರಮಾನ, ಲಾಭ ಅಥವಾ ಒದಗಿಬಂದ ಗಳಿಕೆಯ ಮೇಲೆ ವರಮಾನ ತೆರಿಗೆ ಅಥವಾ ಯಾವುದೇ ಇತರ ತೆರಿಗೆಯನ್ನು ಸಂದಾಯ ಮಾಡಲು ಬದ್ಧವಾಗತಕ್ಕುದಲ್ಲ.

**49. ದಂಡಗಳು.**- (1) ಈ ಅಧಿನಿಯಮದ ಯಾವುದೇ ಉಪಬಂಧದಿಂದ ಅಥವಾ ಅದರ ಮೇರೆಗೆ ಅಥವಾ ಅದರ ಯಾವುದೇ ಉದ್ದೇಶಗಳಿಗಾಗಿ ಅಗತ್ಯಪಡಿಸಿದ ಅಥವಾ ಒದಗಿಸಲಾದ ಯಾವುದೇ ವಿವರಪಟ್ಟಿ, ಸಂತುಲನ ಪತ್ರ ಅಥವಾ ಇತರ ದಸ್ತಾವೇಜು ಅಥವಾ ಯಾವುದೇ ಮಾಹಿತಿಯಲ್ಲಿ ಯಾವುದೇ ಮುಖ್ಯ ವಿವರದಲ್ಲಿ ಸುಳ್ಳಾಗಿರುವುದೆಂದು ತಿಳಿದಿದ್ದೂ, ಸುಳ್ಳಾಗಿರುವ ವಿವರಣೆಯನ್ನು ಉದ್ದೇಶಪೂರ್ವಕವಾಗಿ ಮಾಡುವ ಅಥವಾ ಉದ್ದೇಶಪೂರ್ವಕವಾಗಿ ಮುಖ್ಯ ಹೇಳಿಕೆಯನ್ನು ಮಾಡಲು ಲೋಪಿಸುವ ಯಾರೇ ಆಗಲಿ ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯರಾಗತಕ್ಕುದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕುದು.

(2) ಯಾವನೇ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ಪುಸ್ತಕ, ಲೆಕ್ಕ ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸುವುದು ಅಥವಾ ಯಾವ ವಿವರಣೆ ಅಥವಾ ಮಾಹಿತಿಯನ್ನು ಒದಗಿಸುವುದು ಅವನ ಕರ್ತವ್ಯವಾಗಿರುವುದೋ ಅದನ್ನು ಹಾಜರುಪಡಿಸಲು ಅಥವಾ ಒದಗಿಸಲು ತಪ್ಪಿದರೆ, ಅವನು ಪ್ರತಿಯೊಂದು ಅಪರಾಧಕ್ಕೆ ಸಂಬಂಧಿಸಿ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರಿಯುತ್ತಿರುವ ಕರ್ತವ್ಯ ಲೋಪದ ಸಂದರ್ಭದಲ್ಲಿ ಅಂಥ ಪ್ರಥಮ ಕರ್ತವ್ಯ ಲೋಪದ ಬಗ್ಗೆ ಅಪರಾಧ ನಿರ್ಣಯವಾದ ತರುವಾಯ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(2ಎ) ಯಾವನೇ ವ್ಯಕ್ತಿಯು, 29ಎ ಪ್ರಕರಣದ (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು, ಒಂದು ವರ್ಷಕ್ಕಿಂತ ಕಡಿಮೆಯಾಗಿರದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಮತ್ತು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಾಗಿರದ ಅಥವಾ ಐದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2ಬಿ) ಯಾವನೇ ಲೆಕ್ಕಪರಿಶೋಧಕನು, 33ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಕೊಟ್ಟ ಯಾವುದೇ ನಿರ್ದೇಶನವನ್ನು ಅಥವಾ ಮಾಡಿದ ಆದೇಶವನ್ನು ಪಾಲಿಸಲು ತಪ್ಪಿದರೆ, ಅವನು, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2ಸಿ) ಯಾರಾದರೂ, 36ಎ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅಧಿಕೃತ ಅಧಿಕಾರಿಯು ಮಾಡಿದ ಯಾವುದೇ ಆದೇಶವನ್ನು ಪಾಲಿಸಲು ತಪ್ಪಿದರೆ, ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು ಮತ್ತು ಅಂಥ ಅನನುಪಾಲನೆ ಮುಂದುವರಿದ ಅವಧಿಯಲ್ಲಿ ಪ್ರತಿ ದಿನಕ್ಕೆ ಐವತ್ತು ರೂಪಾಯಿಗಳಿಗಿಂತ ಕಡಿಮೆಯಲ್ಲದ ಜುಲ್ಮಾನೆಗೂ ಕೂಡ ಗುರಿಯಾಗತಕ್ಕದ್ದು;

(3) ಲೆಕ್ಕಪರಿಶೋಧಕನಲ್ಲದ ಯಾರೇ ವ್ಯಕ್ತಿಯು –

(ಎ) Vನೇ ಅಧ್ಯಾಯದ ಮೇರೆಗೆ ಕೊಟ್ಟ ಯಾವುದೇ ನಿರ್ದೇಶನ ಅಥವಾ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿ ಯಾವುದೇ ಠೇವಣಿಯನ್ನು ಸ್ವೀಕರಿಸಿದರೆ; ಅಥವಾ

(ಎಎ) Vನೇ ಅಧ್ಯಾಯದ ಯಾವುದೇ ಉಪಬಂಧದ ಮೇರೆಗೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಕೊಟ್ಟ ಯಾವುದೇ ನಿರ್ದೇಶನ ಅಥವಾ ಮಾಡಿದ ಯಾವುದೇ ಆದೇಶವನ್ನು ಪಾಲಿಸಲು ತಪ್ಪಿದರೆ; ಅಥವಾ

(ಬಿ) 35ನೇ ಪ್ರಕರಣಕ್ಕೆ ಅಥವಾ ಸಂದರ್ಭಾನುಸಾರ 30ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶಕ್ಕೆ ಅನುಸಾರವಾಗಿ ಅಲ್ಲದೆ ಯಾವುದೇ ವಿವರಣಪತ್ರ ಅಥವಾ ಜಾಹೀರಾತನ್ನು ಹೊರಡಿಸಿದರೆ

–ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು, ಮತ್ತು

(i) (ಎ) ಖಂಡದ ಅಡಿಯಲ್ಲಿ ಬರುವ ಉಲ್ಲಂಘನೆಯ ಸಂದರ್ಭದಲ್ಲಿ ಸ್ವೀಕರಿಸಿದ ಠೇವಣಿಯ ಮೊಬಲಗಿನ ಎರಡು ಪಟ್ಟಿನವರೆಗೆ;ಮತ್ತು

(ii) (ಬಿ) ಖಂಡದ ಅಡಿಯಲ್ಲಿ ಬರುವ ಉಲ್ಲಂಘನೆಯ ಸಂದರ್ಭದಲ್ಲಿ ವಿವರಣ ಪತ್ರದ ಅಥವಾ ಜಾಹೀರಾತಿನ ಮೂಲಕ ಆಹ್ವಾನಿಸಲಾದ ಠೇವಣಿಯ ಮೊಬಲಗಿನ ಎರಡು ಪಟ್ಟಿನವರೆಗೆ

–ವಿಸ್ತರಿಸಬಹುದಾದ ಜುಲ್ಮಾನೆಗೂ ಗುರಿಯಾಗತಕ್ಕುದು.

(4) ಈ ಅಧಿನಿಯಮದ ಯಾವುದೇ ಇತರ ಉಪಬಂಧವನ್ನು ಉಲ್ಲಂಘಿಸಿದರೆ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶ, ವಿನಿಯಮ ಅಥವಾ ಕೊಟ್ಟ ನಿರ್ದೇಶನ ಅಥವಾ ವಿಧಿಸಿದ ಷರತ್ತನ್ನು ಪಾಲಿಸುವಲ್ಲಿ ಯಾವುದೇ ಕರ್ತವ್ಯಲೋಪ ಮಾಡಿದರೆ, ಅಂಥ ಉಲ್ಲಂಘನೆ ಅಥವಾ ಕರ್ತವ್ಯಲೋಪದ ಬಗ್ಗೆ ತಪ್ಪಿತಸ್ಥನಾದ ಯಾವನೇ ವ್ಯಕ್ತಿಯು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಆ ಉಲ್ಲಂಘನೆ ಅಥವಾ ಕರ್ತವ್ಯ ಲೋಪವು ಮುಂದುವರಿದ ಉಲ್ಲಂಘನೆ ಅಥವಾ ಕರ್ತವ್ಯ ಲೋಪವಾಗಿರುವಲ್ಲಿ, ಉಲ್ಲಂಘನೆಯು ಅಥವಾ ಕರ್ತವ್ಯ ಲೋಪವು ಮುಂದುವರಿಯುವ ಅವಧಿಯ ಮೊದಲನೇ ದಿನದ ತರುವಾಯದ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಇನ್ನಷ್ಟು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**50 ಕಂಪನಿಗಳಿಂದ ಅಪರಾಧಗಳು.**– ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಸಮಯದಲ್ಲಿ ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರದ ನಿರ್ವಹಣೆಯ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವರ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕುದು:

ಪರಂತು, ಈ ಉಪ-ಪ್ರಕರಣದಲ್ಲಿ ಇರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ಮಾಡಲಾಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಎಚ್ಚರಿಕೆ ವಹಿಸಿದ್ದೆನೆಂದು ಅಂಥ ಯಾವನೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿದೆ ಎಂದು ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ, ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕುದು ಮತ್ತು ಅವರ ವಿರುದ್ಧದ ವ್ಯವಹರಣೆಗೆ ಮತ್ತು ತದನುಸಾರವಾದ ದಂಡನೆಗೆ ಗುರಿಯಾಗಲು ಅವರು ಬದ್ಧರಾಗತಕ್ಕುದು.

**ವಿವರಣೆ:**- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ ಯಾವುದೇ ನಿಗಮ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**51. ಅಪರಾಧಗಳ ಸಂಜ್ಞಾನ.**- ಯಾವುದೇ ನ್ಯಾಯಾಲಯವು, ಈ ಸಂಬಂಧದಲ್ಲಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಸಾಮಾನ್ಯ ಅಥವಾ ವಿಶೇಷವಾಗಿ ಲಿಖಿತದ ಮೂಲಕ ಅಧಿಕೃತಗೊಳಿಸಿದ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರಿಯು ಲಿಖಿತದಲ್ಲಿ ಮಾಡಿದ ದೂರಿನ ಮೇಲೆ ಹೊರತು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಸಂಜ್ಞೇಯತೆಯನ್ನು ಕೈಗೊಳ್ಳತಕ್ಕುದಲ್ಲ ಮತ್ತು ಮಹಾನಗರ ಮ್ಯಾಜಿಸ್ಟ್ರೇಟ್‌ನ ಅಥವಾ ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯಕ್ಕೆ ಹೊರತಾದ ಯಾವುದೇ ನ್ಯಾಯಾಲಯವು ಅಥವಾ ಅದಕ್ಕಿಂತ ವರಿಷ್ಠ ನ್ಯಾಯಾಲಯವು ಅಂಥ ಯಾವುದೇ ಅಪರಾಧದ ಅಧಿವಿಚಾರಣೆ ಮಾಡತಕ್ಕುದಲ್ಲ.

(2) ದಂಡಪ್ರಕ್ರಿಯಾ ಸಂಹಿತೆ, 1973ರಲ್ಲಿ ಏನೇ ಇದ್ದರೂ, ಮ್ಯಾಜಿಸ್ಟ್ರೇಟನಿಗೆ ದೂರು ಸಲ್ಲಿಸುವ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಅಧಿಕಾರಿಯ ವೈಯಕ್ತಿಕ ಹಾಜರಾತಿಯ ಅಗತ್ಯವನ್ನು ಬಿಟ್ಟು ಬಿಡುವುದು ಸಕಾರಣವೆಂದು ಕಂಡು ಬಂದರೆ, ಅವನು ಹಾಗೆ ಮಾಡಬಹುದು, ಆದರೆ, ಮ್ಯಾಜಿಸ್ಟ್ರೇಟನು ತನ್ನ ವಿವೇಚನಾನುಸಾರ ವ್ಯವಹರಣೆಗಳ ಯಾವುದೇ ಹಂತದಲ್ಲಿ ಫಿರ್ಯಾದಿಯ ವೈಯಕ್ತಿಕ ಹಾಜರಾತಿಯ ಬಗ್ಗೆ ನಿರ್ದೇಶನ ನೀಡಬಹುದು.

**52. ಜುಲ್ಮಾನೆಯ ವಿನಿಯೋಗ.**- ಅಧಿನಿಯಮದ ಮೇರೆಗೆ ಜುಲ್ಮಾನೆಯನ್ನು ವಿಧಿಸುವ ನ್ಯಾಯಾಲಯವು, ಜುಲ್ಮಾನೆಯು ವಸೂಲಾದರೆ, ಅದನ್ನು-

(ಎ) ಮೊದಲನೆಯದಾಗಿ, ವ್ಯವಹರಣೆಗಳ ವೆಚ್ಚದ ಬಗ್ಗೆ ಅಥವಾ ಅದರ ಸಂದಾಯಕ್ಕೆ ವಿನಿಯೋಗಿಸತಕ್ಕದ್ದು; ಮತ್ತು

(ಬಿ) ಎರಡನೆಯದಾಗಿ, ಯಾವ ವ್ಯಕ್ತಿಗೆ ಠೇವಣಿಯ ಮರು ಸಂದಾಯವನ್ನು ಮಾಡಬೇಕಾಗಿತ್ತೋ, ಆ ವ್ಯಕ್ತಿಗೆ ಠೇವಣಿಯನ್ನು ಮರು ಸಂದಾಯ ಮಾಡುವುದಕ್ಕಾಗಿ ವಿನಿಯೋಗಿಸತಕ್ಕದ್ದು, ಮತ್ತು ಅಂಥ ಸಂದಾಯದ ತರುವಾಯ, ಠೇವಣಿಯ ಮರು ಸಂದಾಯವನ್ನು ಮಾಡುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಹೊಣೆಗಾರಿಕೆಯು, ನ್ಯಾಯಾಲಯವು ಸಂದಾಯ ಮಾಡಿದ ಮೊತ್ತದಷ್ಟು ಮಟ್ಟಿಗೆ, ವಿಮೋಚನೀಯವಾಗತಕ್ಕದ್ದು.

**52ಎ. ಜುಲ್ಮಾನೆಯನ್ನು ವಿಧಿಸುವುದಕ್ಕೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರ.**- (1) 49ನೇ ಪ್ರಕರಣದಲ್ಲಿ ಏನೇ ಇದ್ದರೂ, 49ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ಉಲ್ಲಂಘನೆ

ಅಥವಾ ಕರ್ತವ್ಯ ಲೋಪವನ್ನು ಕಂಪನಿಯಾಗಿರುವ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಮಾಡಿದ್ದರೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಅಂಥ ಸಂಸ್ಥೆಯ ಮೇಲೆ-

(ಎ) ಐದು ಸಾವಿರ ರೂಪಾಯಿಗಳನ್ನು ಮೀರದ ದಂಡವನ್ನು ವಿಧಿಸಬಹುದು; ಅಥವಾ

(ಬಿ) ಆ ಉಲ್ಲಂಘನೆ ಅಥವಾ ಕರ್ತವ್ಯಲೋಪವು, 49ನೇ ಪ್ರಕರಣದ (2ಎ) ಉಪ ಪ್ರಕರಣ ಅಥವಾ (3)ನೇ ಉಪ ಪ್ರಕರಣದ (ಎ) ಖಂಡ ಅಥವಾ (ಎಎ) ಖಂಡದ ಮೇರೆಗಿನದಾಗಿದ್ದಲ್ಲಿ, ಐದು ಲಕ್ಷ ರೂಪಾಯಿಗಳನ್ನು ಮೀರದ ಅಥವಾ ಅಂಥ ಉಲ್ಲಂಘನೆ ಅಥವಾ ಕರ್ತವ್ಯಲೋಪದಲ್ಲಿ ಒಳಗಾಗಿರುವ ಮೊತ್ತದ ಎರಡರಷ್ಟು ದಂಡವನ್ನು, ಆ ಮೊತ್ತವು ಗೊತ್ತುಮಾಡಬಹುದಾದ ಮೊತ್ತವಾಗಿದ್ದಲ್ಲಿ, ಯಾವುದು ಹೆಚ್ಚೋ ಅದನ್ನು, ಮತ್ತು ಅಂಥ ಎಲ್ಲ ಉಲ್ಲಂಘನೆ ಅಥವಾ ಕರ್ತವ್ಯಲೋಪವು ಮುಂದುವರಿದಲ್ಲಿ, ಉಲ್ಲಂಘನೆ ಅಥವಾ ಕರ್ತವ್ಯಲೋಪ ಮುಂದುವರಿದ ಅವಧಿಯಲ್ಲಿ ಮೊದಲನೆಯದರ ನಂತರ ಪ್ರತಿದಿನಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚಿನ ದಂಡವನ್ನು ವಿಧಿಸಬಹುದು.

(2) (1)ನೇ ಉಪ ಪ್ರಕರಣದ ಮೇರೆಗೆ ದಂಡವನ್ನು ವಿಧಿಸುವ ಉದ್ದೇಶಕ್ಕಾಗಿ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು, ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ಮೇಲೆ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಯಾಕೆ ದಂಡವಾಗಿ ವಿಧಿಸಬಾರದು ಎಂಬ ಕಾರಣವನ್ನು ತೋರಿಸುವಂತೆ ಅಗತ್ಯಪಡಿಸುವ ಒಂದು ನೋಟೀಸನ್ನು ಜಾರಿ ಮಾಡತಕ್ಕದ್ದು ಮತ್ತು ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಒಂದು ಯುಕ್ತ ಅವಕಾಶವನ್ನು ಕೂಡ ಕೊಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ವಿಧಿಸಿದ ಯಾವುದೇ ದಂಡವು , ಮೊಬಲಗನ್ನು ಸಂದಾಯ ಮಾಡುವಂತೆ ಅಗತ್ಯಪಡಿಸಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಹೊರಡಿಸಿದ ನೋಟೀಸನ್ನು ಯಾವ ದಿನಾಂಕದಿಂದ ಜಾರಿ ಮಾಡಲಾಯಿತೋ, ಆ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಸಂದಾಯವಾಗತಕ್ಕದ್ದು ಮತ್ತು ಆ ಮೊಬಲಗನ್ನು ಅಂಥ ಅವಧಿಯೊಳಗೆ ಸಂದಾಯ ಮಾಡುವುದಕ್ಕೆ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ವಿಫಲವಾದ ಸಂದರ್ಭದಲ್ಲಿ, ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ನೋಂದಾಯಿತ ಕಛೇರಿ ಅಥವಾ ಪ್ರಧಾನ ಕಚೇರಿ ಎಲ್ಲಿರುವುದೋ ಆ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪ್ರಧಾನ ಸಿವಿಲ್ ನ್ಯಾಯಾಲಯವು ನೀಡಿದ ನಿರ್ದೇಶನದ ಮೇಲೆ ವಸೂಲಿ ಮಾಡಬಹುದು:

ಪರಂತು, ಅಂಥ ನಿರ್ದೇಶನವನ್ನು, ಈ ಬಗ್ಗೆ ಅಧಿಕೃತಗೊಳಿಸಲಾದ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರಿಯು ಪ್ರಧಾನ ಸಿವಿಲ್ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದ ಹೊರತು, ನೀಡತಕ್ಕದ್ದಲ್ಲ.

(4) (3) ನೇ ಉಪ-ಪ್ರಕರಣದ ಮೇರೆಗೆ ನಿರ್ದೇಶನವನ್ನು ನೀಡುವ ನ್ಯಾಯಾಲಯವು, ಗೃಹ ನಿರ್ಮಾಣ ಹಣಕಾಸು ಸಂಸ್ಥೆಯು ಸಂದಾಯ ಮಾಡಬೇಕಾದ ಮೊಬಲಗನ್ನು ನಿರ್ದಿಷ್ಟಪಡಿಸಿದ ಒಂದು ಪ್ರಮಾಣಪತ್ರವನ್ನು ಹೊರಡಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪ್ರಮಾಣಪತ್ರವು, ನ್ಯಾಯಾಲಯವು ಸಿವಿಲ್ ದಾವೆಯಲ್ಲಿ ಡಿಕ್ರಿಯನ್ನು ಹೊರಡಿಸಿದ್ದರೆ ಹೇಗೋ ಹಾಗೆ ಜಾರಿಯಾಗತಕ್ಕದ್ದು.

(5) ಈ ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಯಾವುದೇ ದಂಡವನ್ನು ವಿಧಿಸಿದ್ದಕ್ಕೆ ಸಂಬಂಧಿಸಿದ ಯಾವುದೇ ದಂಡನೆಗೆ ಸಂಬಂಧಪಟ್ಟಂತೆ ಯಾವುದೇ ಉಲ್ಲಂಘನೆಗೆ ಅಥವಾ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವಿರುದ್ಧ ದೂರನ್ನು ದಾಖಲ್ಮಾಡತಕ್ಕದ್ದಲ್ಲ.

(6) 49ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ಉಲ್ಲಂಘನೆ ಅಥವಾ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದೇ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವಿರುದ್ಧ ಯಾವುದೇ ದೂರನ್ನು ದಾಖಲ್ಮಾಡಿದಲ್ಲಿ, ಗೃಹ ನಿರ್ಮಾಣ ಹಣಕಾಸು ಸಂಸ್ಥೆಯ ವಿರುದ್ಧ ದಂಡವನ್ನು ವಿಧಿಸುವ ಬಗೆಗಿನ ಯಾವ ವ್ಯವಹರಣೆಗಳನ್ನೂ ಈ ಅಧಿನಿಯಮದ ಮೇರೆಗೆ ಕೈಗೊಳ್ಳತಕ್ಕದ್ದಲ್ಲ.

**53. ಬ್ಯಾಂಕರುಗಳ ಪುಸ್ತಕಗಳ ಸಾಕ್ಷ್ಯ ಅಧಿನಿಯಮ, 1891ರ 18 - ಇದು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸಂಬಂಧದಲ್ಲಿ ಅನ್ವಯವಾಗತಕ್ಕುದು.**- ಬ್ಯಾಂಕರರ ಪುಸ್ತಕಗಳ ಸಾಕ್ಷ್ಯ ಅಧಿನಿಯಮ,

1891 ಇದು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಸಂಬಂಧದಲ್ಲಿ, ಅದು ಆ ಅಧಿನಿಯಮದ 2ನೇ ಪ್ರಕರಣದಲ್ಲಿ ಪರಿಭಾಷಿಸಿದ ಬ್ಯಾಂಕು ಆಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು.

**54. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸಮಾಪನೆ.**- ಕಂಪನಿಗಳ ಪರಿಸಮಾಪನೆಗೆ ಸಂಬಂಧಿಸಿದ ಕಾನೂನಿನ ಯಾವುದೇ ಉಪಬಂಧವು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಅನ್ವಯವಾಗತಕ್ಕುದಲ್ಲ ಮತ್ತು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕನ್ನು, ಕೇಂದ್ರ ಸರ್ಕಾರದ ಆದೇಶದಿಂದ ಮತ್ತು ಅದು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಹೊರತು ಸಮಾಪನೆಗೊಳಿಸತಕ್ಕುದಲ್ಲ.

54ಎ. ನಿಯಮಗಳನ್ನು ರಚಿಸುವ ಅಧಿಕಾರ.- (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲ ವಿಷಯಗಳಿಗೂ ಅಥವಾ ಯಾವುದೇ ವಿಷಯಕ್ಕೂ ಉಪಬಂಧಿಸಬಹುದು, ಎಂದರೆ:-

(ಎ) 36ಡಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಸೂಲಿ ಅಧಿಕಾರಿಯಾಗಿ ನೇಮಕವಾಗುವುದಕ್ಕೆ ಇರಲೇಬೇಕಾದ ಅರ್ಹತೆಗಳು;

(ಬಿ) 36ಎಂ. ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳು ಮತ್ತು ಇತರ ನೌಕರರ ವೇತನಗಳು ಮತ್ತು ಭತ್ಯೆಗಳು ಹಾಗೂ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು;

(ಸಿ) 36ಎನ್ ಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಪ್ರಿಸೈಡಿಂಗ್ ಅಧಿಕಾರಿಗಳ ವೇತನಗಳು ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು; ಮತ್ತು

(ಡಿ) 36ಐ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣಗಳ ಪ್ರಿಸೈಡಿಂಗ್ ಅಧಿಕಾರಿಗಳ ದುರ್ನಡತೆ ಅಥವಾ ಅಸಮರ್ಥತೆಯ ತನಿಖೆಯ ವಿಧಾನ.

**55. ವಿನಿಯಮಗಳನ್ನು ರಚಿಸಲು ಮಂಡಲಿಯ ಅಧಿಕಾರ.**- (1) ಮಂಡಲಿಯು ರಿಸರ್ವ್ ಬ್ಯಾಂಕಿನ ಪೂರ್ವಾನುಮೋದನೆ ಪಡೆದು ಮತ್ತು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಯಾವ ವಿಷಯಗಳ ಬಗ್ಗೆ ವ್ಯವಸ್ಥೆ ಮಾಡುವುದು ಅವಶ್ಯ ಅಥವಾ ವಿಹಿತವಾಗಿರುವುದೋ ಆ ಎಲ್ಲಾ ವಿಷಯಗಳಿಗೆ ವ್ಯವಸ್ಥೆ ಮಾಡಲು ಈ ಅಧಿನಿಯಮಕ್ಕೆ ಅಸಂಗತವಾಗಿಲ್ಲದ ವಿನಿಯಮಗಳನ್ನು ರಚಿಸಬಹುದು.

(2) ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ವಿನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಅವುಗಳ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ : -

(ಎ) 7ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ಮಂಡಲಿ ಅಥವಾ ಅದರ ಸಮಿತಿಗಳ ಸಭೆಗಳಿಗೆ ಹಾಜರಾಗಲು ನಿರ್ದೇಶಕರಿಗೆ ಸಂದಾಯ ಮಾಡಬಹುದಾದ ಫೀಜುಗಳು ಮತ್ತು ಭತ್ಯಗಳು;

(ಎಎ) 6ನೇ ಪ್ರಕರಣದ (1)ನೇ ಉಪ ಪ್ರಕರಣದ (ಸಿಎ) ಖಂಡದ ಮೇರೆಗೆ ನಿರ್ದೇಶಕರುಗಳು ಆಯ್ಕೆಯಾಗತಕ್ಕ ರೀತಿ;

(ಬಿ) ಮಂಡಲಿಯು ಸಭೆ ಸೇರತಕ್ಕ ವೇಳೆ ಮತ್ತು ಸ್ಥಳ ಮತ್ತು 11ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಿಸಿ ಅನುಸರಿಸತಕ್ಕ ಪ್ರಕ್ರಿಯಾ ನಿಯಮಗಳು;

(ಸಿ) ಕಾರ್ಯಕಾರಿ ಸಮಿತಿ ಒಳಗೊಳ್ಳಬಹುದಾದ ಸದಸ್ಯರ ಸಂಖ್ಯೆ, ಅದು ನಿರ್ವಹಿಸತಕ್ಕ ಪ್ರಕಾರ್ಯಗಳು ಮತ್ತು ಅದು ಸಭೆ ಸೇರತಕ್ಕ ವೇಳೆ ಮತ್ತು ಸ್ಥಳ ಮತ್ತು 12ನೇ ಪ್ರಕರಣದ ಮೇರೆಗೆ ಕಾರ್ಯಕಲಾಪ ನಿರ್ವಹಣೆಯಲ್ಲಿ ಅನುಸರಿಸತಕ್ಕ ಪ್ರಕ್ರಿಯಾ ನಿಯಮಗಳು;

(ಡಿ) 15ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ಬಂಧ ಪತ್ರಗಳು ಮತ್ತು ಡಿಬೆಂಚರುಗಳ ನೀಡಿಕೆ ಮತ್ತು ವಿಮೋಚನೆಯ ವಿಧಾನ ಮತ್ತು ನಿಬಂಧನೆಗಳು;

(ಇ) ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೊಳಪಟ್ಟು 16ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ವಿದೇಶಿ ಕರೆನ್ಸಿಯಲ್ಲಿ ಸಾಲ ಪಡೆಯಬಹುದೋ ಆ ರೀತಿ ಮತ್ತು ಷರತ್ತುಗಳು;

(ಎಫ್) 32ನೇ ಪ್ರಕರಣದ ಮೇರೆಗೆ ವಿವರಣೆಗಳು, ಮಾಹಿತಿ ಮೊದಲಾದವನ್ನು ಯಾವ ನಮೂನೆಯಲ್ಲಿ ಒದಗಿಸತಕ್ಕುದೋ ಆ ನಮೂನೆ;

(ಎಫ್ಎ) 36ಇ ಪ್ರಕರಣದ ಮೇರೆಗೆ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ಅಂಥ ಅರ್ಜಿಗೆ ಲಗತ್ತಿಸಬೇಕಾದ ದಸ್ತಾವೇಜುಗಳು;

(ಎಫ್ಬಿ) 36ಎಫ್ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಸಾಲಿಗನಿಗೆ ಜಾರಿ ಮಾಡಬೇಕಾದ ತಗಾದೆ ನೋಟೀಸಿನ ನಮೂನೆ;

(ಎಫ್ಸಿ) 36ಜೆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸ್ವತ್ತನ್ನು ವರ್ಗಾಯಿಸತಕ್ಕ ರೀತಿ;

(ಎಫ್ಡಿ) 36ಎಸ್ ಪ್ರಕರಣ ಮೇರೆಗೆ ಅಪೀಲು ನ್ಯಾಯಾಧಿಕರಣದಲ್ಲಿ ಅಪೀಲನ್ನು ಸಲ್ಲಿಸಬೇಕಾದ ನಮೂನೆ ಮತ್ತು ಅಂಥ ಅಪೀಲಿನೊಂದಿಗೆ ಠೇವಣಿ ಇಡಬೇಕಾದ ಶುಲ್ಕದ ಮೊತ್ತ;

(ಜಿ) 37ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಸೃಜಿಸಬೇಕಾದ ವಿಶೇಷ ನಿಧಿ, ಮೀಸಲು ನಿಧಿ ಮತ್ತು ಇತರ ನಿಧಿಗಳು;

(ಹೆಚ್) 38ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಯಾವ ನಮೂನೆ ಮತ್ತು ರೀತಿಯಲ್ಲಿ ಸಂತುಲನ ಪತ್ರ ಮತ್ತು ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿ ಇಡತಕ್ಕುದೋ ಆ ನಮೂನೆ ಮತ್ತು ರೀತಿ;

(ಐ) 43ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ಇತರ ಸದಸ್ಯರ ಕರ್ತವ್ಯಗಳು ಮತ್ತು ನಡತೆ, ಸಂಬಳಗಳು, ಭತ್ಯೆಗಳು ಮತ್ತು ಸೇವಾ ಷರತ್ತುಗಳು;

(ಜೆ) 43ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ಇತರ ಸದಸ್ಯರ ಪ್ರಯೋಜನಕ್ಕಾಗಿ ಭವಿಷ್ಯ ನಿಧಿ ಮತ್ತು ಯಾವುದೇ ಇತರ ನಿಧಿಯ ಸ್ಥಾಪನೆ ಮತ್ತು ನಿರ್ವಹಣೆ; ಮತ್ತು

(ಜೆಎ) 47ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಾಮನಿರ್ದೇಶನವನ್ನು ಮಾಡಬಹುದಾದ ರೀತಿ;

(ಕೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಮಂಡಲಿಯು ರಚಿಸತಕ್ಕ ಯಾವುದೇ ವಿನಿಯಮವನ್ನು ರಿಸರ್ವ್ ಬ್ಯಾಂಕು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ಸ್ಥಾಪನೆಯ ದಿನಾಂಕದಿಂದ ಮೂರು ತಿಂಗಳು ಮುಗಿಯುವುದಕ್ಕೆ ಮುಂಚೆ ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಿ ರಚಿಸಬಹುದು, ಮತ್ತು ಹಾಗೆ ರಚಿಸಿದ ಯಾವುದೇ ವಿನಿಯಮವನ್ನು ಮಂಡಲಿಯು ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಚಲಾಯಿಸಿ ವ್ಯತ್ಯಾಸಗೊಳಿಸಬಹುದು ಮತ್ತು ರದ್ದುಗೊಳಿಸಬಹುದು.

(4) ವಿನಿಮಯಗಳನ್ನು ರಚಿಸಲು ಈ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರವು, ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿನ ದಿನಾಂಕದಿಂದ ಈ ವಿನಿಯಮಗಳಿಗೆ ಅಥವಾ ಅವುಗಳ ಪೈಕಿ ಯಾವುದೇ ವಿನಿಯಮಕ್ಕೆ ಪೂರ್ವಾನ್ವಯ ಪರಿಣಾಮ ಕೊಡುವ ಅಧಿಕಾರವನ್ನು ಒಳಗೊಂಡಿರತಕ್ಕುದು, ಆದರೆ, ಅಂಥ ವಿನಿಯಮವು ಯಾವ ವ್ಯಕ್ತಿಗೆ ಅನ್ವಯವಾಗುವುದೋ ಆ ಯಾವನೇ ವ್ಯಕ್ತಿಯ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿ ಬಾಧಕವಾಗುವ ಹಾಗೆ ಅಂಥ ವಿನಿಯಮಕ್ಕೆ ಪೂರ್ವಾನ್ವಯ ಪರಿಣಾಮ ಕೊಡತಕ್ಕುದಲ್ಲ.

(5) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮಗಳು, ವಿನಿಯಮ ಅಥವಾ ಯೋಜನೆಯನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಎರಡೂ ಸದನಗಳು ಆ ನಿಯಮದಲ್ಲಿ, ವಿನಿಯಮದಲ್ಲಿ ಅಥವಾ ಯೋಜನೆಯಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿಕೊಂಡರೆ ಅಥವಾ ಎರಡೂ ಸದನಗಳು ಆ ನಿಯಮವನ್ನು, ವಿನಿಯಮವನ್ನು ಅಥವಾ ಯೋಜನೆಯನ್ನು ಮಾಡಕೂಡದೆಂದು ಒಪ್ಪಿಕೊಂಡರೆ, ಆ ನಿಯಮವು, ವಿನಿಯಮವು ಅಥವಾ ಯೋಜನೆಯು ಆ ತರುವಾಯ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ, ವಿನಿಯಮದ ಅಥವಾ ಯೋಜನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**56. ಕೆಲವು ಅಧಿನಿಯಮಿತಿಗಳ ತಿದ್ದುಪಡಿ.**- ಈ ಅಧಿನಿಯಮದ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಅಧಿನಿಯಮಿತಿಗಳನ್ನು, ಅದರಲ್ಲಿ ಉಪಬಂಧಿಸಿರುವ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕುದು ಮತ್ತು ಆ ಅನುಸೂಚಿಯಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ಅಂಥ ತಿದ್ದುಪಡಿಗಳು, 3ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸ್ಥಾಪನೆಯ ದಿನಾಂಕದಂದು ಮತ್ತು ಅಂದಿನಿಂದ ಪರಿಣಾಮಕಾರಿಯಾಗತಕ್ಕುದು.

**57. ತೊಂದರೆಗಳನ್ನು ನಿವಾರಿಸಲು ಅಧಿಕಾರ.**- ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದ ಆದೇಶದ ಮೂಲಕ ಆ ತೊಂದರೆಯನ್ನು ನಿವಾರಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಈ ಅಧಿನಿಯಮದ ಪ್ರಾರಂಭದಿಂದ ಮೂರು ವರ್ಷಗಳ ಅವಧಿ ಮುಗಿದ ತರುವಾಯ ಮಾಡತಕ್ಕುದಲ್ಲ.

## ಮೊದಲನೇ ಅನುಸೂಚಿ

[44(2)ನೇ ಪ್ರಕರಣ ನೋಡಿ]

### ನಂಬಿಕೆ ಮತ್ತು ರಹಸ್ಯದ ಬಗ್ಗೆ ಘೋಷಣೆ

.......ಆದ ನಾನು, ಸಂದರ್ಭಾನುಸಾರ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ನಿರ್ದೇಶಕನಾಗಿ, ......ಸಮಿತಿಯ ಸದಸ್ಯನಾಗಿ, ಲೆಕ್ಕಪರಿಶೋಧಕನಾಗಿ, ಸಲಹೆಗಾರನಾಗಿ, ಅಧಿಕಾರಿಯಾಗಿ ಅಥವಾ ಇತರ ನೌಕರನಾಗಿ ಅಗತ್ಯವಾಗಿ ನೆರವೇರಿಸತಕ್ಕ ಮತ್ತು ಸದರಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ನಾನು ಧಾರಣಮಾಡಿದ ಪದ ಅಥವಾ ಸ್ಥಾನಕ್ಕೆ ಯುಕ್ತವಾಗಿ ಸಂಬಂಧಪಟ್ಟ ಕರ್ತವ್ಯಗಳನ್ನು ವಿಶ್ವಾಸಪೂರ್ವಕವಾಗಿಯೂ, ನಿಷ್ಠೆಯಿಂದಲೂ ಮತ್ತು ನನ್ನ ಕಾರ್ಯಕೌಶಲ್ಯ ಮತ್ತು ಸಾಮರ್ಥ್ಯಾನುಸಾರ ನಿರ್ವಹಿಸುವೆನೆಂದು ಮತ್ತು ನೆರವೇರಿಸುವೆನೆಂದು ಈ ಮೂಲಕ ಘೋಷಿಸುತ್ತೇನೆ.

ಇದಲ್ಲದೆ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ವ್ಯವಹಾರಗಳಿಗೆ ಸಂಬಂಧಿಸಿದ ಯಾವ ಮಾಹಿತಿಯನ್ನು ಪಡೆಯಲು ಯಾವ ವ್ಯಕ್ತಿಯು ಕಾನೂನು ಸಮ್ಮತವಾಗಿ ಹಕ್ಕುಳ್ಳವನಾಗಿಲ್ಲವೋ ಆ ಯಾವನೇ ವ್ಯಕ್ತಿಗೆ ಆ ಯಾವುದೇ ಮಾಹಿತಿಯನ್ನು ನಾನು ತಿಳಿಸುವುದಿಲ್ಲವೆಂದು ಅಥವಾ ತಿಳಿಸಲು ಅನುಮತಿಸುವುದಿಲ್ಲವೆಂದು ಅಥವಾ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸೇರಿದ ಅಥವಾ ಅದರ ಸ್ವಾಧೀನದಲ್ಲಿರುವ ಮತ್ತು ಸದರಿ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿನ ವ್ಯವಹಾರಗಳಿಗೆ ಅಥವಾ ಸದರಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನೊಡನೆ ಯಾವುದೇ ವ್ಯವಹಾರವನ್ನು ಹೊಂದಿರುವ ಯಾರೇ

ವ್ಯಕ್ತಿಯ ವ್ಯವಹಾರಕ್ಕೆ ಸಂಬಂಧಿಸಿದ ಯಾವುವೇ ಪುಸ್ತಕಗಳು ಅಥವಾ ದಸ್ತಾವೇಜುಗಳನ್ನು ಪರಿಶೀಲಿಸಲು ಅಥವಾ ನೋಡಲು ನಾನು ಅಂಥ ಯಾವನೇ ವ್ಯಕ್ತಿಗೆ ಅವಕಾಶಕೊಡುವುದಿಲ್ಲವೆಂದೂ ಘೋಷಿಸುತ್ತೇನೆ.

ನನ್ನ ಸಮಕ್ಷಮ ಸಹಿ ಮಾಡಲಾಗಿದೆ. ಸಹಿ

**ಎರಡನೇ ಅನುಸೂಚಿ**

**[56ನೇ ಪ್ರಕರಣ ನೋಡಿ]**

**ಕೆಲವು ಅಧಿನಿಯಮಿತಿಗಳಿಗೆ ತಿದ್ದುಪಡಿಗಳು**

**ಭಾಗ - I**

**ಭಾರತ ರಿಸರ್ವ್‌ಬ್ಯಾಂಕ್ ಅಧಿನಿಯಮ, 1934 - ಇದಕ್ಕೆ ತಿದ್ದುಪಡಿಗಳು**

**(1934ರ 2)**

**ತಿದ್ದುಪಡಿಗಳು**

1. 2ನೇ ಪ್ರಕರಣದಲ್ಲಿ (ಸಿಸಿಸಿ) ಖಂಡದ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕುದು, ಎಂದರೆ :-

"(ಸಿಸಿಸಿಸಿ) "ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು" ಎಂದರೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕ್ ಅಧಿನಿಯಮ, 1987ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು."

2. 17ನೇ ಪ್ರಕರಣದಲ್ಲಿ,-

(i) (4ಡಿ) ಖಂಡದ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕುದು, ಎಂದರೆ :-

"(4ಡಿಡಿ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಸಾಲಗಳು ಮತ್ತು ಮುಂಗಡಗಳನ್ನು ಕೊಡುವ ಮತ್ತು ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿಗೆ ಕೇಂದ್ರ ಮಂಡಲಿಯು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಿಬಂಧನೆಗಳ ಮೇಲೆ ಸಾಮಾನ್ಯವಾಗಿ ನೆರವು ನೀಡುವುದು";

(ii) (4ಜಿ) ಖಂಡದ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕುದು, ಎಂದರೆ:-

"(4ಜಿಜಿ) 46ಡಿ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಗೃಹ ನಿರ್ಮಾಣ ಸಾಲದ (ದೀರ್ಘಾವಧಿ ಕಾರ್ಯಾಚರಣೆ) ನಿಧಿಯಿಂದ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸಾಲಗಳು ಮತ್ತು ಮುಂಗಡಗಳನ್ನು ನೀಡುವುದು ಮತ್ತು ಆ ಬ್ಯಾಂಕಿನ ಬಂಧಪತ್ರಗಳು ಮತ್ತು ಡಿಬೆಂಚರುಗಳನ್ನು ಖರೀದಿಸುವುದು";

(iii) (8ಎ) ಖಂಡದ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕುದು, ಎಂದರೆ:-

"(8ಎಎ) ಯಾವುದೇ ಹಣಕಾಸಿನ ಸಂಸ್ಥೆಯನ್ನು ಅದರ ಸಹಾಯಕ ಅಥವಾ ಇತರ ರೀತಿಯ ಸಂಸ್ಥೆಯಾಗಿ ಅದರ ಸಂವರ್ಧನೆ, ಸ್ಥಾಪನೆ ಮತ್ತು ಸಮರ್ಥನೆಯಲ್ಲಿ ಸಂವರ್ಧಿಸುವುದು, ಸ್ಥಾಪಿಸುವುದು, ಸಮರ್ಥಿಸುವುದು ಅಥವಾ ನೆರವು ನೀಡುವುದು."

3.42ನೇ ಪ್ರಕರಣದ (1)ನೇ ಉಪ-ಪ್ರಕರಣದ ವಿವರಣೆಯಲ್ಲಿ, (ಸಿ) ಖಂಡದ (ii)ನೇ ಉಪಖಂಡದಲ್ಲಿ, "ಅಥವಾ ಪುನರ್ ನಿರ್ಮಾಣ ಬ್ಯಾಂಕಿನಿಂದ" ಎಂಬ ಪದಗಳ ತರುವಾಯ "ಅಥವಾ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಿಂದ" ಎಂಬ ಪದಗಳನ್ನು ಸೇರಿಸತಕ್ಕುದು.

4. **ರಾಷ್ಟ್ರೀಯ ಗೃಹನಿರ್ಮಾಣದ ಸಾಲದ (ದೀರ್ಘಾವಧಿ ಕಾರ್ಯಾಚರಣೆ) ನಿಧಿ.**- 46ಸಿ ಪ್ರಕರಣದ ತರುವಾಯ, ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕುದು, ಎಂದರೆ:-

" 46ಡಿ (1) ಬ್ಯಾಂಕು, ರಾಷ್ಟ್ರೀಯ ಗೃಹ ನಿರ್ಮಾಣ ಸಾಲದ (ದೀರ್ಘಾವಧಿ ಕಾರ್ಯಾಚರಣೆ) ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸಿ ನಿರ್ವಹಿಸತಕ್ಕುದು ಮತ್ತು ಅದು ಅವಶ್ಯವೆಂದು ಪರಿಗಣಿಸಬಹುದಾದಂಥ ಹಣದ ಮೊತ್ತಗಳನ್ನು ಪ್ರತಿ ವರ್ಷ ಅದಕ್ಕೆ ಜಮೆ ಮಾಡತಕ್ಕುದು.

(2) ಸದರಿ ನಿಧಿಯಲ್ಲಿರುವ ಮೊಬಲಗನ್ನು ಬ್ಯಾಂಕು ಈ ಕೆಳಕಂಡ ಉದ್ದೇಶಗಳಿಗೆ ಮಾತ್ರ ವಿನಿಯೋಗಿಸತಕ್ಕುದು, ಎಂದರೆ :-

(ಎ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಯಾವುದೇ ವ್ಯವಹಾರದ ಉದ್ದೇಶಕ್ಕಾಗಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸಾಲಗಳು ಮತ್ತು ಮುಂಗಡಗಳನ್ನು ನೀಡುವುದು;

(ಬಿ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಹೊರಡಿಸಿದ ಬಂಧಪತ್ರಗಳು ಮತ್ತು ಡಿಬೆಂಚರುಗಳನ್ನು ಖರೀದಿಸುವುದು".

## ಭಾಗ - II

## ಬ್ಯಾಂಕಿಂಗ್ ರೆಗ್ಯೂಲೇಷನ್ ಅಧಿನಿಯಮ ಇದಕ್ಕೆ ತಿದ್ದುಪಡಿಗಳು, 1949 (1949 ರ 10)

### ತಿದ್ದುಪಡಿಗಳು

1. 5ನೇ ಪ್ರಕರಣದಲ್ಲಿ (ಎಫ್‌ಎಫ್‌ಸಿ) ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಎಫ್‌ಎಫ್‌ಡಿ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು" ಎಂದರೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಅಧಿನಿಯಮ, 1987ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ;

2. 18ನೇ ಪ್ರಕರಣದ (1)ನೇ ಉಪ-ಪ್ರಕರಣದ ವಿವರಣೆಯಲ್ಲಿ,- (ಎ) ಖಂಡದ (ii)ನೇ ಉಪಖಂಡದಲ್ಲಿ "ಅಥವಾ ಪುನರ್‌ನಿರ್ಮಾಣ ಬ್ಯಾಂಕಿನಿಂದ" ಎಂಬ ಪದಗಳ ತರುವಾಯ "ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಿಂದ" ಎಂಬ ಪದಗಳನ್ನು ಸೇರಿಸತಕ್ಕುದು.

3. 34ಎ ಪ್ರಕರಣದಲ್ಲಿ, (3)ನೇ ಉಪ-ಪ್ರಕರಣದಲ್ಲಿ, "ಪುನರ್ ನಿರ್ಮಾಣ ಬ್ಯಾಂಕು" ಎಂಬ ಪದಗಳ ತರುವಾಯ "ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು" ಎಂಬ ಪದಗಳನ್ನು ಸೇರಿಸತಕ್ಕುದು.

4. 36ಎಡಿ ಪ್ರಕರಣದಲ್ಲಿ, (3)ನೇ ಉಪ-ಪ್ರಕರಣದಲ್ಲಿ, "ಪುನರ್ ನಿರ್ಮಾಣ ಬ್ಯಾಂಕು" ಎಂಬ ಪದಗಳ ತರುವಾಯ "ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು" ಎಂಬ ಪದಗಳನ್ನು ಸೇರಿಸತಕ್ಕುದು.

5. 56ನೇ ಪ್ರಕರಣದ, (ಜೆ) ಖಂಡದ ವಿವರಣೆಯಲ್ಲಿ, (ಎ) ಖಂಡದ (ii)ನೇ ಉಪಖಂಡದಲ್ಲಿ " ಪುನರ್‌ನಿರ್ಮಾಣ ಬ್ಯಾಂಕು" ಎಂಬ ಪದಗಳ ತರುವಾಯ "ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು" ಎಂಬ ಪದಗಳನ್ನು ಸೇರಿಸತಕ್ಕುದು.

## ಭಾಗ - III

## ಕೈಗಾರಿಕಾ ವಿವಾದಗಳ ಅಧಿನಿಯಮ, 1947- ಇದಕ್ಕೆ ತಿದ್ದುಪಡಿ

## (1947ರ 14)

### ತಿದ್ದುಪಡಿ

2ನೇ ಪ್ರಕರಣದಲ್ಲಿ, (ಎ) ಖಂಡದಲ್ಲಿ, (i)ನೇ ಉಪಖಂಡದಲ್ಲಿ, "ಭಾರತದ ಕೈಗಾರಿಕಾ ಪುನರ್ ನಿರ್ಮಾಣ ಬ್ಯಾಂಕು" ಎಂಬ ಪದಗಳ ತರುವಾಯ "ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಅಧಿನಿಯಮ, 1987ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಸೇರಿಸತಕ್ಕುದು.

## ಭಾಗ – IV

### ಬೋನಸ್ ಸಂದಾಯ ಅಧಿನಿಯಮ, 1965 ಇದಕ್ಕೆ ತಿದ್ದುಪಡಿ

### (1965ರ 21)

### ತಿದ್ದುಪಡಿ

32ನೇ ಪ್ರಕರಣದಲ್ಲಿ, (ix)ನೇ ಖಂಡದಲ್ಲಿ, (ಎಫ್) ಉಪಖಂಡದ ತರುವಾಯ, ಈ ಕೆಳಕಂಡ ಉಪಖಂಡವನ್ನು ಸೇರಿಸತಕ್ಕುದು, ಎಂದರೆ:–

"(ಎಫ್‌ಎಫ್) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ; ".

## ಮೂರನೇ ಅನುಸೂಚಿ

### (16ಎ ಪ್ರಕರಣವನ್ನು ನೋಡಿ)

### ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ ಅಧಿನಿಯಮ, 1987ರ 16ಎ ಪ್ರಕರಣದಲ್ಲಿ ಉಲ್ಲೇಖಿಸಿದ ಘೋಷಣೆ

ಸ್ಥಳ :

ದಿನಾಂಕ:

——————————ಎಂಬ ನಾನು/ ನಾವು, ಈ ಮೂಲಕ ಘೋಷಿಸುವುದೇನೆಂದರೆ, ನನ್ನ/ನಮ್ಮ ಕೋರಿಕೆಯಂತೆ ನನಗೆ/ನಮಗೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಮಂಜೂರು ಮಾಡಿದ ನೆರವಿಗೆ ಪ್ರತಿಯಾಗಿ ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದಂತೆ, ನಾನು/ನಾವು, ಸದರಿ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದ ಸ್ಥಿರ ಸ್ವತ್ತು ಮತ್ತು ಸದರಿ ನೆರವಿಗಾಗಿ ಭದ್ರತೆಯಾಗಿರತಕ್ಕದ್ದೆಂಬುದನ್ನು ಒಪ್ಪಿಕೊಳ್ಳುತ್ತೇನೆ/ಒಪ್ಪಿಕೊಳ್ಳುತ್ತೇವೆ: ಮತ್ತು ನಾನು/ನಾವು, ಮೇಲೆ ಹೇಳಿದ ನೆರವಿಗೆ ಸಂಬಂಧಿಸಿದ ಬಾಕಿಗಳೂ ಕೂಡ, ಈ ಪತ್ರಗಳ ದಿನಾಂಕದಂದು ಮತ್ತು ದಿನಾಂಕದಿಂದ, ಸದರಿ ಸ್ಥಿರ ಸ್ವತ್ತಿನ ಮೇಲೆ ಋಣಭಾರವಾಗಿರತಕ್ಕದ್ದೆಂಬುದನ್ನು ಒಪ್ಪಿಕೊಳ್ಳುತ್ತೇನೆ/ತ್ತೇವೆ.

1. ————————————

(ಸಾಲಿಗ)

ಇವರು ಸಹಿ ಮಾಡಿದ್ದಾರೆ ಮತ್ತು ಕೊಟ್ಟಿದ್ದಾರೆ.

2. ————————————

(ಜಾಮೀನುದಾರ)

ಇವರು ಸಹಿ ಮಾಡಿದ್ದಾರೆ ಮತ್ತು ಕೊಟ್ಟಿದ್ದಾರೆ.

ಅನುಬಂಧ

I ನೆರವಿನ ವಿವರಗಳು

II ಸ್ಥಿರ ಸ್ವತ್ತಿನ ಬಗ್ಗೆ ವಿವರಗಳು.

* * * *